ಕರ್ಮವೀರ

ಸಂಪಾದಕರು:
ಹ. ರಾ. ಪುರೋಹಿತ, ಎಂ. ಎ.

ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ

Editor,
H. R. PUROHIT, M. A.

— [ಸಂಪುಟ ೧೯] — ಹುಬ್ಬಳ್ಳಿ ಸೋಮವಾರ ತಾರೀಖು ೨೬—೧—೧೯೪೮ — [ಸಂಚಿಕೆ ೪೦] —

ಕಾಶ್ಮೀರದ ಕುರುಕ್ಷೇತ್ರದಲ್ಲಿ ಭಾರತದ ಧರ್ಮಯುದ್ಧ

ಕಾಶ್ಮೀರದ ಕಲುಷಿತ ಪರಿಸ್ಥಿತಿ — ಅರಸನ ನ್ಯಾಯಮಾರ್ಗ — ಪಾಕಿಸ್ತಾನದ ದ್ರೋಹಬುದ್ಧಿ — ಅಂತರ್ರಾಷ್ಟ್ರೀಯ ಕಾಯದೆಗಳಿಂದ ಹಿಂದೀ ಧೋರಣದ ಸಮರ್ಥನೆ —

ತಟಸ್ಥವಾಗಿ ಉಳಿಯಬೇಕಾಗಿದ್ದ ಮಿತ್ರರಾಷ್ಟ್ರವೆನಿಸಿದ ಪಾಕಿಸ್ತಾನ ಸರಕಾರವು ನಾನಾ ಮುಖಗಳಿಂದ ಕಾಶ್ಮೀರದ ಪರಿಸ್ಥಿತಿಯನ್ನು ಹದಗೆಡಿಸಿ ಅಲ್ಲದ ಸಲ್ಲದ ಸಾಧನೆ ಮಾಡುತ್ತ, ಹಿಂದುಸ್ತಾನದ ವಿರುದ್ಧ ಬೊಬ್ಬೆ ಹಾಕುತ್ತಿರುವದನ್ನು ಖಂಡಿಸಿ, ಅದು ಸ್ವತಃ ವಿವಿಧ ಚಟುವಟಿಕೆಗಳಿಂದ ದಾಳಿಯಲ್ಲಿ ಭಾಗವಹಿಸುತ್ತಿರುವುದರ ವಿರುದ್ಧ ಭಾರತವು ಭದ್ರತಾ ಮಂಡಲಕ್ಕೆ ದೂರು ಕೊಟ್ಟಿದೆ. ಪಾಕಿಸ್ತಾನವು ಕೇವಲ ಒಣ ಹಂಬಲಿಂದ, ಧಾರ್ಮಿಕ ಅಂಧಶತತ್ವದಿಂದ ಹುಟ್ಟಿದ ರಾಜ್ಯವಿದ್ದು, ಆರ್ಥಿಕ ದೃಷ್ಟಿಯಿಂದ ತನ್ನ ಕಾಲ ಮೇಲೆ ತಾನು ನಿಲ್ಲಲಾರದೆ, ಪ್ರಜಾದೃಷ್ಟಿಯನ್ನು ಅನ್ಯಾಸಕ್ತಗೊಳಿಸಿ ಮಾಡುವುದರ ಸಲುವಾಗಿ ಹೇಗೆ ಹಿಂದುಸ್ತಾನವನ್ನು ಕಾಶ್ಮೀರದ ಮೂಲಕ ಕೆಣಕಿ, ಕಾಲು ಕೆದರಿ ಜಗಳ ಹೂಡಿದೆಯೆಂಬುದನ್ನು ಈ ಕೆಳಗೆ ವಿಶದೀಕರಿಸಲಾಗಿದೆ.

ಕಾಶ್ಮೀರದ ಪ್ರಶ್ನೆ ಇಂದು ಹಿಂದೀ ಸರಕಾರದ ತಲೆ ತಿನ್ನ ಹತ್ತಿದೆ. ಹಿಂದು ಅರಸನ ಆಳಿಕೆಯಲ್ಲಿ ಬಹುಸಂಖ್ಯಾಕ ಮುಸ್ಲಿಮರಿರುವ ಈ ಸಂಸ್ಥಾನದ ಸಮಸ್ಯೆಯಲ್ಲಿ ಹಿಂದುಸ್ತಾನ ಪಾಕಿಸ್ತಾನಗಳ ತುಮುಲ ನಡೆಯುತ್ತಿರುವುದು ಜಗತ್ತಿನ ಲಕ್ಷ್ಯವನ್ನೇ ಆಕರ್ಷಿಸಿಬಿಟ್ಟಿದೆ. ಹಿಂದುಸ್ತಾನವು ಈ ಪ್ರಶ್ನೆಯಲ್ಲಿ ಕೈಹಾಕಿದ್ದೇಕೆ, ಪಾಕಿಸ್ತಾನಕ್ಕೆ ಇದರಲ್ಲಿ ತಲೆ ಹಾಕಲು ಯಾವ ಅವಶ್ಯಕತೆಯಿದೆ; ಇದರಲ್ಲಿ ಕಾಶ್ಮೀರದ ಅರಸ, ಅಲ್ಲಿಯ ಬಹುಸಂಖ್ಯಾಕ ಪ್ರಜೆಗಳು; ಹಿಂದೀ ಸರಕಾರ, ಪಾಕಿಸ್ತಾನ ಸರಕಾರ ಈ ಪಕ್ಷಗಳ ಬಲಾಬಲ, ಸ್ಥಾನದ ಸಮರ್ಥನೀಯ— ಅಸಮರ್ಥನೀಯತೆ; ಲಾಭ ಹಾನಿ ಇವುಗಳೇನು ಎಂಬುದನ್ನು ವಿವೇಚಿಸಿದ ಹೊರತು ವಸ್ತುಸ್ಥಿತಿಯು ಅರಿವಾಗಲಾರದು. ಆದುದರಿಂದ ಪ್ರಸ್ತುತ ಪ್ರಶ್ನೆಯ ವಿವಿಧ ಮುಖಗಳನ್ನು ಸಂಕ್ಷೇಪವಾಗಿ ಇಲ್ಲಿ ವಿವರಿಸೋಣ.

ಮೊದಲ ಕತೆ

ಹಿಂದೀ ಒಕ್ಕೂಟಕ್ಕೆ ಅನೇಕ ಸಂಸ್ಥಾನಿಕರು ಸೇರುತ್ತಿರುವಾಗ ಕಾಶ್ಮೀರದ ಅರಸು ಮೀನ-ಮೇಷ ಮಾಡುತ್ತ ಕಾಲ ಕಳೆದನು. ಪ್ರಜಾಭಿಪ್ರಾಯವು ಪ್ರಜಾರಾಜ್ಯ ಬೇಕೆನ್ನುತ್ತಿತ್ತು. ಹಿಂದುಸ್ತಾನವು ತಟಸ್ಥವಿದ್ದರೂ ಪಾಕಿಸ್ತಾನವು ಆ ಸಂಸ್ಥಾನ ಮುಸ್ಲಿಮ ಜನತೆಯದೆಂದೂ ಆ ಕಾರಣದಿಂದ ಅದು ಪಾಕಿಸ್ತಾನಕ್ಕೆ ಸೇರಬೇಕಾಗಿದೆಯೆಂದೂ ಆಗಲೇ ಪ್ರಚಾರಕ್ಕಾರಂಭಿಸಿತು. ಅರಸು ಅದನ್ನು ತಡೆಗಟ್ಟಲು ಯತ್ನಿಸಿದಷ್ಟೂ ಅದು ಪ್ರಬಲವಾಗುತ್ತ ಹೋಯಿತು. ಸಂಸ್ಥಾನದ ತಲೆ ತಿರುಕ ಮುಸಲ್ಮಾನರು ಪಾಕಿಸ್ತಾನದ ಬೆಂಬಲದಿಂದ ಸ್ವತಂತ್ರ ಕಾಶ್ಮೀರ ಸರಕಾರವೆಂಬ ಹೆಸರಿನಿಂದ ಬೊಬ್ಬೆ ಹಾಕಿ ಸಂಸ್ಥಾನದ ವಿವಿಧ ಪ್ರದೇಶಗಳಲ್ಲಿ ಕೊಲೆ, ಸುಲಿಗೆಗಳನ್ನು ಪ್ರಾರಂಭಿಸಿದರು. ಇದರಿಂದ ಎಚ್ಚೆತ್ತು ಅರಸನು ಪ್ರಜಾಮುಖಂಡನಾದ ಶೇಖ ಅಬ್ದುಲ್ಲಾ ಎಂಬವನೊಡನೆ ಆಪ್ತಾಲೋಚನೆ ನಡೆಸಿ ಸೇರ್ಪಡೆಯ ಪತ್ರದ ಪ್ರಕಾರ ಹಿಂದೀ ಒಕ್ಕೂಟಕ್ಕೆ ಸೇರಿ ದಂಗೆಯನ್ನಡಗಿಸಲು ಹಿಂದುಸ್ತಾನದ ಸಹಾಯವನ್ನು ಯಾಚಿಸಿದ್ದು ಸ್ಪಷ್ಟವಿದೆ. ಅದರಂತೆ ಹಿಂದೀ ಸರಕಾರವು ಅಲ್ಲಿಗೆ ತನ್ನ ಸೈನ್ಯವನ್ನು ಕಳುಹಿ ದಂಗೆಯನ್ನು ಸದೆಬಡಿಯುತ್ತಿದೆ. ಧರ್ಮಭೇದವಿಲ್ಲದೆ ಸರ್ವರ ಮುಖಂಡನೆನಿಸಿದ ಶೇಖ ಅಬ್ದುಲ್ಲಾ ಎಂಬವನ ನೇತೃತ್ವದಲ್ಲಿಂದು ಕಾಶ್ಮೀರದಲ್ಲಿ ಪ್ರಜಾರಾಜ್ಯದ ನಡುಗಾಲ ಸರಕಾರವು ಸ್ಥಾಪಿತವಾಗಿದೆ. ಈ ಸರಕಾರವೇ ಇಂದು ದಂಗೆಗೆ ಪಾಕಿಸ್ತಾನವು ಜನ, ಧನ, ಶಸ್ತ್ರಾಸ್ತ್ರಗಳನ್ನು ಪೂರೈಸುತ್ತಿರುವದೆಂಬುದನ್ನು ಪ್ರಮಾಣಪೂರ್ವಕವಾಗಿ ಸಿದ್ಧ ಮಾಡಿ ಜಗತ್ತಿಗೆ ತೋರಿಸಿದೆ. ಸಧ್ಯಕ್ಕೆ (ಅಂದರೆ ಜನಮತಗಣನೆಯಾಗಬೇಕೆಂದು ಹಿಂದೀ ಸರಕಾರ ಹೇಳಿದ್ದರಿಂದ) ಕಾಯದೆ ಪ್ರಕಾರ ಹಿಂದುಸ್ತಾನದ ಒಂದು ಭಾಗವೆನಿಸಿರುವ ಕಾಶ್ಮೀರದಲ್ಲಿ ಗುಪ್ತತಂತ್ರದಿಂದ ದಾಳಿ ನಡೆಯುತ್ತಿದ್ದು ಪಾಕಿಸ್ತಾನವು ಮಿತ್ರತ್ವದ ಒಪ್ಪಂದವನ್ನು ಮುರಿದು ಹಿಂದೀ ಹಿತಕ್ಕೆ ಧಕ್ಕೆಯನ್ನುಂಟು ಮಾಡಿದ್ದರ ವಿರುದ್ಧ ಭದ್ರತಾ ಮಂಡಲಕ್ಕೆ ದೂರು ಕೊಟ್ಟದ್ದೂ ಆಗಿದೆ. ಆ ದೂರಿನ ತನಿಖೆಯೂ ಪ್ರಾರಂಭವಾಗಿದೆ. ಇಷ್ಟರಲ್ಲಿ ಮೊನ್ನೆ ತಾ. ೧೭ರ ದಿನ ಲೇಕಸಕ್ಸಸದಿಂದ ಬಂದ ವರ್ತಮಾನದ ಪ್ರಕಾರ ಹಿಂದುಸ್ತಾನ ಮತ್ತು ಪಾಕಿಸ್ತಾನಗಳ ಪ್ರಮುಖ ಪ್ರತಿನಿಧಿಗಳ ಪ್ರಥಮ ಖಾಸಗಿ ದುಂಡು ಮೇಜಿನ ಸಭೆ ಕಾಶ್ಮೀರದ ಚರ್ಚೆಗಾಗಿ ಸೇರಿತ್ತೆಂದೂ ಆ ಚರ್ಚೆಯಲ್ಲಿ ಕಾಶ್ಮೀರದಲ್ಲಿ ಸಾರ್ವತ್ರಿಕ ಮತಗಣನೆ ನಡೆವ ಮೊದಲು ಹೊರಗಿನ ಸೈನ್ಯ ಹೊರಟು ಹೋಗಬೇಕೆಂದೂ ಶೇಖ ಅಬ್ದುಲ್ಲಾ ಸರಕಾರವನ್ನು ಪ್ರಾತಿನಿಧಿಕವೆಂದು ಒಪ್ಪುವದಿಲ್ಲವೆಂದೂ ಮುಸ್ಲಿಂ ಪರಿಷತ್ತಿಗೆ ಸ್ವಾತಂತ್ರ್ಯ ಕೊಡಬೇಕೆಂದೂ ಪಾಕಿಸ್ತಾನ ಕೇಳಿದ್ದು, ಹಿಂದುಸ್ತಾನ ಅದನ್ನು ತೀವ್ರ ವಿರೋಧಿಸಿ ಕಾಶ್ಮೀರದ ದಾಳಿಗಾರರು ಕಾಶ್ಮೀರಿಗಳೇ ಎಂಬ ಪಾಕಿಸ್ತಾನೀ ವಾದವನ್ನು ಖಂಡಿಸಿರುವದಾಗಿ ತಿಳಿಯುತ್ತದೆ.

ಜಿನ್ನಾರ ಶಕುನಿತನ

'ಇಸ್ಲಾಮಿಗೆ ಗಂಡಾಂತರ!' ಎಂಬ ಕೂಗಿನಿಂದಲೆ ಧಾರ್ಮಿಕ ಅಂಧಶ್ರದ್ಧೆ ಮತಬುದ್ಧಿಗಳನ್ನು ಉದ್ರೇಕಿಸಿ ಇಸ್ಲಾಮೀ ರಾಜ್ಯಸ್ಥಾಪನೆಯ ಚೆಂಗನನ್ನು ಮುಸಲ್ಮಾನರ ಮುಂದಿಟ್ಟು ಪಾಕಿಸ್ತಾನವನ್ನು ಸಾಧಿಸಿ, ಅದರ ಏಕಮೇವಾದ್ವಿತೀಯ ಅನಭಿಷಿಕ್ತ ಬಾದಶಹರೆನಿಸಿದ ಜಿನ್ನಾರಿಂದು— ತಮ್ಮ ರಾಜ್ಯದ ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಭೌಗೋಲಿಕ ಸುವ್ಯವಸ್ಥೆಯನ್ನು ರಚಿಸಲು ಮುಂಗಾಣದಂಥವರಾಗಿ ಹಳೆಯ ಅಸ್ತ್ರವಾದ 'ಇಸ್ಲಾಮಿಗೆ ಗಂಡಾಂತರ', ಮುಸಲ್ಮಾನರ ಹಿತಕ್ಕೆ ಅಪಾಯ' ಮುಂತಾದ ಘೋಷಣೆಗಳಿಂದ ಬಡ ಮುಸ್ಲಿಮರ ಲಕ್ಷ್ಯವನ್ನು ಯುದ್ಧಮುಖವನ್ನಾಗಿ ಮಾಡುತ್ತಿರುವದು ಸ್ವಯಂಸ್ಪಷ್ಟವಾಗಿದೆ. ಮುಸಲ್ಮಾನೇತರರ ಬಗ್ಗೆ ದ್ವೇಷ ಹುಟ್ಟಿಸಿ ಹಿಂದುಗಳ ಆಸ್ತಿಪಾಸ್ತಿಯನ್ನು ಕೊಳ್ಳೆ ಹೊಡೆದು, ಶುದ್ಧ ನಾಜೀ ಪದ್ಧತಿಯಿಂದ ಪಾಕಿಸ್ತಾನವೆಂಬ ಮುಳುಗುತ್ತಿರುವ ನೌಕೆಯನ್ನು ಆದಷ್ಟು ಕಾಲ ನಡೆಸಿಕೊಂಡು ಹೋಗಲು ಯೇನಕೇನ ಪ್ರಕಾರೇಣ ಕಪಟತಂತ್ರ, ಚಾಣಕ್ಯ ನೀತಿಗಳಿಂದ ಪ್ರಯತ್ನಿಸುವುದೇ ಜಿನ್ನಾಸಾಹೇಬರ ಪವಿತ್ರ (!) ಧ್ಯೇಯವೆಂಬುದು ಪಾಕಿಸ್ತಾನದ ಆರ್ಥಿಕ ಮೊದಲಾದ ಪರಿಸ್ಥಿತಿಗಳನ್ನು ಪರಿಶೀಲಿಸಿದರೆ ತಿಳಿದು ಬರುತ್ತದೆ.

ಪಾಕಿಸ್ತಾನದ ಕಾಯಕ

ಪಾಕಿಸ್ತಾನದಲ್ಲಿಂದು ಹಣವಿಲ್ಲ. ಅದರಿಂದಲೇ ಅದು ಹಿಂದುಸ್ತಾನದೊಡನೆ ಜಗಳ ಮಾಡಿ ತನಗೆ ಬರಬೇಕಾದ ೫೫ ಕೋಟಿ ರೂಪಾಯಿಗಳನ್ನು ಈಗಲೇ ಪಡೆಯಿತು. ನಿಜಾಮರು ಬೇರೆ ೨೦ ಕೋಟಿ ರೂಪಾಯಿ ಸಾಲ ಕೊಡಲು ಮುಂದೆ ಬಂದಿದ್ದಾರೆ. ಬ್ರಿಟಿಶ ಮತ್ತು ಅಮೇರಿಕನ ವ್ಯಾಪಾರಿಗಳಾಗಲೇ ತಮ್ಮ ಬಂಡವಾಲವನ್ನು ಹಾಕಿಕೊಂಡು ತಮ್ಮ ಲಾಭಕ್ಕಾಗಿ ವ್ಯಾಪಾರವನ್ನು ಪಾಕಿಸ್ತಾನದಲ್ಲಿ ಪ್ರಾರಂಭಿಸಲು ಹೊಂಚು ಹಾಕಿದ್ದಾರೆ. ಔದ್ಯೋಗಿಕ ಪ್ರಗತಿಗೆ ಅಗತ್ಯವಾದ ಜನ, ಧನ, ಯಂತ್ರ ಸಾಮುಗ್ರಿಗಳು, ತಜ್ಞರು ಈ ಯಾವ ಸಾಧನಗಳೂ ಸಾಕಷ್ಟಿಲ್ಲದೆ ಜನಜೀವನವನ್ನು ಸುಸ್ಥಿತಿಯಲ್ಲಿಡಲು ಪಾಕಿಸ್ತಾನಕ್ಕೆ ಸಾಧ್ಯವಾಗುತ್ತಿಲ್ಲವೆಂಬುದು ಆಗಲೇ ನಿದರ್ಶನಕ್ಕೆ ಬಂದಿದೆ. ಇದರಿಂದ ಅದು ಒಂದೇ

—೪ನೇ ಪುಟಕ್ಕೆ



ಕಾಶ್ಮೀರ ಪ್ರಶ್ನೆಯ ಇತ್ಯರ್ಥಕ್ಕಾಗಿ ಭದ್ರತಾ ಮಂಡಳಕ್ಕೆ ಹೋದ ಕಾಶ್ಮೀರದ ಸಿಂಹ ಶೇಖ ಅಬ್ದುಲ್ಲಾ ಇವರು ತಮ್ಮ ಕಾರ್ಯದರ್ಶಿಗಳೊಡನೆ

ಪರಮಾಣು ಶಕ್ತಿಯ ಸದುಪಯೋಗವೆ?

ಮಾನವಕುಲದ ಶಾಂತಿ ಸುಖ ಹೆಚ್ಚುವ ಬಗೆಯೆ?

ಲೇ:— ಟಿ. ಕೆ. ನಾಯಕ ಬಿ. ಎಸ್. ಸಿ.

[ಅಮೇರಿಕೆಯ ಇಂಜನಿಯರರಾದ ಡಿಕನ್ ಕಾರ್ಟರರೆಂಬವರು, ಪರಮಾಣು ಶಕ್ತಿಯನ್ನು ಪಿಟ್ಸಬರ್ಗ ಪಟ್ಟಣದಲ್ಲಿ ಉಪಯೋಗಿಸುವದರಿಂದಾಗುವ ಮಾರ್ಪಾಡಿನ ಚಿತ್ರವನ್ನು ರೂಪಿಸಿದ್ದಾರೆ. ೧೯೫೦ನೇ ಇಸ್ವಿಯಲ್ಲಿ ಈ ಮಾರ್ಪಾಟಿನ ವಿಮರ್ಶೆಯನ್ನು ತಾವು ಈ ಬಗೆಯಾಗಿ ಮಾಡಬಹುದೆಂದು ಅಂದಿನ ಮಾತುಗಳನ್ನು ಇಂದು ಹೀಗೆ ಹೇಳಿದ್ದಾರೆ]

ಪಿಟ್ಸಬರ್ಗ ಪಟ್ಟಣವನ್ನು ಪರಮಾಣು ಶಕ್ತಿಯುಕ್ತವಾಗುವಂತೆ ಮಾರ್ಪಡಿಸಲು ನೀವು ನಾಲ್ಕು ವರ್ಷಗಳ ಹಿಂದೆ ವಿಜ್ಞಾನಿಗಳ ಕಮಿಟಿಗೆ ಆ ಕಾರ್ಯವನ್ನು ಒಪ್ಪಿಸಿದ್ದಿರಿ. ಕಠಿಣತರವಾದ ಪ್ರಯೋಗಗಳನ್ನು ಮಾಡಿದ ನಮಗೆ ಈಗ ಕಾರ್ಯಸಾಗಿಸುವಂಥ ರೀತಿನೀತಿಗೆ ಅಂಟಿಕೊಳ್ಳುವಂತೆ ತಿಳಿಸಿದ್ದಿರಿ. ಈ ಹೊತ್ತು ೨೧ನೇ ಆಕ್ಟೋಬರ, ೧೯೫೦ನೇ ದಿವಸ ಆ ಕಾರ್ಯ ಸಂಪೂರ್ಣವಾಗಿ ಸಿದ್ಧಿಯಾಗಿದೆ. ಮತ್ತು ಅದರಂತೆ ಪಿಟ್ಸಬರ್ಗವು ಪರಮಾಣು ಪಟ್ಟಣವಾಗಿದೆ. ನಾಲ್ಕುವರ್ಷಗಳ ಪರಮಾಣು ಕ್ರಾಂತಿಯನಂತರ ಇಂದು ನಾವು ಯಶಸ್ಸನ್ನು ಹೊಂದಿದೆವೆಂದು ಅಧಿಕೃತವಾದ ಪ್ರಕಟನೆ ಕೊಟ್ಟಿರುತ್ತೇವೆ. ವಿಜ್ಞಾನಿಗಳು ತಿಳಿಹೇಳುವಂತೆ, ಇದು ವೈಜ್ಞಾನಿಕ ಭಾಷೆಯಲ್ಲಿದ್ದರೂ ಪಿಟ್ಸಬರ್ಗದಂಥ ನಗರದಲ್ಲಿಯ ನಾಗರಿಕರ ಜೀವನದಲ್ಲಿ ಪರಮಾಣುವಿನಿಂದಾದ ಬದಲಾವಣೆಯನ್ನು ಉಳಿದಜನಕೆಗೆಲ್ಲ ತಿಳಿಯುವಂತೆ ಮಾಡಿದೆ.

ಮೊದಲನೆಯದು ನಮ್ಮ ಮೂಲಭೂತ ಪ್ರಮಾಣ ಅದು ಸಾಧಾರಣವಾಗಿ ನಗರದ ಉಪನಿಲ್ದಾಣ ಹಚ್ಚಿರುವದು. ಹಾಗೂ ಅದು ಪರಮಾಣು ನಿಅಗರಾ (Atome Niagara falls)ದಂತೆ ಚಿತ್ರಿತವಾಗಿರುತ್ತದೆ. ಒಡೆದು ಚೂರುಚೂರಾದ ದೊಡ್ಡ ದಾಯಿನಾದಂತೆ ಅದರ ಹೃದಯ ಮತ್ತು ಅದರಲ್ಲಿ ಪ್ಲುಟೋನಿಯಮ್ ಧಾತುವಿನ ಪರಮಾಣು ತುಣುಕುಗಳು ೧೦ ಲಕ್ಷ ಉಷ್ಣಾಂಶದಿಂದ ಸಾಮಾನ್ಯವಾಗಿ ಕಾರ್ಯಮಾಡುವಂಥ ಪಾರಜದ ಕುದಿಯುವ ಅಳತೆಯಲ್ಲಿರುತ್ತದೆ. ಇದು ಅತಿ ಸಣ್ಣ ಪ್ರಮಾಣದಲ್ಲಿರುವದರಿಂದ ನಾವು ಇದನ್ನು ನಿಯಂತ್ರಿಸಬಹುದು. ಅತಿಯಾಗಿ ಕಾಯ್ದಂಥ ಪರಮಾಣು ಕಣಗಳು ಮೇಲೆ ಹೇಳಿದ ದೊಡ್ಡ ದಾತಿಯುಲ್ಲಿಯ ಚೂರುಗಳಲ್ಲಿ ಹೊಕ್ಕು ಭಯಂಕರವಾದ ಉಷ್ಣತೆಯನ್ನು ಪ್ರಕಟಿಸುತ್ತವೆ. ಕರುಗಿ ಅತಿ ತೀವ್ರ ಹರಿಯುವಂಥ ಬಿಸ್‌ಮತ್ ಧಾತುವಿನಿಂದ ಆ ಶಕ್ತಿಯು ಬೇರೆಕಡೆಗೆ ಒಯ್ಯಲ್ಪಡುತ್ತದೆ. ಉಷ್ಣತೆಯನ್ನು ಮಾರ್ಪಡಿಸುವ (Heat exchange) ಯಂತ್ರವು ಭೀಕರವಾದ, ಕಿರಣಗಳಿಂದ ರಕ್ಷಣೆ ಮಾಡುವಂಥ ಕವಚದಿಂದ ಕೂಡಿದ್ದಾಗಿರುತ್ತದೆ. ಆ ಬಿಸಿ ಬಿಸ್‌ಮತ್‌ವು ತನ್ನ ಉಷ್ಣತೆಯನ್ನು ಪಾರಜಕ್ಕೆ ಕೊಡುತ್ತದೆ. ಆ ಹೊಳಪುಳ್ಳ ಪಾರಜವು ತೇಜಸ್ಸಿನಿಂದ ಹಾರಿಹೋಗುತ್ತದೆ. ಈ ಹಾರಿಹೋಗುತ್ತಿರುವಂಥ ಪಾರಜದಿಂದ ಭೀಕರವಾದ ಬಿರುಗಾಳಿ ಹುಟ್ಟಿ ಅಸಾಧ್ಯವಾದ ಸಪ್ಪಳ ಉತ್ಪನ್ನವಾಗುವದು. ಈ ರೀತಿಯು ಪಟ್ಟಣದಲ್ಲಿ ಬೇಕಾದೆಡೆಗೆ ಪರಮಾಣುವಿನ ನಿಅಗರಗಳನ್ನು ಇಟ್ಟಿದ್ದಾಯಿತು. ಹೊಗೆ ಹಾಗೂ ಬೆಂಕಿಯಿಂದ ನಿರ್ಲಿಪ್ತವಾದ ವಿದ್ಯುಚ್ಛಕ್ತಿಯು ಉತ್ಪನ್ನವಾಯಿತು. ಇದಕ್ಕೆ ಮಧ್ಯದಲ್ಲಿ ಹೈಡ್ರೊ ಇಲೆಕ್ಟ್ರಿಕ್ ಮೊದಲಾದ ಕೇಂದ್ರಗಳ ಕಾರಣವಿಲ್ಲ. ಉಪಕೇಂದ್ರ ಹಾಗೂ ಒಂದೆಡೆಯಿಂದ ಇನ್ನೊಂದೆಡೆಗೆ ಕಳುಹಿಸುವ ಮಾರ್ಗಗಳ ಕಾರಣವಿಲ್ಲ. ಒಂದೇ ಹೊಡೆತದಿಂದ ನಾವು ತೀವ್ರವಾಗಿ ವಿದ್ಯುಚ್ಛಕ್ತಿಯು ನಿರ್ಮಾಣವನ್ನು ಬೆಲೆಯಲ್ಲಿ ಕಡಿಮೆ ಮಾಡಿದೆವು. ನಿಜವಾಗಿ ಹೇಳಬೇಕಾದರೆ ವಿದ್ಯುಚ್ಛಕ್ತಿಯು ನೀರಿನಷ್ಟು ಸೋವಿಯಾಗಿ ಬಿಟ್ಟಿದೆ. ಪ್ರತಿಯೊಂದು ಮನೆಗೆ ಅದರ ಕರವಿರುತ್ತದೆ. ಇದರಿಂದ ಕಲ್ಲಿದ್ದಲಿ ಕಣಗಳು ಮುಳುಗಿಹೋಗುತ್ತವೆ. ಈ ಪ್ರಯೋಗವು ಹೊಗೆಸುತ್ತಿನಿಂದ ದೂರವಾಗಿರಿಸಿದ್ದಲ್ಲದೆ ಇಲ್ಲಿಯ ವಾತಾವರಣವನ್ನು ಬಹು ರಮ್ಯವಾಗಿರುವಂತೆ ಮಾಡುತ್ತದೆ. ನಿಜವಾಗಿಯೂ ಕಲ್ಲಿದ್ದಲಿಯು ಪರಮಾಣು ವಿದ್ಯುತ್ತಿನಗೂಡ ಸ್ಪರ್ಧಿಸಲು ಸಾಧ್ಯವಿಲ್ಲ. ಆದರಿಂದ ಅದಿಗಳಲ್ಲಿಯು ಕಾರ್ಯ ಬಂದಾಗುವದಲ್ಲದೇ ರಸಾಯನಿಕ ದ್ರವ್ಯಗಳಿಗಾಗಿ ಕಲ್ಲಿದ್ದಲಿಯನ್ನು, ಅತಿ ಸೋವಿಯಿಂದ, ಗ್ಯಾಸವನ್ನಾಗಿ ಮಾರ್ಪಡಿಸಿ ನೇರವಾಗಿ ಅದನ್ನುಪಯೋಗಿಸುವಂಥ ಕಾರ್ಖಾನೆಗಳಿಗೆ ಒಯ್ಯಬಹುದು. ಅದರಂತೆ ಪೆಟ್ರೋಲಿಯಮ್ ಉದ್ಯೋಗವು ಮುಳುಗಿಹೋಗಬಹುದು. ಬೆಂಕಿಯು ಸಲುವಾಗಿ ಎಂಜಿನು ಅವಶ್ಯಕತೆಯಿಲ್ಲ ಇದರ ಉತ್ಪಾದನೆಯು ಕಾಲನ್ನು ರಸಾಯನಿಕ ಕಾರ್ಯಗಳಿಗೆ ಉಪಯೋಗಿಸಬಹುದು. ಟ್ರಕ್, ಮೋಟಾರು, ವಿಮಾನ ಮೊದಲಾದವುಗಳನ್ನು ಇನ್ನು ಕೆಲವು ದಿವಸಗಳಲ್ಲಿ ಕೃತಕವಾಗಿ ತಯಾರಿಸಿದ ಬೆಂಕಿಯಿಂದ ನಡೆಸಬಹುದು. ಆ ದ್ರವ್ಯಗಳೆಂದರೆ ಹವೆ ಹಾಗು ನೀರು ಈ ದ್ರವ್ಯವು ಯುದ್ಧಕಾಲದಲ್ಲಿ ಅಮೇರಿಕೆಯಲ್ಲಿ ಪ್ರಗತಿಯನ್ನು ಹೊಂದಿತು ಇದರಲ್ಲಿ ದ್ರವರೂಪ ಎಮೋನಿಯಾದಲ್ಲಿ ನೈಟ್ರೇಟವು ಮಿಶ್ರಣ ಹೊಂದಿರುತ್ತದೆ. ವಿದ್ಯುಚ್ಛಕ್ತಿಯು ಸೋವಿಯಾಗಿ ದೊರಕುವದರಿಂದ ನೈಟ್ರೇಟ್ ಬೆಂಕಿಯು ಪ್ರಾಯೋಗಿಕವಾಗಿದೆ. ಪಿಟ್ಸಬರ್ಗದಲ್ಲಿ ವಿದ್ಯುಚ್ಛಕ್ತಿಯು ಉಷ್ಣತೆಯು ಸೋವಿಯಾಗಿದೆ ಇದರಿಂದ ಗ್ಯಾಸ ಮತ್ತು ಸಿರ್‍ಯಾಮಿಕ್ ಕಾರ್ಖಾನೆಗಳಿಗೆ ಮಾರ್ಗವಾಗಿದೆ. ಕಾಜಿನ ಯಂತ್ರಗಳು ಹುಟ್ಟುತ್ತವೆ. ಮಂಜಿನಕಾಜುಗಳು ಮನೆಮಾರುಗಳನ್ನು ಹೊದ್ದುಕೊಂಡು ಕ್ರಾಂತಿ ಮಾಡಿದೆ ಪರಮಾಣುವಿನ ಸಮೂಹದಲ್ಲಿ ಅತಿಶಯವಾದ ವಿದ್ಯುಚ್ಛಕ್ತಿಯಿಂದ ಉಷ್ಣತೆಯ ಉತ್ಪಾದನೆಯು ಅತಿ ಮಹತ್ವವಾದದ್ದು ಮುಂದೆ ಕೆಲವು ವಿಜ್ಞಾನಿಗಳು ಇದರಿಂದ ಲಾವಾ (Lava)ರಸದ ಉತ್ಪಾದನೆಯನ್ನು ಕಂಡು ನೈಸರ್ಗಿಕ ಲಾವಾಕ್ಕಿಂತ ಇದು ಹೆಚ್ಚು ಇರುವದರಿಂದಹೊಸ ಮಾರ್ಗಗಳನ್ನು ತೀವ್ರವಾಗಿ ಮಾಡಲಿಕ್ಕೆ ಅನುವಾಗುವದು. ಹಾಗೂ ಸ್ವಲ್ಪ ಪಾರದರ್ಶಕವಾದ ಕಾಜುಗಳನ್ನುಮಾಡಿ ಮಾರ್ಗದಲ್ಲಿ ಹುಗಿದಂಥ ಪ್ರಕಾಶ ದೀಪ ಮಾಡಬಹುದು. ಇಂಥ ಪ್ರಕಾಶವನ್ನು ಸಿಗ್ನಲ್ ದಂತೆ ಉಪಯೋಗಿಸಿ ಓಡಾಟವನ್ನು ನಿಯಂತ್ರಿಸಬಹುದು. ಮತ್ತು ಒಂದು ರೀತಿಯಲ್ಲಿ ವಾಹನಗಳಿಗೆ ದೀಪ ಹಚ್ಚುವ ಕಾರಣ ಬೀಳುವದಿಲ್ಲ. ಇದರಂತೆ ಪಿಟ್ಸಬರ್ಗ ಪಟ್ಟಣದ ಔದ್ಯೋಗಿಕ ಜೀವನದಲ್ಲಿ ಪರಮಾಣು ವಿದ್ಯುಚ್ಛಕ್ತಿಯ ಉಪಯೋಗದಿಂದ ಮಹತ್ವವಾದ ಬದಲಾವಣೆಗಳನ್ನು ಕಾಣಬಹುದು. ಕೆಲಸಗಾರರ ಅವಶ್ಯಕತೆಯು ಕಂಡು ಬರುವದಿಲ್ಲ. ದೂರದರ್ಶಕ (Television) ಯಂತ್ರಗಳ ಸಹಾಯದಿಂದ, ಯಾಂತ್ರಿಕ ತಜ್ಞನು ಯಂತ್ರಗಳ ಕೆಲಸವನ್ನು ಸ್ವಿಚ್ ತಿರುಗಿಸುವದರಿಂದಲೇ ಕಾಣಬಹುದು. ಈ ಶಕ್ತಿಯ ಸಹಾಯದಿಂದ ಸಾದಾ ಯುಕ್ತಿಗಳನ್ನು ಹುಡುಕಿ ಬೇಕಾದಲ್ಲಿಯ ಯಂತ್ರವನ್ನು ನಿಯಂತ್ರಣದಲ್ಲಿಡಬಹುದು ಹಾಗೂ ನೆಟ್ಟಗೆ ಮಾಡಬಹುದು. ಕೆಲಸಗಾರರಿಗೆ ದೂರದರ್ಶಕ ಯಂತ್ರ ಹಾಗೂ ವಿದ್ಯುತ್ತಿನ ಶಕ್ತಿಯನ್ನು ಕೊಟ್ಟು ಕೆಲಸ ಮಾಡಿಸಬಹುದು. ಈ ಯುಕ್ತಿಯನ್ನು ರಾಷ್ಟ್ರವೆಲ್ಲ ಅನುಸರಿಸಿದರೆ ಶ್ರಮವು ಕಮ್ಮಿಯಾಗಿ ದಿನದಲ್ಲಿ ೪ ತಾಸು ದುಡಿಯುವ ಯುಗ ಬರುತ್ತದೆ.

ಇಷ್ಟಾದ ಬಳಿಕ ಮನೆಯಲ್ಲಿ ಪರಮಾಣು ಶಕ್ತಿಯ ಉಪಯೋಗವೇನು? ಇದಕ್ಕೆ ಶ್ರೀಮತಿ ಜಿ. ಎಲ್. ಗ್ರಹಾಮಳ ಪತ್ರವು ನಿಜವಾದ ನಿದರ್ಶನವಾಗಿದೆ. ಪರಮಾಣುವಿನ ಶಕ್ತಿಯಿಂದ ಮನೆಯನ್ನು ಸ್ವಚ್ಛ ಹಾಗೂ ಅಂದ ಚೆಂದ ಇಡಲಿಕ್ಕೆ ಬರುತ್ತದೆ. ಹಗಲು ರಾತ್ರಿಯೆಲ್ಲ ಮನೆಯ ಹವೆಯಲ್ಲಿಯ ಧೂಳಿಯನ್ನು ಹಾರಿಸುತ್ತದೆ. ಮೊದಲಿನ ಹಾಗೆ ಡಸ್ಟರ್, ಕ್ಲೀನರಗಳ ಅವಶ್ಯಕತೆ ಬೀಳುವದಿಲ್ಲ. ಬೇನೆಯ ಹುಳಗಳು ಕೂಡ ನಾಶಹೊಂದುತ್ತವೆ. ಒಂದೇ ಸಮನಾದ ಉಷ್ಣತೆಯನ್ನು ಕಾಯುಲಿಕ್ಕೂ ಬರುವದರಿಂದ ಜನಗಳು ತೊಟ್ಟಿಲದಲ್ಲಿ ಮಲಗುವಂತೆ ಆರಾಮವಾಗಿ ಮಲಗುತ್ತಾರೆ. ಸ್ಟೋವ್ ಮಾಡುವ ಎಲ್ಲ ಮನೆಗೆಲಸಗಳನ್ನು ಇದರಿಂದ ಮಾಡಬಹುದು. ಅರಿವೆಗಳನ್ನು ಕೆಲ ನಿಮಿಷದಲ್ಲಿ ಒಣಗಿಸಬಹುದು. ಅಡಿಗೆ ಮಾಡುವವರು, ಕೆಲಸಗಾರರು ಅರ್ಧ ದಿನವನ್ನು ಮನೆಯಲ್ಲಿ ಕಳೆಯಬಹುದು. ವಕೀಲರು ತಮ್ಮ ಕಾರ್ಯವನ್ನು ಕುಳಿತಲ್ಲಿಯೇ ಸಾಗಿಸಬಹುದು. ಮನೆಯ ಸುಖ ಅನುಭವಿಸದ ಡಾಕ್ಟರು ಅವಶ್ಯವೆನಿಸಿದವರನ್ನು ಭೆಟ್ಟಿಯಾಗಿ ಉಳಿದ ಕೆಲಸವನ್ನು ಮನೆಯಲ್ಲಿಯೇ ಮಾಡಬಹುದು. ಇದರಂತೆ ಯಾಂತ್ರಿಕ ಸಹಾಯದಿಂದ ಏನುಬೇಕಾದುದನ್ನು ಮಾಡಬಹುದು.

ಒಟ್ಟಿನ ಮೇಲೆ ಪರಮಾಣು ಶಕ್ತಿಯಿಂದ ಕಲ್ಲಿದ್ದಲಿ ಪೆಟ್ರೋಲ ಉದ್ಯೋಗಗಳ ಕಾರಖಾನೆಗಳು ಮುಳುಗುತ್ತವೆ. ರಸಾಯನಿಕ ದ್ರವ್ಯ, ವಿದ್ಯುಚ್ಛಕ್ತಿ ಹಾಗೂ ಸಿರ್‍ಯಾಮಿಕ್ಸಗಳ ಉತ್ಪಾದನೆಯು ಅತಿಯಾಗಿ ಬೆಳೆಯುತ್ತದೆ. ಗ್ಯಾಸೋಲಿನ್ ಬಸ್ಸುಗಳು ಮಾಯವಾಗಿ ತಂತಿ ಹಳಿಗಳ ಸಹಾಯವಿಲ್ಲದೆ ನೆಲದಲ್ಲಿಯ ಕೇಬಲ್‌ಗಳ ಸಹಾಯದಿಂದ ನಡೆಯುವ ವಿದ್ಯುತ್ ಕ್ಯಾರಿಯರಗಳು ಬರುತ್ತವೆ. ಸಣ್ಣ ಟ್ಯೂಬ್ಸಿಗಳ ಸಹಾಯದಿಂದ ನೀವು ಜಮ್ಮೈಲುಗಳ ವ್ಯಾಸದಲ್ಲಿ ಬೇಕಾದಲ್ಲಿ ಹೋಗಬಹುದು. ಇದರಿಂದ ವಾಹನ ಸೌಕರ್ಯವು ಬಹು ಸುಲಭವಾಗುವದು. ನಮ್ಮ ಟೀಕಾಕಾರರು ಈ ತರದ ವೈಜ್ಞಾನಿಕ ನಡತೆಯಿಂದ ನಮ ಬಾಳು ಹಾಳಾಗುವದೆಂದೆಣಿಸಿದ್ದರು ಆದರೆ ಅದು ವಿರುದ್ಧವಾಗಿ ಪರಿಣಮಿಸಿತು. ಇಂಥ ಪರಮಾಣು ಪ್ರಗತಿಯಿಂದ ಮನೆಮಾರುಗಳೇ ರಹದಾರಿಗಿಂತ ಹೆಚ್ಚು ಆಕರ್ಷಣೀಯವಾಗಿವೆ. ಶುದ್ಧವಾದ ಹವೆಯಲ್ಲಿ ಜನರು ಆನಂದದಿಂದ ನಿದ್ರಿಸುವರು. ಹೆಂಗಳೆಯರು ಮನೆಯ ಹೊರಗೆಲಸದಿಂದ ಒಮ್ಮೆ ಮುಕ್ತರಾದರು ವಾಸಸ್ಥಾನವು ಸ್ವಚ್ಛವಾಗಿದ್ದು ಮಕ್ಕಳು ಅಲ್ಹಾದಿತರಿರುವರು ಅತಿಶ್ರಮದ ಕೆಲಸದನಂತರ ಕಾಸುಗರೆದು ಇಳಿದ ಮುಖದಿಂದ ಹೋಗುವದರ ಬದಲು ಒಬ್ಬರನ್ನೊಬ್ಬರು ಅಲ್ಹಾದ ಮುಖದಿಂದ ಸಂಮಿಲಿತರಾಗುವರು.

ಪಿಟ್ಸಬರ್ಗವನ್ನು ವಿದ್ಯುನ್ಮಯವನ್ನಾಗಿ ಮಾಡುವಷ್ಟರಲ್ಲಿ ಪರಮಾಣು ಶಕ್ತಿಯು ಜೀವನವನ್ನೇ ವಿದ್ಯುತ್ತಿನಂತೆ ಕ್ಷಣಾರ್ಧಕ್ಕೆ ಳಿಸಿಬಿಟ್ಟಿತು.

ಅಮರವಸ್ತು

೧

ಕೆಂದುಟಿಯು ಮಾಸೀತು,
ಕೌತೇಯ ಹರಿದೀತು,
ಮಣ್ಣಾಗಿ ಹೋದೀತು ಕಾಲ ಕೆಳಗೆ,
ಬೀಜ ತಂತಿಗಳೆಲ್ಲ
ಹರಿದಾವು, ಸುಸ್ವರವು
ತೊದಲಾಗಿ ಪೈಶಾಚ ಕೇಳೆಯಕ್ಕು !

೨

ರತ್ನ ಪಾತ್ರಗಳೆಲ್ಲ
ಚೂರು ಚೂರಾದಾವು,
ಬೆಳ್ಳಿ ಹಾವುಗೆ ಹರಿದು ಮೂಲೆ ಕಾಣ್ಗು !
ರನ್ನವಿಡಿಕೆಯ ಹೂಜಿ-
ಯೊಡೆದು ಮಣ್ಣು ಹುಡಿಯಕ್ಕು,
ಹಳೆಯದಾವುದೊ ರಾಜಗೃಹದ ಹಿಂದೆ !

೩

ಹಾಲ್ಗಲ್ಲು ಬಿರಿದೀತು,
ಪರಿಮಳವು ಪರಿದೀತು,
ಬಂಗಾರ ಸೀರೆ ಹುಡಿಯಾಗಿ ಹೋಕು !
ಚೆಂಗುಲಾಬಿಯು ಬಾಡಿ
ಹೋಗಿ ಇಲ್ಲಾದೀತು,
ಉಳಿದೀತು ವಾಸನೆಯ ಸಿಪ್ಪೆಮಾತ್ರ!

೪

ಯುಗಯುಗಗಳಳಿದಾವು,!
ಸೊಬಗಳಿಯದೆಂದಿಗೂ,
ರಂಗು ದಂಗುಗಳಿಂದ ಕಂಗೊಳಿಸುಗು !
ಚಂದ್ರ ತಾರೆಗಳೆಲ್ಲ
ಕರಗಿಯೇ ಹೋದಾವು —
ಮಾಡದಿದ್ದಾವು ಆ ಬಾನ್ಮಣಿಗಳು !

೫

ಈ ಮತ್ತಿನೆಲ್ಲ ಸಿರಿ-
ಗಳುಮಾಯವಾದಾವು !
ಈ ನಶ್ವರ ಗಳೊಡನೆ ಸೊಬಗಳಿಯದು !
ಹೀಗೆಂದಿಗೂ ಚೆಲುವು
ನಮ್ಮಿಂದ ಹೋಗಳೋ—
ಆಕೆ ಮತ್ತೆಯ್ತಹಳು ಪಕ್ಕದೀ !

೬

ನೀನಾದ ಸೌಂದರ್ಯ
ನಿನ್ನದೆಂದೆಂದಿಗೂ,
ಎತ್ತೆ ಮತ್ತಾದಯುಗುಗು ನೋಡು
ತಿಳಿದು !

ದೇವನೇ ಸೌಂದರ್ಯ,
ಅದು ಬದುಕುಗೆಂದಿಗೂ ;
ಅದರ ಪೂಜಕ ನೀನು, ಅದರ ಒಡೆಯ!

೭

ಏನಹೇಳಲಿ ಆ ವಿ-
ಚಿತ್ರವನು (ಮುದ್ದುರಸೆ)!
ಅಲಿಸುವ ಕಿವಿತುಂಬಿ, ಹೊಳೆವ ಕಣ್ಣು
ಅಲಿಗಳ ತುಂಬಿ ಸಿಂ
ತಿಹಳನಾವೃತಳಾಗಿ —
ಪ್ರೇಮವಾಕೆಯ ಮುಸುಕ ತೆರೆಯ
ಕೂಗಿ !

(ಶ್ರೀ ಜೆ. ಜೆ. ಅವರ ಕವನದ ಅನುವಾದ)
— ಬಿ. ಎಚ್. ಶ್ರೀಧರ

ಬಡೋದೆಯ ಸಯಾಜಿರಾವ ಗಿರಣಿಯ ಒಡೆಯರು ಗಿರಣಿಯಲ್ಲಿ ತಯಾರಾದ ಹೆಚ್ಚಿನ ಅರಿವೆಯ ಗಂಟುಗಳನ್ನು ಸಂಗ್ರಹಿಸಿದ್ದರೆಂಬ ಆರೋಪದ ಮೇಲೆ ಹಿಂದುಸ್ತಾನ ಸರಕಾರದ ಜವಳಿ ಕಮಿಶನರರು ಕ್ರಮ ತೆಗೆದು ಕೊಂಡಿದ್ದಾರೆ. ಈ ಗಂಟುಗಳಲ್ಲಿ ಸರಕಾರದ ಮುದ್ರೆ ಇಲ್ಲದ ಅರಿವೆಗಳನ್ನು ಕಟ್ಟಲಾಗಿತ್ತೆಂದು ತಿಳಿಯುತ್ತದೆ.

ಪಂಡಿತ ಜವಾಹರಲಾಲರಿಗೆ

ಏಕಿನಿತು ನಿರ್ದಯತೆ ಪಂಡಿತ ಜವಾಹರರೆ,
ಏಕಿದುವೆ ನೈರಾಶ್ಯ ಪಾಶವನೊಳು ತೂರ್‍ಇ,
ಲೋಕದಲಿ ಕನ್ನಡ ಪ್ರಾಂತೀಕರಣದಾಸೆ
ಹಿಂದೂಡಯತ್ನಿಸುವಿರಿ

ನಾಕದಂತೆ ಸಮೃದ್ಧ ಕರುನಾಡು, ಕಾಸಾರ-
ರಾಕೇಂದು ಸಮದೇಶ, ನಿಮ್ಮ ವಚನವ ಕೇಳಿ,
ಈ ಕಾಲದೊಳು ಬಿಡದೆ ಜರ್ಜರಿತವಾಗಿಹುದು
ಎಂಥದೀ ನಿಮ್ಮ ಕೃತ್ಯ ॥

೨

ಭಾರತಕೆ ಹಿರಿಮಣಿಯೆ, ಭಾರತೀಯರ ಧಣಿಯೆ,
ಭರತ ವರ್ಷದ ಜೀವ ಜ್ಯೋತಿಗಳೆ ಪಂಡಿತರೆ,
ಹಿರಿದಾದ ಆಶೆಗಳು ಮಣ್ಣುಪಾಲಾಗಿಹವು
ಕಡೆಗಣ್ಣಿನಿಂದ ನೋಡೆ ॥

ಚಾರು ನಾಡಿನ ಚರಿತೆ ಅರಿಯದಾಯಿತೆ ನಿಮಗೆ,
ತೋರ ಮುತ್ತಿನ ಹಾರದಂತಿರುವ ಕನ್ನಾಟ-
ಧಾರಿಣಿಯ ಮೊರೆ ಜಗದಿ ಕಿವಿಯಗಡಚಿಕ್ಕಿಸಿರೆ.
ನಿಮಗೇಕೆ ಕೇಳದಾಯ್ತು ॥

೩

ಸ್ವಾತಂತ್ರ್ಯ ಸಿದ್ಧಿಯಿಂದಾಶೆ ಹಿಗ್ಗಿತು ಎಂದು,
ಆತುರದಿ ನಲಿಯುತಿರೆ ವಿಷವಾಯು ಪಸರಿಸುತ
ಈ ತೆರನೆ ನಿರ್ಜೀವ ಮಾಡಿದಿರಿ ನಾಡಿಗರ
ಅಪರಾಧವೇನು ? ದೊರೆಯೆ ॥

'ಸೋತಂಥ ವೀರರಿಗೆ ಚೇತನೆಯನೀವುದು,'
ಖ್ಯಾತ ಮಾನವ ಧರ್ಮವಲ್ಲವೇ ಜಗದೊಳಗೆ,
ನೀತ ವೀರರೆ ನಿಮ್ಮ ಮಾತು ಪೆರ್ಮೆಯದಲ್ಲ,
ಕಾದಲ್ಗೆ ಗೊಡಲಿಯಾಯ್ತು ॥

೪

ಆಂಧ್ರರಿಂಗಾಶ್ವಾಸನವ ಕೊಟ್ಟರೈ
ಮೊದಲು,
ಮುಂದಾದ ಕನ್ನಡರ ಹಿಂದೂಡಲೆಂದು ನೀಂ,
ಕೆರದುಗಣ್ಣನು ಬಿಟ್ಟು ಹೌಹಾರಿಸಿರುವಿರೈ
ಮುಂದೇನು ನಮ್ಮ ಗತಿಯು ॥

ಇಂದಿರುವ ತಿತಿಗತಿಯು ಮುಂದೆಯೂ
ಸಾಗಿದರೆ,
ಒಂದಾಗಿ ನಡೆವಂಥ ನಲ್ಮೆ ಸಾರುವುದೆಂದು
ಎಂದೆಂದಿಗೂ ನಿಮ್ಮ ಮಾತಿಗಾನಂದವನು
ತೋರುತಿಹ ನಮ್ಮ ಬಾಳ್ಗೆ ॥

೫

ಕಂದೆಯೇ ಅರ್ಭಕನ ಕೊಂದ ತೆರನಾಗಿಹುದು।
ಹೊಂದಿರ್ದ ಶಕುತಿಯೇ ಜೀವ ಹೀರಿದರೇನು?
ತಂದೆ ಗಾಂಧೀ ದೇವ ಕಾರುಣ್ಯ ಪೂರ್ಣನಿರೆ-
ನಮಗಾಗಿ ಮುನಿಸೆ ನಿಮಗೆ ॥

ಬಂಧುರದ ಬಾಂಧವ ಪ್ರೇಮಿಗಳು ನೀವಿರಲು,
'ಬಂಧು ಜನರನುರಾಗವುನ್ನತಿಯ ಕೈಗೊಳಲು,
ಎಂದು ಫಲವೇನಯ್ಯ ಭಾರತೀಯರ ಮುಂದು-
ನಡೆಯಿಸುವ ನೇತಾರರೆ ॥

೬

ಭೇದ ಭಾವವ ತೋರಿ ಕನ್ನಡ ಪ್ರಾಂತವನು,
ಮಾಡಕೂಡದು ಎಂಬ ಕಿರಿವಾತನಾಡಿದಿರಿ,
ಮೇದಿನಿಯು ಮೆಚ್ಚುಗೇಂ? ನಿಮ್ಮ ಧೋರಣದಿಂದ
ಬಂಧು ಜನ ಹಿಂದುಳಿಯಲು ॥
ಹಾದಿಯನು ಮಾಡಿದಿರಿ ಅತಿ ನಿರಾಶೆಯ ತೋರಿ,
ಕಾದು ಕುಳಿತಿಹ 'ಜೇಲಿ ಹೊಲ ಮೇದ
ತೆರನಾಯ್ತು'
'ಕಾಡಿ ಬೇಡಿದ ಫಲವು ಕೋಡಗನ
ಪಾಲಾಯ್ತು' ಪಂಡಿತರೆ ನೋಡಿರೀಗ ॥

೭

ತಲೆ ತಲಾಂತರದಿಂದ ಕರುನಾಡ ಭೂಮಿಯಿದು
ಇಳೆಯಾಣ್ಮರಿಂ ಮೆರೆದು ಸತ್ಕೀರ್ತಿ ಪಡೆದಿಹುದು
ಮೊಳಗಿಸಿತ್ತಿ-ಇತಿಹಾಸಗಳುನೆರಚಿಸಿತ್ತ ಹೋ-
ಸಕ್ಯಾನ್ಯ ತರುವ ಜಗದಿ ॥
ಬೆಳೆದ ನಾಡಿನ ಮೇಲ್ಮೆ ತಲೆ ಬಾಗಿಪದಂತಾಯ್ತು,
ಅಲಲ ನಿಮ್ಮಯ ಮಾತು ಹಲವು
ಎಡೆಕೆಗೆ ಸಿಲುಕಿ,
ತಲೆ ಕೆಡಿಸುತಿಹುದೀಗ ಕನ್ನಾಡ, ಮುತ್ಸದ್ದಿ-
ಒಕ್ಕೂಟ ನೋಡಿ-ನೋಡಿ ॥

೮

ಇನ್ನಾದರೂ ನಮ್ಮ ದೀನ ಕತೆಯನು ಕೇಳಿ,
ರನ್ನ ಗುಣ ಸಂಪನ್ನ ಪಂಡಿತ ಶಿಖಾಮಣಿಯೆ,
ಕನ್ನಡಿಗರಾಕಾಂಕ್ಷೆ ಕೈಗೂಡಿಸಿರಿ ತಂದೆ
ನಿಮ್ಮನ್ನೆ ನಂಬಿರುವೆವು ॥
ಅನ್ಯಮಾತುಗಳಿರಲಿ, ಆ ಮೇಲೆ ನೋಡೋಣ
ಮುನ್ನ ಪ್ರಾಂತೀಕರಣಕಭಿವಚನವೀಯುತಲಿ,
ಕನ್ನಡವನುದ್ಧರಿಸಿರೆಂದು ನಾ ನಿಮ್ಮಡಿಗೆ-
ಬಿನ್ನಪವಗೆಯ್ವೆನಿಂತು ॥

—ಎಸ್. ಬಿ. ಮುಜುಮದಾರ

ವಿವಿಧ ಪ್ರಪಂಚ

ಶಬ್ದಬ್ರಹ್ಮ

ವ್ಯಾಕರಣ ಭಕ್ತರು ಶಬ್ದದಲ್ಲಿಯ 'ಸ್ಫೋಟ' ವೆಂಬ ಗುಣವನ್ನು ಬ್ರಹ್ಮವೆನ್ನುತ್ತ ಹೋಗಿ 'ಶಬ್ದಬ್ರಹ್ಮರೆ'ನಿಸಿಕೊಂಡರು. ವಾಚಾಳಿಗಳಿಗೂ ಶಬ್ದಬ್ರಹ್ಮರೆಂಬ ಬಿರುದು ಬಂದಿತು. 'ಶಬ್ದಃ ಕಾವ್ಯಂ' ಎಂಬ ಲಕ್ಷಣದ ಪ್ರಕಾರ ಶಬ್ದವು ಕಾವ್ಯಪುರುಷ, ಕಾವ್ಯಬ್ರಹ್ಮ ಎನಿಸಿತು. 'ಶಾಬ್ದಿಕರೆಂ'ದರೆ ವೈಯಾಕರಣಿಗಳೆಂದಾಯಿತು. ಅಲಂಕಾರದೊಳಗೆ 'ಶಬ್ದಾಲಂಕಾರ'ವೆಂಬುದು ಅಮಲಿನಲ್ಲಿ ಬಂದಿತು. ಶಬ್ದದಲ್ಲಿ ನಾದ, ಬಿಂದು, ಕಲೆಯೆಂಬ ೩ ಗುಣಗಳಿದ್ದು ಅವು ಸೃಷ್ಟಿಗೆ ಕಾರಣಗಳೆಂದು ಹೇಳಲಾಯಿತು. ಪರಮಾತ್ಮನು ಓಂಕಾರ ರೂಪಿಯೆನಿಸಿದನು. ಇಂತಹ ಪರಬ್ರಹ್ಮ ಪೀಠ ಹಿಂದೀ ತತ್ತ್ವ ಶಾಸ್ತ್ರಗಳಲ್ಲಿ ಶಬ್ದಕ್ಕಿದೆ. ಇಂದು ಪಾಶ್ಚಾತ್ಯ ವಿಜ್ಞಾನಿಗಳು ಪ್ರಯೋಗ ಪೂರ್ವಕವಾಗಿ ಮೇಲಿನ ಮಾತಿಗೆ ಪ್ರಮಾಣವನ್ನು ತೋರಿಸಿದ್ದಾರೆ.

ಯಾಂತ್ರಿಕ ಸ್ಪಂದನದಿಂದ ಶಬ್ದ ಸೃಷ್ಟಿಯಾಗುವುದೆಂಬುದು ವಿಜ್ಞಾನಿಗಳ ತತ್ವ. ಆ ಸ್ಪಂದನದ ವೇಗವನ್ನು ಹೆಚ್ಚಿಸುತ್ತ ಹೋದಂತೆ ಶಬ (Sound) ಹೆಚ್ಚುತ್ತ ಹೋಗುತ್ತದೆ; ಮಾನವ್ಯ ಶಕ್ತಿಗೆ ಬುಡವಿಲ್ಲ ತಲೆಯಿಲ್ಲ. ಹೆಚ್ಚಿಲ್ಲ, ಕಡಿಮೆಯಿಲ್ಲ, ಎಲ್ಲ ಮಿತ. ಆದುದರಿಂದ ಅತಿಶಬ್ದ (Super-sound)ವನ್ನು ಅವನ ಕಿವಿ ಜೀರ್ಣಿಸಿಕೊಳ್ಳಲಾರದು. ಅದು ಕೇವಲ ಮೌನದೊಂದು ಪೆಟ್ಟು. ಆದರಿಂದ ದಿಙ್ಮೂಢತೆ, ವಿವಶತೆ ಇಲ್ಲವೆ ಮರಣ ಉಂಟಾಗಬಹುದು. ಒಂದು ಸೆಕೆಂಡಿಗೆ ೧೬ ಸಾವಿರ ಸಲ ಮಾಡುವ ಸ್ಪಂದನ (ಮಿಡಿತ) ವನ್ನು ಜನರು ಕೇಳಬಹುದು; ಮುಂದೆ ಸಾಧ್ಯವಿಲ್ಲ. ಸ್ಪಂದನ ಹೆಚ್ಚಾದರೆ ಸೆಕಂಡಿಗೆ ೧೨ಕೋಟಿ ಸಲ ಆಗಬಹುದೆಂದು ಪ್ರಯೋಗದಿಂದ ನೋಡಲಾಗಿದೆ.

ಕೇಂಬ್ರಿಜ್ಜಿನ Ultrasonic corporation ಅತಿಶಬ್ದ ಸಂಸ್ಥೆಯವರು ಅನೇಕ ವಿಧದ ಪ್ರಯೋಗಗಳನ್ನು ನಡೆಸಿ ಆದರಿಂದ ಲಾಭ ಪಡೆದಿದ್ದಾರೆ. ವಿಮಾನ ನಿಲ್ದಾಣದ ಅಂತರಿಕ್ಷದಲ್ಲಿ ಎಳೆ ಮೋಡವಿದ್ದರೆ ಅತಿ ಶಬ್ದ ಪ್ರಯೋಗದಿಂದ ಅದನ್ನು ಮಳೆಮಾಡಿ ಉದುರಿಸಿ ಬಿಡಲಾಗುವುದು. ಬಟಾಟೆಯ ನೊಳಕೆಗಳಿಗೆ ಆ ಪ್ರಯೋಗ ಮಾಡಿದರೆ ಒಂದು ವಾರ ಮುಂಚಿತವಾಗಿ ಹೂ ಬಿಟ್ಟು ನೂರಕ್ಕೆ ೪೦—೫೦ ರಷ್ಟು ಹೆಚ್ಚು ಫಲ ಕೊಡುವುವು. ರಶಿಯದಲ್ಲಿ ಇದರಿಂದಲೆ ಆಹಾರೋತ್ಪಾದನೆಯನ್ನು ಹೆಚ್ಚಿಸಲಾಗಿದೆ. ಡಾ. ಪ್ಯಾಲೇಸರು ಇದರಲ್ಲಿ ವಿಶೇಷ ಪ್ರಯೋಗಮಾಡಿ ಇದೇ ಅಭಿಪ್ರಾಯಕ್ಕೆ ಬಂದಿದ್ದಾರೆ. ಇದರಿಂದ ಶುಭ್ರವಾಗಿ ನೀರಿಲ್ಲದೆ ಬಟ್ಟೆಯನ್ನು ಒಗೆಯಬಹುದಂತೆ! ಅಲ್ಲದೆ, ಕಾರಖಾನೆಗಳು ಹೆಚ್ಚಿದ್ದ ನಗರಗಳಲ್ಲಿ ತುಂಬಿದ ಹೊಗೆಯನ್ನು ಇದರಿಂದ ಓಡಿಸಿ ಬಿಡಬಹುದು. ಇಷ್ಟೇ ಅಲ್ಲದೆ, ಡಾ. ಲಿನ್ ಮತ್ತು ಪುಟ್‌ಮನ್ನರ ಪ್ರಕಾರ ಚೂರಿಯಿಲ್ಲದೆ ಮಿದುಳಿನ ಶಸ್ತ್ರಕ್ರಿಯೆಯನ್ನು ಕೂಡ ಅತಿ ಶಬ್ದದ ಸಹಾಯದಿಂದ ಮಾಡಬಹುದಂತೆ! ಇದರ ಮೇಲೆ, ೩೦-೪೦ ಸೆಕಂಡಿನಲ್ಲಿ ಇದನ್ನು ಪ್ರಯೋಗಿಸಿ ೩೦೦ ಮೀಟರಿನಲ್ಲಿರುವ ಮನುಷ್ಯನನ್ನು ವಿವಶಗೊಳಿಸಬಹುದು. ಇಲ್ಲವೆ ಒಮ್ಮೆ ಯಮಲೋಕಕ್ಕೂ ಅಟ್ಟಬಹುದು. ಮುಂದಿನ ಯುದ್ಧಗಳಲ್ಲಿ ಇದರ ಬಳಕೆ ಬಹಳವಾಗುವುದಂತೆ. ಹೀಗಿರುವಾಗ ಶಬ್ದಬ್ರಹ್ಮನ ಪರಾಕ್ರಮ ವರ್ಣನೆ ಮಾಡಿ ಮುಗಿಸಲು ಸಾಧ್ಯವೇ?

ಲಿಂಗವಿಜ್ಞಾನ

ಪ್ರಾಚೀನ ಕಾಲ [ಅಂದರೆ ವೇದಗಳ ಕಾಲ] ದಲ್ಲಿ ಸ್ತ್ರೀಯರು ಋಷಿ ಪಟ್ಟಕ್ಕೇರಿದ್ದುಂಟು. ಗಾರ್ಗಿ, ಮೈತ್ರೇಯಿ ಮುಂತಾದ ಆಧ್ಯಾತ್ಮವಿದ್ಯಾವಿಶಾರದೆಯರು ಭಾರತೀಯ ಸಂಸ್ಕೃತಿಗೆ ಕಳಸವಿಟ್ಟರು. ಅನಂತರ ಬಂದಿತು ತಮೋಯುಗ ಹೆಂಗಸರು, ಮಕ್ಕಳು ಶೂದ್ರರು, ವೇದಬಾಹಿರರೆಂದು ಸಾರಲಾಯ್ತು. ಅಂದಿನಿಂದ ಸಮಾಜ ಅಧೋಗತಿಗಿಳಿಯಿತು. ಸ್ತ್ರೀಯರು ನಿರಕ್ಷರ ಕುಕ್ಷಿಗಳಾದರು. ಗಂಡಸರ ಗುರುತ್ವ ಅತಿಯಾಯ್ತು. ಅದಿಂದು ಶ್ರೀಮತಿ ಲೀಲಾವತಿಯ ವರಂಥವರು ಅಸ್ತಿ ಪಾಲು ಬೇಡುವ ಕಾಯಿದೆ ರಚಿಸಬೇಕೆಂಬ ವರೆಗೆ ಮುಟ್ಟಿತು. ಪಾಶ್ಚಾತ್ಯ ನಾಗರಿಕತೆ ಹುಚ್ಚೆದ್ದು ಸಹವಿದ್ಯಾಭ್ಯಾಸ ಒಳ್ಳೆಯದೋ ವಿಶಿಷ್ಟ ವಿದ್ಯಾಭ್ಯಾಸ ಅಗತ್ಯವೋ ಎಂದು ಪ್ರಯೋಗ ನಡೆಸಿ ಜಯಹೊಂದದೆ ಪೌರಸ್ತ್ಯರಿಗೆ ಒಂದಿಷ್ಟು ಮರುಳು ಹಿಡಿಸುವ ವರೆಗೆ ಹೋಯ್ತು. ಅದರ-ಯೋ ದೇಶ ಕಾಲ ಕಾರ್ಯ ವ್ಯಪೇಕ್ಷಯಾ ಪಂಡಿತಃ ಸಪುಮಾನ್ — ದೇಶಕಾಲ ಕಾರ್ಯಾನುಗುಣವಾಗಿ ಯೋಜಿಸ ಕ್ಕವನು ಬುದ್ಧಿವಂತನು-ಎಂಬ ಮಾತಿನ ಸತ್ಯತೆಯನ್ನು ಮನಗಾಣದೆ ಸಾರ್ವಕಾಲಿಕ, ಸಾರ್ವದೇಶಿಕ, ಸಾರ್ವಲಿಂಗಿಕ ತತ್ವವನ್ನು ಸಾರ ಹೋಗದೆ; ಮನಃಶಾಸ್ತ್ರ ತರ್ಕಶಾಸ್ತ್ರಗಳ ಸಹಾಯದಿಂದ ಔಚಿತ್ಯವನ್ನರಿತು ಸ್ತ್ರೀ ವಿದ್ಯಾಭ್ಯಾಸದ ಪ್ರಶ್ನೆಯನ್ನು ಬಿಡಿಸಹೊರಡುವುದು, ಸ್ತ್ರೀ ಪುರುಷರ ಆರ್ಥಿಕ ಮತ್ತು ಸಾಮಾಜಿಕ ಸಂಬಂಧವನ್ನು ನಿರ್ಧರಿಸುವುದು ಮತ್ತು ಅವರ ಪರಸ್ಪರ ಶರೀರ ಸಂಬಂಧಿ ಜ್ಞಾನವನ್ನು ಪಸರಿಸುವುದು ಪ್ರಗತಿಶೀಲರ ಕರ್ತವ್ಯ. (ಅಶ್ಲೀಲಭಾವಕ್ಕೆ ದೆಗೊಡದೆ ಲಿಂಗಜ್ಞಾನವನ್ನು ಹುಡುಗ ಹುಡುಗಿಯರಿಗೆ ಕಲಿಸದಿರುವುದರಿಂದ ಹಿಂದುಸ್ತಾನದಲ್ಲಿ ಅನೇಕ ಸಂಸಾರಗಳು ಯದ್ವಾತದ್ವಾ ಜೀವನ ನಡೆಸಿವೆ. ಅದರ ವಿಶೇಷ ಜ್ಞಾನದಿಂದಲೇ ಅನೈತಿಕ ಜೀವನ ನಡೆಸಿ ಕೆಟ್ಟುಹೋದ ಹುಡುಗ ಹುಡುಗಿಯರೂ ಪಾಶ್ಚಾತ್ಯ ಪ್ರಪಂಚದಲ್ಲಿ ಬಹಳ ಇದ್ದಾರೆ. ಹೀಗಿರುವಲ್ಲಿ ಕರ್ತವ್ಯವೇನು?

"ಪೂಜಾರಿ (The Priest)" ಎಂಬ ಗ್ರಂಥದಲ್ಲಿ ಫಾದರ ರೀಗನ್ನರು ಮೇಲಿನ ಪ್ರಶ್ನೆಗೆ ಈ ಕೆಳಗಿನ ಸದುತ್ತರ ಕೊಟ್ಟಿದ್ದಾರೆ.

೧. ಲಿಂಗವಿಜ್ಞಾನವನ್ನು ಬೋಧಿಸುವುದು ಮಾತಾಪಿತೃಗಳು (ಅಂದರೆ ಅಪ್ಪ ಮಗನಿಗೆ, ಅಮ್ಮ ಮಗಳಿಗೆ) ಇಲ್ಲವೆ ಅವರಿಂದಾಗದಿದ್ದಲ್ಲಿ ಅವರ ಆಪ್ತರು ನಿರ್ವಹಿಸತಕ್ಕ ಕರ್ತವ್ಯವಲ್ಲದೆ ಅನ್ಯರದಲ್ಲ. ಈ ಮಾತನ್ನು ಎಲ್ಲ ನಯಜ್ಞರೂ ಗಂಭೀರವಾಗಿ ಮನನ ಮಾಡಬೇಕು.

೨. ವಿಚಾರಶಕ್ತಿ ತಲೆದೋರಿದಂದಿನಿಂದ ಪ್ರಾಯಬಂದ ಕೆಲ ವರ್ಷಗಳ ವರೆಗೆ ಲಿಂಗಜ್ಞಾನವನ್ನು ಕ್ರಮೇಣ ಬೋಧಿಸುತ್ತ ಹೋಗಬೇಕು. ಸುಳ್ಳು ವಿವರಣ ಕೊಡುವುದು ಸಂಸ್ಕೃತಿಯ ಬೇರಿಗೆ ಕೊಡಲಿಯ ಪೆಟ್ಟು ಕೊಟ್ಟಂತೆ. ಅದರಿಂದ ಹುಡುಗ ಹುಡುಗಿಯರು ದೊಡ್ಡವರಾದ ಮೇಲೆ ಮಾನವನ ಹುಟ್ಟೆಂಬುದು ನೀಚ, ದುಷ್ಟ ಇಲ್ಲವೆ ಭಯಂಕರವೆಂದು ತಿಳಿದು ಜೀವನದಲ್ಲಿ ಪರಸ್ಪರ ಸಂಬಂಧವನ್ನು ಸರಿಪಡಿಸಿಕೊಳ್ಳಲಾರದೆ ನರಳುವಂತಾಗಬಹುದು.

ಗಂಭೀರವಾಗಿ ಹುಟ್ಟನ್ನು ವಿವರಿಸುವುದು ಸಂಸ್ಕೃತ ವ್ಯಕ್ತಿಗೆ ಮಾತ್ರ ಸಾಧ್ಯ. ಹಿಂದುಸ್ತಾನದ ತಂದೆತಾಯಿಗಳೆಂದು ಬಹುಪಕ್ಷ ಅಸಂಸ್ಕೃತ ಇಲ್ಲವೆ ಅರ್ಧಸಂಸ್ಕೃತರಾಗಿರುವುದರಿಂದಲೇ ಇಂದಿನ ಪೀಳಿಗೆ ವಿದ್ಯೆ, ಬುದ್ಧಿ, ಆಚಾರ, ವಿಚಾರಗಳಲ್ಲಿ ಬಹಳ ಹಿಂದುಳಿವಂತಾಗಿದೆ. ಅವರಿಗೆ ಮಕ್ಕಳ ಬಗ್ಗೆ ಮಾಡಬೇಕಾದ ಕರ್ತವ್ಯದ ಅರಿವು ಸಂಪೂರ್ಣವಾಗಿ ಇಲ್ಲದುದರಿಂದ ಅನೇಕ ಸಾಮಾಜಿಕ ಅಸುಖಗಳು ಸಂಭವಿಸುತ್ತಿವೆ. ವಿದ್ಯಾದಾನವಿಲ್ಲ, ಕೇವಲ "ನೈವೇದ್ಯ" ದಾನವಷ್ಟೇ ಮಕ್ಕಳನ್ನು ಹೇಗೆ ಮನುಷ್ಯರನ್ನಾಗಿಸೀತು?"

೩. ಸ್ಥೂಲ ಜ್ಞಾನವನ್ನು ಮಕ್ಕಳಿಗೆ ಸಾಮೂಹಿಕವಾಗಿ ಹೇಳಿ ಬಿಡಬಹುದಾದರೂ ವಿವರ ಪೂರ್ಣವಾದ ಲಿಂಗ ವಿಜ್ಞಾನವನ್ನು ವೈಯಕ್ತಿಕವಾಗಿ ಹೇಳುವುದೇ ಹಿತಕರ. ಸಾಮಾನ್ಯವಾಗಿ ಹೈಸ್ಕೂಲಿಗೆ ಹೋಗುವ ವಯಸ್ಸೇ ಇದಕ್ಕೆ ಅನುಕೂಲ. ಸ್ತ್ರೀಪುರುಷರ ಸಹಕಾರದಿಂದಲೇ ಮಾನವನ ಸಂತತಿ ಚಿರಂತನವೆನಿಸಬಲ್ಲುದೆಂಬುದನ್ನು ನಾನಾವಿಧವಾದ ಸೂಕ್ಷ್ಮ ಗಾಂಭೀರ್ಯದಿಂದ ಆರೋಗ್ಯ ಶಾಸ್ತ್ರ, ಸಸ್ಯಪ್ರಾಣಿ—ಶರೀರ-ಶಾಸ್ತ್ರ ಇವುಗಳನ್ನು ಹೇಳುವಾಗ ತಿಳಿಸಿ ಬಿಡಬಹುದು.

೪. ಪ್ರಲೋಭವನ್ನು ಗೆಲ್ಲುವ ಮತ್ತು ಪಾವಿತ್ರ್ಯವನ್ನು ಕಾಯ್ದುಕೊಳ್ಳುವ, ಅಲ್ಲದೆ ಆತ್ಮಸಂಯಮವನ್ನು ಅಳವಡಿಸಿಕೊಳ್ಳುವ ನೀತಿಮತ್ತೆಯನ್ನು ವಿವರಿಸದೆ ಕೇವಲ ಲಿಂಗವಿಜ್ಞಾನವನ್ನು ಎಂದಿಗೂ ಮಕ್ಕಳಿಗೆ ಬೋಧಿಸಕೂಡದು. ಏಕೆಂದರೆ, ಕೇವಲ ಜ್ಞಾನದಿಂದ ನರನು ಎಂದೂ ಶುದ್ಧ ಚರಿತ್ರನಾಗಲಾರನು. ಅಥವಾ ಕೇವಲ ನೀತಿಯ ಆಚಾರದಿಂದಲೂ ಅವನು ಹಾಗೆ ಉಳಿಯಲಾರನು. ಇದನ್ನರಿತೋ ಏನೋ ಈನ್‌ಸ್ಟೀನರು 'Religion without Science is blind and Science without Religion is lame— ವಿಜ್ಞಾನವಿಲ್ಲದ ಧರ್ಮ ಕುರುಡು, ಧರ್ಮವಿಲ್ಲದ ವಿಜ್ಞಾನ ಕುಂಟು' ಎಂದಿದ್ದಾರೆ.

ಅಣುಜಾತರು

ಅಣುಬಾಂಬು ಮಾನವಕುಲವನ್ನು ಮೂಲೋತ್ಪಾಟನ ಮಾಡಬಲ್ಲುದು; ಅಣುರೇಣು ತೃಣಕಾಷ್ಠಗಳನ್ನು ಪರಮೇಶ್ವರನ ಫಾಲನೇತ್ರದಂತೆ ಸುಟ್ಟು ಸೂರೆ ಮಾಡಬಲ್ಲುದು, ಜಗತ್ಪ್ರಳಯವನ್ನು ನಿಮಿಷಾರ್ಧದಲ್ಲಿ ಮುಗಿಸಿ ಬಿಡಬಲ್ಲುದು ಎಂದು ಮುಂತಾಗಿ ಅನೇಕ ರೀತಿಯಿಂದ ಅದರ ಪ್ರತಾಪದ ವರ್ಣನೆಯನ್ನು ಇತ್ತೀಚೆಗೆ ಕೇಳಲಾಗುತ್ತಿಗೆ. ಆದರೆ ಇದೆಲ್ಲ ನಿಜವೇ? ಎಂದು ಹಳ್ಳಿಗನು ಗಾಬರಿಯಿಂದ ಕೇಳಿಯಾನು. ಅಹುದೆಂದೇ ಅದಕ್ಕೆ ಉತ್ತರ ಹೇಳಬೇಕಾಗುತ್ತದೆ.

ಕೆಲ ವಿಜ್ಞಾನಿಗಳಿಂದು ಹೀಗೆ ಆಲೋಚಿಸಿದರು: ಅಣುಬಾಂಬಿನ ಪರಿಣಾಮಕ್ಕೆ ತುತ್ತಾದ ಜೀವಕಣದಿಂದ ಹುಟ್ಟುವ ಮಾನವನ ಮರಿಗಳು ಹೇಗಾಗಬಹುದು? ಅವು ಯಾವ ಯಾವ ಬದಲಾವಣೆಗಳನ್ನು ಹೊಂದಬಹುದು? ಎಂದು ತರ್ಕಿಸಹೋಗಿ ಆ ರೀತಿ ಪ್ರಯೋಗ ನಡೆಸಲು ಹತ್ತಿ ಕೆಲವೊಂದು ನಿರ್ಣಯಗಳಿಗೆ ಬಂದು ಮುಟ್ಟಿದ್ದಾರೆ.

ಸಾವಿರಾರು ಜನರು ಹಿರೋಶಿಮ ಮತ್ತು ನಾಗಸಾಕಿಯಲ್ಲಿ ಬಿದ್ದ ಅಣುಬಾಂಬುಗಳ ಪರಿಣಾಮದಿಂದ ನಿರ್ವೀರ್ಯರಾಗಿ ಹೋದುದಿಂದು ಸರ್ವವಿದಿತವಾಗಿದೆ. ಸತ್ತವರು ಸತ್ತರು; ಉಳಿದವರ ಬಗೆ ಹೀಗೆ:

ಪ್ರೊ. ಜೆ. ಬಿ. ಎಸ್. ಹಾಲ್ಡೇನರ ಪ್ರಕಾರ ಅಣು ರೇಡಿಯೋ ಕ್ರಿಯೆಗೆ ತುತ್ತಾಗಿ ಬದುಕಿ ಉಳಿದವರು ಅಭಿನವ ವಿಶ್ವಾಮಿತ್ರರಾಗಬಹುದಂತೆ. ಅವರಿಗೆ ಹುಟ್ಟುವ ಮಕ್ಕಳು ಕಾರ್ಟೂನ್ ಟಕ ಕಟ್ಟಿದ ನಳ—

"ಅಡ್ಡ ಮೋರೆಯ ಗಂಟುಮೂಗಿನ
ಜಡ್ಡು ದೇಹದ ಗುಜ್ಜು ಗೊರಲಿನ
ಅಡ್ಡ ಕೈಕಾಲುಗಳ ಕೆದರಿದ ರೋಮ
ಮೀಸೆಗಳ।
ದೊಡ್ಡ ಹೊಟ್ಟೆಯ ಗೂನುಬೆನ್ನಿನ
ಗಿಡ್ಡ ರೂಪಿನ ಹರಕುಗಡ್ಡದ
ಹೆಡ್ಡನಾದ ಕುರೂಪಿತನದಲಿ ನೃಪತಿ
ವಿಷದಿಂದ ‖"

ಆದಂತೆ ಆಗುತ್ತಾರೆ.

ಇದರ ಮೇಲೆ ಅಮೇರಿಕದ ಜನನ ಶಾಸ್ತ್ರಜ್ಞರಾದ ಪ್ರೊ. ಎಚ್. ಜೆ. ಮುಲ್ಲರರು ಇದೇ ಅಭಿಪ್ರಾಯಕ್ಕೆ ಬೆಂಬಲವಿತ್ತಿದ್ದಾರೆ. ಅವರು ೯೦೦ ಪೀಳಿಗೆಯ ವರೆಗೆ ಹಣ್ಣಿಗೆ ಮುತ್ತುವ ನೊಣಗಳ ಮೇಲೆ ಅಣುಶಕ್ತಿಯ ರೇಡಿಯೋ ಕ್ರಿಯೆಯ ಪರಿಣಾಮವೇನಾಗುವುದೆಂಬುದನ್ನು ಪರೀಕ್ಷಿಸಿ ನೋಡಿದ್ದಾರೆ. ರೇಡಿಯೋ ಕ್ರಿಯೆಯಿಂದ ಆ ನೊಣಗಳು ಅಕರಾಳ ವಿಕರಾಳ ಸ್ವರೂಪದ ರಾವಣ, ಕುಂಭಕರ್ಣ, ತಾಟಕೆ, ಶೂರ್ಪಣಖಿಯರಂತಹ ಮರಿಗಳನ್ನು ಹೆತ್ತವಂತೆ. ೩ ಪಕ್ಕದ ನೊಣಗಳು, ಕೆಟ್ಟ ಕಣ್ಣಿನವು, ಸೊಟ್ಟ ದೇಹದವು, ವಿಚಿತ್ರ ಬಣ್ಣದವು ಬಹುಬೇಗ ಸಾವಂಥವು ಹುಟ್ಟಿಕೊಂಡವಂತೆ. ಇದಕ್ಕೆ ರೇಡಿಯೋ ಕ್ರಿಯೆಯು ಜೀವಾಣುಗಳನ್ನು (Genes) ಸಿಡಿಸಿ ಭಾವಿ ಮರಿಯ ದೈಹಿಕ ಮತ್ತು ಮಾನಸಿಕ ಗುಣಗಳನ್ನು ಮಾರ್ಪಡಿಸಿದ್ದೇ ಕಾರಣ.

ಗಂಡಿನ ಧಾತುವಿನಿಂದ ಸಮೃದ್ಧವಾದ ಹೆಣ್ಣಿನ ಬೀಜಕಣವು ತಾಯ್ತಂದೆಯರಿಂದ ಜೀವಾಣುಗಳನ್ನು ಸಮಪ್ರಮಾಣದಲ್ಲಿ ಪಡೆಯುತ್ತದೆ. ಅದು ಗರ್ಭವಾಗಿ ಪರಿಣಮಿಸುವಾಗ ಈ ಜೀವಾಣುಗಳ ಪ್ರತಿರೂಪದ ಅಣುಗಳು ಗುಣಿತ ಸಂಖ್ಯೆಯಿಂದ ಹೆಚ್ಚುತ್ತ ಹೋಗುತ್ತವೆ. ಆದುದರಿಂದ ಈ ಜೀವಾಣುಗಳು ಶಿಲ್ಪಿಯೊಬ್ಬನು ಮೊದಲು ತಯಾರು ಮಾಡುವ ಕರಡು ನಕಾಶೆಯಂತಿರುತ್ತವೆ.

ಈ ಜೀವಾಣುವೆಂಬುದು ಬಹಳ ಜಟಿಲವಾದ ರಾಸಾಯನಿಕ ಪರಮಾಣು. ಬಹಳ ಸಮರ್ಥ ಸೂಕ್ಷ್ಮದರ್ಶಕ ಯಂತ್ರದಿಂದ ಇದನ್ನು ನೋಡುವುದೂ ಕಷ್ಟಸಾಧ್ಯ. ಪ್ರತಿಯೊಂದೂ ಒಂದೊಂದು ದೈಹಿಕ ಗುಣವನ್ನು ಯೋಜಿಸತಕ್ಕದ್ದು. ಕಣ್ಣಿನ ಬಣ್ಣ, ಅದರ ಮಾದರಿ, ಕೂದಲಬಣ್ಣ ಮುಂತಾಗಿ ಎಲ್ಲವೂ ಇದರ ಅಂಕೆಗೊಳಗಾದವು. ಹಿಂದೆ ಹೇಳಿದ ನೊಣಗಳಲ್ಲಿ ಅವುಗಳ ವಿಚಿತ್ರ ಗುಣಗಳಿಗೆ ಕಾರಣವಾದ ಜೀವಾಣುಗಳನ್ನು ಕಂಡು ಹಿಡಿಯಲಾಗಿದೆ.

ಈ ಜೀವಾಣುವಿನಲ್ಲಾದ ಮಾರ್ಪಾಟು ಮುಂದಿನ ಪೀಳಿಗೆಯ ವರೆಗೂ ಹೋಗುತ್ತದೆ. ಪ್ರಕೃತಿಯಲ್ಲಿ ಈ ಮಾರ್ಪಾಟು ಸ್ವಯಂಸ್ಫೂರ್ತಿಯಿಂದ ಉಂಟಾಗುತ್ತದೆ. ಕೆಲವರಿದಕ್ಕೆ ವಿಶ್ವಕಿರಣಗಳ ಪ್ರಭಾವವು ಕಾರಣವೆನ್ನುತ್ತಾರೆ. ಇದೇ ಚಿರಂತನವಾಗಿ ಜೀವಶಾಸ್ತ್ರೀಯ ಬದಲಾವಣೆಗಳನ್ನು ಮಾಡುತ್ತದೆಂದು ಪ್ರೊ. ಮುಲ್ಲರರು ಅಭಿಪ್ರಾಯಪಡುತ್ತಾರೆ.

ಹೀಗೆ ಅಣುಶಕ್ತಿಯ ದುರುಪಯೋಗದಿಂದ, ಮಾನವ ಸಂತತಿ ಗರ್ಭದಲ್ಲೇ ನಾಶ ಹೊಂದಬಹುದು. ಜನನ ಪ್ರಮಾಣ ಕಡಿಮೆಯಾಗಬಹುದು, ಗಂಡಿನ ಜನನ ಕಡಿಮೆಯಾಗಬಹುದು; ಗಂಡು ಹೆಣ್ಣುಗಳು ಪಿತೃತ್ವ ಮಾತೃತ್ವಗಳಿಗೆ ಅನರ್ಹವಾಗಿ ಹುಟ್ಟಬಹುದು — ಒಂದಲ್ಲ ಎರಡಲ್ಲ ಈ ಅಣುಬಾಂಬಿನ ದುಷ್ಪರಿಣಾಮಗಳು!

ಚೀನೀಕಲೆ

ಜಗತ್ತಿನ ಸುಮಾರು ೨೦೦ ಕೋಟಿ ಜನಗಳಲ್ಲಿ ಚೀನೀಯರು ೧/೪ಕ್ಕಿಂತ ಹೆಚ್ಚು ಇದ್ದಾರೆ. ಅವರದು ಮಂಗೋಲಿಯ ಕುಲ; ಹಳದಿ ಬಣ್ಣ, ಸಪಾಟ ಬೀಜದಂಥ ಕಣ್ಣು, ಅವರ ಮಾತಿನಲ್ಲಿ ಏಕಾಕ್ಷರ ಶಬ್ದಗಳೇ ಹೆಚ್ಚು. ಧರ್ಮ ಬುದ್ಧ ಪಕ್ಷ ದೊಡ್ಡ. ರೇಶಿಮೆ ಮತ್ತು ಪಿಂಗಾಣಿಯ ವಸ್ತುಗಳ ತಯಾರಿಕೆಯಲ್ಲಿ ಅವರು ಜಗತ್ಪ್ರಸಿದ್ಧರು. ಉಪ್ಪು ಬೆಣ್ಣೆ ಹಾಕಿ ಮಾಡಿದ ಚಹಾ ಅವರ ಅಮೃತಪೇಯ. ಈ ವಿಚಿತ್ರ ಜನರ ಕಲಾಕೃತಿಗಳೆಂತಿವೆಯೆಂಬುದನ್ನು ತಿಳಿದುಕೊಳ್ಳುವ ಕುತೂಹಲ ಶ್ರೀ. ಜಿ ವೆಂಕಟಾಚಲರಿಗೆ ಹುಟ್ಟಿತು. ಅವರ ಕಾಣ್ಕೆ ಹೀಗಿದೆ: ಮೊದಲನೆಯದಾಗಿ ಕಂಡವು ೪ ಸಾವಿರ ವರುಷ ಹಿಂದಿನ ಮೂಲಕಂಚಿನ, Bronze ಸಾಮಗ್ರಿಗಳು. ಇವುಗಳ ಮೇಲಿಂದ ಭಾರತದಷ್ಟೆ ಚೀನವೂ ಕಲಾಪ್ರತಿಭೆಯಲ್ಲಿ ಪ್ರಾಚೀನ ಕಾಲದಿಂದಲೂ ಪ್ರಸಿದ್ಧಿ ಪಡೆದಿತ್ತೆನ್ನಬಹುದು. ಸೌಂದರ್ಯ ಮತ್ತು ಪ್ರಯೋಜನ ದೃಷ್ಟಿಗಳು ಈ ಎರಡು ನಾಡುಗಳಲ್ಲೂ ಜೊತೆ ಜೊತೆಗೇ ಹೊಂದಿಕೊಂಡಿವೆ. ಅಲ್ಲದೆ —ಕಲೆಗಾರ ಕಸಬಿ, ಚಿತ್ರಕಾರ ಕಮ್ಮಾರ ಇವರು ಬೇರೆ ಬೇರೆ ಇಲ್ಲ, ಅವರಲ್ಲಿ ಅಭೇದ. ಮೇಲಿನ ಸಾಮಗ್ರಿಗಳಲ್ಲಿ ಗೃಹೋಪಯೋಗಿ ಪಾತ್ರಗಳು, ವಾದ್ಯಗಳು, ಪೂಜಾ ಸಾಮಗ್ರಿಗಳು, ಕಟ್ಟೆಗಳು, ವಿಗ್ರಹಗಳು ಮತ್ತು ಗಂಟೆಗಳು ಮುಖ್ಯವಾದುವು. ಅನಂತರ ಚಿನ್ನ ಬೆಳ್ಳಿಯ ಕಟ್ಟೆಬಟ್ಟಲುಗಳು ಬರುತ್ತವೆ. ಅವುಗಳಲ್ಲಿ ಮದ್ಯಪಾತ್ರ ಮತ್ತು ದೀಪದ ಹಿಡಿಕೆಗಳು ಬಹಳ ಚೆನ್ನಾಗಿವೆ. ಅವುಗಳ ಮೇಲೆ ಅಕ್ಷರಗಳು ಕೊರೆಯಲ್ಪಟ್ಟಿವೆ. ಕ್ರಿ. ಪೂ. ಸಾವಿರ ವರ್ಷಗಳ ಹಿಂದಿನ ಶಾಸನಗಳನ್ನು ನಾವು ಅವುಗಳಲ್ಲಿ ಕಾಣಬಹುದು. ಮೂಲ ಕಂಚಿನ ಜೊತೆಗೆ ಟಿನ್ ಮತ್ತು ತಾಮ್ರಮಿಶ್ರಿತ ಲೋಹದಿಂದ ಮಾಡಿದ ವಸ್ತುಗಳು ಇದ್ದವು. ಈ ಮಿಶ್ರಣ ನಿಯತ ಪ್ರಮಾಣದಲ್ಲಿಯೇ ಎಲ್ಲ ಕಲೆಗಾರರಿಂದಲೂ ಮಾಡಲ್ಪಡುತ್ತಿತ್ತು. ಅವುಗಳಲ್ಲಿ ಒಂದು ಮೂಲಕಂಚಿನ ಕನ್ನಡಿಯೂ ಇತ್ತು. ಅದು ೧೩ನೆಯ ಶತಮಾನಕ್ಕೆ ಸೇರಿದ್ದು. ಅದರ ಬೆನ್ನಿನ ಮೇಲೆ ಶುದ್ಧಾಕ್ಷರದ ಸಂಸ್ಕೃತ ಶಾಸನವಿದೆ! ಅಲ್ಲದೆ ಬುದ್ಧ ಮತ್ತು ಬೋಧಿಸತ್ವರ ನಾನಾ ವಿಗ್ರಹಗಳೂ ಲೋಹಮಯ ನಿರ್ಮಿತಿಗಳಲ್ಲಿ ಕಾಣಸಿಗುತ್ತವೆ.

ಮುಂದೆ ಪಿಂಗಾಣಿ. ಅವು ನಾನಾ ವಿಧವಾಗಿವೆ ಜಗನ್ಮಾನ್ಯವೆನಿಸಿವೆ. ಅವುಗಳಲ್ಲೆಲ್ಲ Enamelled Porcelain ಬಣ್ಣದ ಪಿಂಗಾಣಿ ಅತ್ಯುತ್ತಮವಾದುದು. ಕ್ರಿ. ಪೂ. ೩-೪ ನೆಯ ಶತಮಾನದಲ್ಲೇ ಪಿಂಗಾಣಿಯ ತಯಾರಿಕೆಗೆ ಚೀನವು ಹೆಸರಾಗಿತ್ತು. ಕ್ರಿ. ಶ. ೧೮ನೆಯ ಶತಮಾನದಲ್ಲಿ ಆ ಕಲೆ ಪೂರ್ಣತೆ ಪಡೆಯಿತು.

ಅನಂತರ ವರ್ಣಚಿತ್ರ. ಇದು ವಿಪುಲ ಸಂಖ್ಯೆಯಲ್ಲಿ ಇದೆ. ೨ ಸಾವಿರ ವರ್ಷಗಳಿಂದ ಚೀನದಲ್ಲಿ ಈ ಕಲೆ ಬೆಳೆದು ಬಂದಿದೆ. ಚಿತ್ರ ದೃಶ್ಯಗಳಲ್ಲಿ ಸುಂದರ ಭೂಪ್ರದೇಶ, ಹಿಮಾವೃತ ಮಹಾಪರ್ವತ, ಪರ್ವತ ಸ್ರೋತ, ಬಿದಿರು ಹಿಂಡಿಲು, ಬೆಳಗಿರಿಯ ಹಕ್ಕಿ, ಇವೇ ಹೆಚ್ಚಾಗಿ ಚೆನ್ನಾಗಿರುವುವು. ಇವುಗಳಲ್ಲೆಲ್ಲ ನೋಡಿದರೂ ಪೌರಸ್ತ್ಯ ಪದ್ಧತಿಗನುಗುಣವಾದ ಪ್ರತೀಕತೆ ಮತ್ತು ವ್ಯಂಜಕತೆಗಳು ಕಾಣುವುದಲ್ಲದೆ, ಪಾಶ್ಚಾತ್ಯರಿಗೆ ಸಹಜವಾದ ಸ್ವಾಭಾವಿಕತೆ ಮತ್ತು ಪ್ರತ್ಯಕ್ಷ ಪ್ರಾತಿನಿಧಿಕತೆ ಕಂಡು ಬರುವುದಿಲ್ಲ. ಈ ಕಲೆಯನ್ನು ಚೀನ ಜಪಾನುಗಳು ಇಷ್ಟು ಚೆನ್ನಾಗಿ ಸಾಧಿಸಿಕೊಳ್ಳಲು ಚಿಕ್ಕಂದಿನಿಂದ ಅವರು ಕೈಬರಹಕ್ಕೆ ಕೊಡುವ ಪ್ರಾಧಾನ್ಯವೇ ಕಾರಣ. ಬುದ್ಧ ಬೋಧಿಧರ್ಮರ ಚಿತ್ರಗಳೂ ಬಹು ಸೊಗಸಾಗಿವೆ.

ಇದಲ್ಲದೆ, ಸುರುಳಿಸುತ್ತ ಬರುವಂತಹ ಕಾಗದ ಇಲ್ಲವೆ ರೇಶಿಮೆಯ ಮೇಲೆ ಚಿತ್ರಿಸಿದ "ಕಾಕೆಮೋನೋ" ಚಿತ್ರಗಳು ಗೋಡೆಗೆ ತೂಗುಹಾಕಲೆಂದು ಇವೆ. ಇಲ್ಲಿಯೂ ಗಿರಿಕಂದರ, ನದಿನದ ವನರಾಜಿಗಳ ದೃಶ್ಯಗಳು ಸೊಗಸಾಗಿ ಚಿತ್ರಿತವಾಗಿವೆ.

ಹಸಿರುಗಲ್ಲನ್ನು ಕಡಿದು ಕಡೆಯುವುದರಲ್ಲಿ ಚೀನೀಯರು ನಿಪುಣರು. ಅದರಿಂದ ಪಾನಪಾತ್ರ ಇತರ ಕುಡಿಕೆ, ಗಿಂಡಿ, ಹೂಜಿ ಮುಂತಾದವನ್ನು ಕಲಾಮಯವಾಗಿ ನಿರ್ಮಿಸುತ್ತಾರೆ. ಇವು ರಾಜಮಹಾರಾಜರಿಗೆ ಬಹಳ ಬೇಕಾದವೆನಿಸಿದ್ದವು.

ಕಲೆಯಲ್ಲಿ ಭಾರತ ಚೀನಗಳು ಯಮಳ ನದಿಗಳಂತೆ ಹರಿದಿವೆ. ಅಧುನಿಕ ಭಾರತವು ತನ್ನ ಈ ಸಂಗಾತಿ ನಾಡಿನ ಕಲಾದೃಷ್ಟಿಯನ್ನು ಇನ್ನೂ ಹೆಚ್ಚಾದ ಆಸಕ್ತಿಯಿಂದ ಅನುಶೀಲಿಸುವುದು ಅವಶ್ಯಕ. "ಜಗತ್ತಿನ ಜನ ಯಾವುದರ ಬಗ್ಗೆ ಗಡಿಬಿಡಿ ಸುತ್ತಿರುವರೋ ಅದನ್ನು ನಿಧಾನವಾಗಿ ಗಡಿಬಿಡಿಯಿಲ್ಲದೆ ಲಕ್ಷ್ಯಕ್ಕೆ ತೆಗೆದುಕೊಳ್ಳಬಲ್ಲವರು-ಜಗತ್ತಿನ ಜನ ಯಾವುದನ್ನು ನಿಧಾನವಾಗಿ ಗಡಿಬಿಡಿಯಿಲ್ಲದೆ ಲಕ್ಷ್ಯಕ್ಕೆತೆಗೆದುಕೊಂಬುದೋ ಅದರ ಬಗ್ಗೆ ಗಡಬಡಿಸಿ ಸಾಧಿಸಿಕೊಳ್ಳಬಲ್ಲರು" ಎಂದು ಜಗತ್ತಿನ [illegible]

ಕಾಶ್ಮೀರದ ಕುರುಕ್ಷೇತ್ರದಲ್ಲಿ ಭಾರತದ ಧರ್ಮಯುದ್ಧ

(ಕೊನೆಯ ಪುಟದಿಂದ)

ಅನ್ಯಾಯದ ಆಕ್ರಮಣವನ್ನು ತಡೆಗಟ್ಟಬೇಕು, ಇಲ್ಲವೆ ಶಾಂತಿ ಶಸ್ತ್ರ ಹಿಡಿಯುವ ಪಕ್ಷದ ರಾಷ್ಟ್ರಗಳ ಮೇಲೆ ಪ್ರಭುತ್ವ ಪ್ರಭಾವಗಳ ಮೂಲಕ ಹಲ್ಲೆ ಮಾಡಿ ಹೊಡೆದು ಹಿಂದಟ್ಟಿಕೊಳ್ಳಬೇಕು, ಇಲ್ಲವೆ ಅಮೇರಿಕ ಇಂಗ್ಲಂಡಗಳಂಥ ಹಿರಿಯ ರಾಷ್ಟ್ರಗಳ ಸಹಾಯ ಪಡೆದು ಬೇರೆ ಅವುಗಳಿಗೆ ಧಾರಾಳವಾಗಿ ಶಸ್ತ್ರಾಸ್ತ್ರಗಳ ಹಂಚಿಕೆಯನ್ನು ನಡೆಯಬೇಕು; ಅನ್ಯಥಾ ಗತಿಯುಳ್ಳ. ಸದ್ಯಃ ಪಾಕಿಸ್ತಾನವು ಹಿಂದುಸ್ತಾನದಲ್ಲಿ ನೇರವಾಗಿ ನುಗ್ಗಲು ಬಲ ಸಾಲದೆ ಒಂದು ವಿಧದ ಶಿತಯುದ್ಧ ಇಲ್ಲವೆ ಕೂಟಯುದ್ಧವನ್ನು ಹಿಂದುಸ್ತಾನದ ಮೂಲಕ ಹೂಡಿ ತನ್ನ ಹಾಚೀಕ್ರಮವನ್ನು ಪ್ರದರ್ಶಿಸಿದೆ ಯೆಂಬುದು ಸುವೇದ್ಯವಿದೆ. ರಾಜಕೀಯವಾಗಿ ರಚಿಯುವ ಹೆದರಿಕೆ ಹಾಕಿ ಅಮೇರಿಕದಿಂದ ಸಾಲ ಪಡೆವ ಯತ್ನ ಬಿದ್ದು ಹೋಗಿ, ಸ್ವಂತ ಜನಾಧ್ಯಾಯಿಂದ ಬೇರೆಡೆ ಸಾಲ ತೆಗೆಯಲು ಅಸಮರ್ಥನಾಗುವದಿದೆ, ಬಡ ಮುಸಲ್ಮಾನರ ಹಸಿವನ್ನು ಹಿಂಗಿಸಲಾರದೆ, ಅವರನ್ನು ಹಿಂದುಗಳ ಆಸ್ತಿಯ ಲೂಟಿಗೆ ಹಚ್ಚಿದರೂ ಸಾಲ್ದೆ, ಗುಡ್ಡಗಾಡು ಜನರನ್ನೂ ಕಾಶ್ಮೀರಿ ಪುಂಡರನ್ನೂ ಪಾಕಿಸ್ತಾನೀ ತಿದಿಗೇಡಿಗಳನ್ನೂ ಎತ್ತಿಕಟ್ಟಿ ಅವರನ್ನು ಕಾಶ್ಮೀರೀ ಹಿಂದು-ಶೀಖರ ಮೇಲೆ ಪಾಕಿಸ್ತಾನ ಹಾಯ ಗೊಟ್ಟಿರುವದು ವಿಚಾರಶೀಲರಿಗೆ ತಿಳಿಯಲು ಕಷ್ಟವಲ್ಲ. ಇನ್ನು ಭೌಗೋಲಿಕ ಮತ್ತು ಧಾರ್ಮಿಕ ದೃಷ್ಟಿಯಿಂದ ಪಾಕಿಸ್ತಾನವು ತನ್ನ ಎರಡು ತುಂಡುಗಳ ಬಲದಿಂದ ಹಿಂದುಸ್ತಾನದ ಮುಸ್ಲಿಂ ಜಂಜಮು ದಲದ ನೆರವಿನಿಂದ ಇತರ ಮುಸ್ಲಿಂ ರಾಷ್ಟ್ರಗಳ ಸಹಾಯ ಸಹಾನುಭೂತಿಗಳಿಂದ, ಹಿಂದುಸ್ತಾನವನ್ನು ಕ್ರಮೇಣ ಭಾಗ ಭಾಗವಾಗಿ ಗೆದ್ದು ಇಸ್ಲಾಂ ರಾಜ್ಯವನ್ನು ಸ್ಥಾಪಿಸಿ ರಶಿಯದಿಂದ ಕನ್ಯಾಕುಮಾರಿಯ ವರೆಗೆ ಮತ್ತು ಈಜಿಪ್ತದಿಂದ ಆಗ್ನೇಯ ಏಶಿಯದ ದ್ವೀಪಸ್ತೋಮಗಳ ವರೆಗೆ ಇಸ್ಲಾಂ ರಾಜ್ಯಸ್ತೋಮವನ್ನು ಕಾಣುವ ಹಂಬಲು ಕೂಡ ಪಾಕಿಸ್ತಾನದ ಈ ಕಲಹಪ್ರಿಯತೆಗೆ ಕಾರಣವೆಂದು ಅಭಿಪ್ರಾಯಪಡಲಾಗುತ್ತದೆ.

ಹಿಂದುಸ್ತಾನದ ನ್ಯಾಯಮಾರ್ಗ

ಮುಸ್ಲಿಂ ರಾಜ್ಯಗಳ ನಡುವೆ, ಸಾಮ್ರಾಜ್ಯ ಪ್ರಭುತ್ವಗಳ ಪ್ರಭಾವಕ್ಕೊಳಗಾದ ರಾಷ್ಟ್ರಗಳ ನಡುವೆ ಸಿಕ್ಕಿ ಬಿದ್ದಿರುವ ಏಕಮೇವವಾದ ಸ್ವತಂತ್ರ ಪರ ರಾಷ್ಟ್ರ ಧೋರಣವುಳ್ಳ ಹಿಂದುಸ್ತಾನವು ಕಾಯದೆ ಪ್ರಕಾರ ಆತ್ಮರಕ್ಷಣೆಯ ರೀತಿಯಂತೆ ಕಾಶ್ಮೀರ ಪ್ರಶ್ನೆಯಲ್ಲಿ ಇಂದು ಕೈಹಾಕಿದೆ. ಹೇಗೆಂದರೆ, ೧೯೪೬ ನೆಯ ಮೇ ೧೬ರ ಬ್ರಿಟಿಶ ಮಂತ್ರಿಶಿಷ್ಟಾಯಿಯ "ಸಂಸ್ಥಾನಗಳ ಒಪ್ಪಂದ ಮತ್ತು ವರಿಷ್ಠಾಧಿಕಾರ ಸೂತ್ರ"ದ ಪ್ರಕಾರ ಬ್ರಿಟಿಶರು ಅಧಿಕಾರದಾನ ಮಾಡಿದ ನಂತರ ಯಾವ ಸಂಸ್ಥಾನಿಕನಾದರೂ ತನ್ನ ಇಷ್ಟ ಬಂದ ಹಾಗೆ ಪ್ರಜಾಭಿಪ್ರಾಯ ತೆಗೆದುಕೊಳ್ಳದೆ ಎರಡರಲ್ಲೊಂದು ಅಧಿರಾಜ್ಯವನ್ನು ಸೇರಬಹುದಾಗುತ್ತದೆ. ಆ ಪ್ರಕಾರವೂ ನ್ಯಾಯ ಸಮ್ಮತವಾಗಿಯೂ (ಅಂದರೆ ಸದ್ಯದ ಪ್ರಜಾಭಿಪ್ರಾಯದ ಪ್ರಕಾರವೂ) ಕಾಶ್ಮೀರವು ಹಿಂದೀ ಒಕ್ಕೂಟಕ್ಕೆ ಸೇರಿ ಅದರದೊಂದು ಭಾಗವಾಯಿತು. ಅಂದಿನಿಂದ ಹಿಂದುಸ್ತಾನವು ಉದಾರವಾಗಿ ಒಪ್ಪಿದ ಮತಗಣನೆ ನಡೆಯುವ ವರೆಗೆ ಕಾಯದೆಯಂತೆ ಕಾಶ್ಮೀರವು ಹಿಂದುಸ್ತಾನದ ಒಂದು ಭಾಗವೇ ಎನಿಸಿದೆ. ಅದರಲ್ಲಿ ಪಾಕಿಸ್ತಾನಕ್ಕೆ ಕೈ ಹಾಕಲು ಯಾವ ಬಗೆಯ ಹಕ್ಕೂ ಇಲ್ಲ. ಕಾಶ್ಮೀರದ ನಿರ್ಣಯಕ್ಕೆ ಪಾಕಿಸ್ತಾನದ ಮನ್ನಣೆ ಅವಶ್ಯವಿಲ್ಲ.

೨ನೆಯದಾಗಿ ಅಂತರಾಷ್ಟ್ರೀಯ ಕಾಯದೆ ಪಂಡಿತರಾದ ಒಪ್ಪೆನ್ ಹೀಂ, ಹಾಲ್, ಪಿಟ್ ಕೊಬೆಟ್, ಸರ್ ವಿಲಿಯಂ ಪಿಟ್ ಮುಂತಾದ ವರ ನಿರ್ಣಯದ ಪ್ರಕಾರ ಕಾಯದೆಯಂತೆ ಮಿತ್ರರಾಷ್ಟ್ರವಾಗಿ ಉಳಿದ ಪಾಕಿಸ್ತಾನವು ತಟಸ್ಥನಾಗಿ ಉಳಿಯದೆ ಪ್ರಕಟಾಪ್ರಕಟವಾಗಿ ಕಾಶ್ಮೀರದಲ್ಲಿ ದಾಳಿಗಾರರ ದಂಗೆಗೆ ತನು ಮನ ಧನ ಸಹಾಯ ಸಲ್ಲಿಸುತ್ತಿರುವುದು ಅಂತರಾಷ್ಟ್ರೀಯ ನಿಯಮಾವಳಿಗಳಿಗೆ ಭಂಗವುಂಟುಮಾಡಿದಂತಾಗಿದೆ. ಒಪ್ಪಂದದ ಪ್ರಕಾರ ಮಿತ್ರರಾಷ್ಟ್ರವೆನಿಸಿದ ಪಾಕಿಸ್ತಾನವು ಹಿಂದುಸ್ತಾನಕ್ಕೂ ಇತರ ರಾಷ್ಟ್ರಕ್ಕೂ ಸಂಬಂಧಿಸಿದ ಎಲ್ಲ ಕಲಹ ಸಂದರ್ಭದಲ್ಲಿ ತಾಟಸ್ಥ್ಯ ವಹಿಸತಕ್ಕದ್ದಾಗಿದೆ, ಇಲ್ಲವೆ ಒಪ್ಪಂದದ ಕರಾರಿನಂತೆ ಹಿಂದುಸ್ತಾನಕ್ಕೆ ಸಹಾಯ ನೀಡತಕ್ಕದ್ದಾಗಿದೆ. ೧೯೦೭ ರ ಹೇಗ್ ಪರಿಷತ್ತಿನ ನಿರ್ಣಯದಂತೆಯೂ ತಟಸ್ಥ ರಾಷ್ಟ್ರವು ಕಲಹಗ್ರಸ್ತ ಉಭಯ ಸರಕಾರಗಳಲ್ಲಿ ಒಂದಕ್ಕೆ ಜನ, ಧನ, ಶಸ್ತ್ರಾಸ್ತ್ರಗಳ ನೆರವು, ಶಿಬಿರಸ್ಥಳ, ಆಹಾರ ಪ್ರಯಾಣ, ಸಾರಿಗೆ, ಸೌಕರ್ಯಗಳನ್ನಾಗಲಿ ಒದಗಿಸಿಕೊಡತಕ್ಕ ದ್ದಲ್ಲವೆಂದು ನಿಷೇಧಿಸಲಾಗಿದೆ. ಅದಕ್ಕೂ ಸ್ವತಂತ್ರ ಕಾಶ್ಮೀರ ಸರಕಾರದೊಂದಿಗೆ ಸರಕಾರ ಮಾಡುವ ಒಪ್ಪಂದವು ಜೀವಂತವಿರುವಾಗ ಪಾಕಿಸ್ತಾನವು ಹಿಂದುಸ್ತಾನದ ಕೋರಿಕೆಯಂತೆ ಆಕ್ರಮಣಕಾರರಿಗೆ ಒದಗುವ ಸಹಾಯಕ್ಕೆ ತಡೆ ಹಾಕಬೇಕಾಗಿತ್ತು. ಹೀಗಿರುವಾಗ ಅವಕ್ಕೆ ತೆರೆ ಮರೆಗಳಿಂದ ಪಾಕಿಸ್ತಾನವಿಂದು ನೆರವೀಯುತ್ತಿರುವುದು ಅತ್ಯಂತ ಅಕ್ಷಮ್ಯ ಅಪರಾಧವೆನಿಸಿದೆ. ಅದರಿಂದಲೇ ಹಿಂದುಸ್ತಾನವಿಂದು ಪಾಕಿಸ್ತಾನದ ವಿರುದ್ಧ ಭದ್ರತಾಮಂಡಲಕ್ಕೆ ದೂರುಕೊಟ್ಟಿದೆ.

ಪಾಕಿಸ್ತಾನದ ಅಪರಾಧಗಳು

ಕಾಶ್ಮೀರಕ್ಕೆ ಸಂಬಂಧಿಸಿದ ಹಿಂದೀ ಸರಕಾರದ ವರದಿಯೊಂದನ್ನು ಸಂಯುಕ್ತ ರಾಷ್ಟ್ರಸಂಘದ ಭದ್ರತಾಮಂಡಲಕ್ಕೆ ಒಪ್ಪಿಸಲಾಗಿದೆ. ಅದರ ವಿವರ ಹೀಗಿದೆ—

(೧) ದಾಳಿಗಾರರಿಗೆ ಪಾಕಿಸ್ತಾನ ಪ್ರದೇಶದಲ್ಲಿ ಮಾರ್ಗಸೌಕರ್ಯವನ್ನು ಒದಗಿಸಿ ಕೊಡಲಾಗಿದೆ.

(೨) ಅವರಿಗೆ ಪಾಕಿಸ್ತಾನದ ಪ್ರದೇಶಗಳಲ್ಲಿ ಸೈನ್ಯಠಾಣೆಗಳನ್ನು ಸ್ಥಾಪಿಸಿಕೊಳ್ಳಲು ಅವಕಾಶ ಕೊಡಲಾಗಿದೆ.

(೩) ದಾಳಿಗಾರರೊಡನೆ ಪಾಕಿಸ್ತಾನದ ಪ್ರಜೆಗಳು ಸ್ವಯಿಚ್ಛೆಯರಾಗಿ ಸೇರಿಕೊಳ್ಳಲು ಅನುಮೋದಿಸಿ ಕೊಡಲಾಗಿದೆ.

(೪) ಅವರು ಪಾಕಿಸ್ತಾನದಿಂದ ತಮಗೆ ಅಗತ್ಯವಿರುವ ಪೆಟ್ರೋಲು, ಶಸ್ತ್ರಾಸ್ತ್ರ, ಆಹಾರ, ವಾಹನಾದಿಗಳನ್ನು ಪಡೆಯುತ್ತಿದ್ದಾರೆ.

(೫) ಪಾಕಿಸ್ತಾನದ ಅಧಿಕಾರಿಗಳು ಅವರಿಗೆ ತರಬೇತು ಕೊಡುವುದು, ಸಲಹೆ ಮಾಡುವುದು ಮತ್ತು ಇತರ ಮಾರ್ಗಗಳಿಂದ ಪ್ರಮುಖಪಟ್ಟು ಪ್ರಚೋದನೆ, ಸಹಾಯ, ಸಹಕಾರಗಳನ್ನು ನೀಡುವುದು ಕಂಡುಬಂದಿದೆ. ಈ ಎಲ್ಲ ಕೃತ್ಯಗಳು ಅಂತರಾಷ್ಟ್ರೀಯ ಕಾಯದೆಗಳ ಪ್ರಕಾರ ನ್ಯಾಯ್ಯವೆನಿಸುವುವೇ? ಎಂಬುದೇ ಹಿಂದುಸ್ತಾನ ಭದ್ರತಾಮಂಡಲಕ್ಕೆ ಕೇಳಿರುವ ಪ್ರಶ್ನೆ.

ಮೇಲೆ ನಾವು ತೋರಿಸಿಕೊಟ್ಟಂತೆ ಯಾವ ದೃಷ್ಟಿಯಿಂದ ವಿಚಾರಿಸಿದರೂ ಪಾಕಿಸ್ತಾನದ ಕೃತ್ಯಗಳು ಸಮರ್ಥನೀಯವೆನಿಸುವುದಿಲ್ಲ. ಇನ್ನು ಅಂತರಾಷ್ಟ್ರೀಯ ಸ್ವಾರ್ಥಸಾಧಕರ ಮಂಡಲವೆಂದು ಕೆಲವರೆನ್ನುವ ಸಂಯುಕ್ತ ರಾಷ್ಟ್ರಸಂಘವು ತನ್ನ ರಾಜಕೀಯ ಮತ್ತು ಆರ್ಥಿಕ ಲಾಭ ದೃಷ್ಟಿಯಿಂದ ನ್ಯಾಯವನ್ನು ಎತ್ತಿಹಿಡಿಯದೆ ಅನ್ಯಾಯವನ್ನೇ ಎತ್ತಿಹಿಡಿದರೆ ಹಿಂದುಸ್ತಾನವು ನೊಂದುಕೊಂಡು ಭದ್ರತಾ ಮಂಡಲದ ಆ ಅಸಂಬದ್ಧ ನಿರ್ಣಯವನ್ನು ಪಾಲಿಸಬೇಕು ಇಲ್ಲವೆ ಸೂಕ್ತವೆನಿಸಿದ ಸ್ವತಂತ್ರ ಮಾರ್ಗವನ್ನು ಅವಲಂಬಿಸುವ ಧೈರ್ಯ ತೋರಬೇಕು. ಹಿಂದುಸ್ತಾನದ ಭಾಗ್ಯಚಕ್ರ ದಲ್ಲೇನಿದೆ ಯೆಂಬುದನ್ನು ಹೇಗೆ ನಿರೀಕ್ಷಿಸಿ ನೋಡಬೇಕಾಗಿದೆ.

ಇತ್ತೀಚಿನ ಸುದ್ದಿಯ ಪ್ರಕಾರ ಕಾಶ್ಮೀರಕ್ಕೆ ಕ್ರಿಯಸ್ಥರ ಸಮಿತಿಯೊಂದನ್ನು ಭದ್ರತಾ ಮಂಡಲವು ಕಳುಹುವುದಕ್ಕೆ ಭಾರತ ಪಾಕಿಸ್ತಾನಗಳು ಸಮ್ಮತಿಸಿವೆಯೆಂದು ತಿಳಿಯುತ್ತದೆ.

ಮಹತ್ವದ ಸುದ್ದಿಗಳು

ಕೇಂದ್ರ ಶಿಕ್ಷಣ ಸಲಹಾ ಸಮಿತಿಯವರು ೩ ವರ್ಷಗಳಲ್ಲಿ ನೂರಕ್ಕೆ ೫೦ ರಷ್ಟು ಜನರನ್ನು ಸಾಕ್ಷರರನ್ನಾಗಿ ಮಾಡುವ ನಿರ್ಧಾರ ಮಾಡಿದ್ದಾರೆ. ಮಾಧ್ಯಮಿಕ ಹಾಗೂ ಉಚ್ಚ ಶಿಕ್ಷಣದಲ್ಲಿಯ ಬೋಧಭಾಷೆಯು ಇನ್ನೂ ೫ ವರ್ಷಗಳ ವರೆಗೆ ಈಗಿದ್ದಂತೆಯೇ ಇರಬೇಕೆಂದೂ ಅಷ್ಟರಲ್ಲಿ ಬೋಧ ಭಾಷೆಯ ಬಗ್ಗೆ ನಿರ್ಮಿಸಿದ ಸಮಿತಿಯವರ ಸೂಚನೆಗಳನ್ನು ಪರಿಶೀಲಿಸಿ ಆ ಮೇಲೆ ಯೋಗ್ಯ ಬೋಧಭಾಷೆಯನ್ನು ನಿಶ್ಚಿತಗೊಳಿಸಬೇಕೆಂದೂ ಇನ್ನೊಂದು ಗೊತ್ತುವಳಿಯಲ್ಲಿ ಹೇಳಲಾಗಿದೆ.

ಮಧ್ಯಪಾನ ನಿರೋಧದ ಸಾಮಾನ್ಯ ಧೋರಣೆಗನುಸರಿಸಿ ಹಿಂದುಸ್ತಾನ ಸರಕಾರದವರು ತಮ್ಮ ನೌಕರರು ನಿರ್ಮಿಸಿದ ಯಾವದೇ ಸರಕಾರೀ ಸಹಕಾರಕೂಟಗಳಲ್ಲಿ ಮಾದಕ ಪೇಯಗಳನ್ನು ಉಪಯೋಗಿಸಕೂಡದೆಂದು ತಿಳಿಸಿದ್ದಾರೆ.

ರಾಷ್ಟ್ರದ ಪ್ರಮುಖ ವಿಧಾಯಕ ಕಾರ್ಯಕರ್ತರ ಪರಿಷತ್ತು ಫೆಬ್ರುವರಿ ೩ ನೇ ತಾ॥ ವರ್ಧಾದಲ್ಲಿ ಗಾಂಧಿ ಸೇವಾಸಂಘದ ಆಶ್ರಮದಲ್ಲಿ ಸೇರುವದೆಂದು ಆ ಸಂಘದ ಕಾರ್ಯದರ್ಶಿಗಳಾದ ಶ್ರೀ ಧೋತ್ರೆಯವರು ಪ್ರಕಟಿಸಿದ್ದಾರೆ.

ಅದೇ ಕಾಲಕ್ಕೆ ಅಂದರೆ ಫೆಬ್ರುವರಿ ೬ ನೇ ತಾ॥ ಗೆ ಗೋಸೇವಾ ಸಂಘದ ವಾರ್ಷಿಕ ಸಭೆಯು ಶ್ರೀ. ಜಿ. ಬಿ. ಬೇರರ ಅಧ್ಯಕ್ಷತೆಯಲ್ಲಿ ಸೇರ್ವದು. ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದರು ಈ ಎರಡೂ ಪರಿಷತ್ತುಗಳಿಗೆ ಆಗಮಿಸುವರು.

ಮುಂಬಯಿಯಲ್ಲಿ ಸಾಕ್ಷರತಾ ಸಪ್ತಾಹ ಸಮಾರಂಭವನ್ನು ಮುಂಬಯಿಯ ಗವರ್ನರರಾದ ರಾಜಾ ಸರ ಮಹಾರಾಜಸಿಂಗರು ತಾ. ೧೬ ರಂದು ಉದ್ಘಾಟಿಸಿದರು. ಮುಂಬಯಿ ಪಟ್ಟಣದ ಪ್ರೌಢ ಶಿಕ್ಷಣ ಸಮಿತಿಯ ಹಾಗೂ ಅದರ ಅಧ್ಯಕ್ಷರಾದ ಶ್ರೀಮತಿ ಕುಲಸುಮ ಸಯಾನಿಯವರ ಕಾರ್ಯವನ್ನು ಬಾಯ್ತುಂಬ ಹೊಗಳಿದರು. ನಿರಕ್ಷರತೆಯನ್ನು ನಿವಾರಿಸಲು ಈ ಸಮಿತಿಯು ಈ ವರೆಗೆ ಸಾಕಷ್ಟು ದುಡಿದಿದೆ. ಈ ಕಾರ್ಯವನ್ನು ಇನ್ನಷ್ಟು ವಿಸ್ತರಿಸಲು ಸ್ವಯಂಸೇವಕರ ಅಗತ್ಯ ಬಹಳವಿದೆ ಯೆಂದೂ ತರುಣರು ಮುಂದೆ ಬಂದು ಈ ಕೆಲಸಕ್ಕೆ ನೆರವಾಗಬೇಕೆಂದೂ ಕೋರಲಾಯಿತು.

ಪಾಕಿಸ್ತಾನದಿಂದ ಬಂದ ಮುಸಲ್ಮಾನೇತರ ನಿರಾಶ್ರಿತರಿಗಾಗಿ ಮುಂಬಯಿ ಸರಕಾರದವರು ನೌಕರಿ ನಿಯಮಗಳನ್ನು ಸಡಿಲುಗೊಳಿಸಿ ಅವರಿಗೆ ಸರಕಾರದ ನೌಕರಿಗಳಿಗಾಗಿ ಅನುವು ಮಾಡಿ ಕೊಡುವದಾಗಿ ಸಾರಿದೆ. ಇಂತಹ ನಿರಾಶ್ರಿತರನ್ನು ನೌಕರಿಯಲ್ಲಿ ಸೇರಿಸಿಕೊಳ್ಳುವಾಗ ವಯೋನಿರ್ಬಂಧವನ್ನಾಗಲೀ ಪ್ರಾಂತೀಯತೆಯನ್ನಾಗಲೀ ಗಣಿಸುವದಿಲ್ಲ.

ಅಂತರಾಷ್ಟ್ರೀಯ ಧನನಿಧಿ ಸಂಸ್ಥೆಯು ಬ್ರಿಟನ್ನಿಗಲ್ಲದೆ ಇನ್ನಾವ ಸ್ಟರ್ಲಿಂಗ್ ದೇಶಗಳಿಗೂ ಡಾಲರನ್ನು ನವೆಂಬರ ೨೪ ರ ವರೆಗೆ ಮಾರಿಲ್ಲವೆಂದು ಹೇಳಲಾಗಿದೆ.

ಸಂಪಾದಕೀಯ ಟೀಕೆಟಿಪ್ಪಣಿಗಳು

ಮಹಾತ್ಮರು ದೀರ್ಘಾಯುಗಳಾಗಲಿ

ಒಂದು ಮಹಾಪ್ರಯತ್ನದಲ್ಲಿ ಶಾಂತಿ ಸೌಹಾರ್ದತೆ ನೆಲೆಸಲು ಹಿಂದೂ-ಮುಸ್ಲಿಮರಲ್ಲಿಯ ಪರಿಸ್ಥಿತಿ ಸುಧಾರಿಸುವದಕ್ಕಾಗಿ ಮಹಾತ್ಮಾ ಗಾಂಧಿಯವರು ಉಪವಾಸವನ್ನು ಪ್ರಾರಂಭಿಸಿದ್ದರಷ್ಟೆ. ಮನುಷ್ಯತ್ವವನ್ನೆ ಬಿಟ್ಟುಗೊಟ್ಟು ಪಾಶವೀ ಕೃತ್ಯ ಕೈಕೊಂಡವರನ್ನು ದಾರಿಗೆ ತರುವುದಕ್ಕಾಗಿ ಮಹಾತ್ಮರ ಉಪೋಷಣವು ಉಪಾಯವಲ್ಲ, ಮಹಾತ್ಮರು ಉಪವಾಸ ಮಾಡಬಾರದಾಗಿತ್ತು ಎಂದು ಮುಂತಾಗಿ ನಾವು ಬರೆದಿದ್ದೆವು. ಆದರೆ ಮಹಾತ್ಮರ ಆ ರಾಮಬಾಣಾಸ್ತ್ರವು ಎಲ್ಲರ ಮೇಲೆಯೂ ಪರಿಣಾಮಕರವಾಗಿ ಎಲ್ಲ ಪಕ್ಷ ಸಂಘಗಳ ಪ್ರತಿನಿಧಿಗಳೂ ಸೇರಿ ದಿಲ್ಲಿಯಲ್ಲಿ ಶಾಂತಿ ಸೌಹಾರ್ದತೆಯನ್ನು ಕಾಯುವ ಆಶ್ವಾಸನ ಕೊಟ್ಟರು. ರಾಷ್ಟ್ರಪತಿ ಬಾಬೂ ರಾಜೇಂದ್ರ ಪ್ರಸಾದರ ನೇತೃತ್ವದಲ್ಲಿ ಈ ಪ್ರತಿನಿಧಿಗಳೆಲ್ಲ ಮಹಾತ್ಮರನ್ನು ಅವರ ಸಮ್ಮುಖದಲ್ಲಿಯೇ ಶಾಂತಿ ಸ್ಥಾಪನೆಯ ಬಗ್ಗೆ ಆಶ್ವಾಸಿಸಿದರು. ತತ್ಪರಿಣಾಮವಾಗಿ ಮಹಾತ್ಮರು ಐದು ದಿನಗಳ ಉಪವಾಸದ ನಂತರ ರವಿವಾರ ಮಧ್ಯಾನ್ಹ ೧೨-೪೫ಕ್ಕೆ ಉಪವಾಸದ ಪಾರಣೆ ಮಾಡಿದರು. ಮಹಾತ್ಮರ ಇಂದಿನ ವಯೋಮಾನದಲ್ಲಿ ಇಂಥ ಘೋರವಾದ ಪ್ರತಿಜ್ಞೆಯನ್ನು ಅವರು ಕೈಗೊಂಡಿದ್ದನ್ನು ನೋಡಿ ಇಡೀ ಜಗತ್ತೇ ಕಳವಳಗೊಂಡಿತ್ತು. ಆದರೆ ಆಯಾ ಪಕ್ಷಸಂಘಟನಗಳಲ್ಲಿ ವಿವೇಕೋದಯವಾಗಿ ಶಾಂತಿಸ್ಥಾಪನೆಯ ಆಶ್ವಾಸನ ದೊರೆತು ಮಹಾತ್ಮರು ಉಪವಾಸ ನಿಲ್ಲಿಸಿದ್ದರಿಂದ ಆ ಕಳವಳ ದೂರಾಗಿ ಪರಮಾತ್ಮನ ದಯೆಯಿಂದ ಮಹಾತ್ಮರು ನಮ್ಮೆಲ್ಲರಿಗೆ ದೊರೆತದ್ದು ಮಹದ್ಭಾಗ್ಯವೇ. ಮಹಾತ್ಮರು ಸದ್ಯಕ್ಕೆ ಉಪವಾಸ ನಿಲ್ಲಿಸಿದ ಮಾತ್ರಕ್ಕೆ ನಮ್ಮೆಲ್ಲರ ಕೆಲಸ ತೀರಿತೆಂದು ಯಾರೂ ಭಾವಿಸಬಾರದು. ಅವರು ಹಾಕಿದ ಕರಾರುಗಳನ್ನು ಅಕ್ಷರಶಃ ಪಾಲಿಸಲು ಪ್ರತಿಯೊಬ್ಬ ಭಾರತೀಯನು ಪ್ರಯತ್ನಿಸಲಿಕ್ಕಬೇಕು. ಅವರ ಕರಾರುಗಳು ದಿಲ್ಲಿಯ ಮಟ್ಟಿಗೆ ಇದ್ದರೂ ಇಡೀ ದೇಶದಲ್ಲಿ ಶಾಂತಿ ಸೌಹಾರ್ದತೆ ಉಳಿಯಬೇಕೆಂದು ಮಹಾತ್ಮರು ಹಾರೈಸಿದ್ದಾರೆ. ಅದನ್ನು ಕಾಯ್ದುಕೊಳ್ಳದಿದ್ದರೆ ಮತ್ತೆ ಉಪವಾಸ ಮಾಡಬೇಕಾಗುವುದೆಂದೂ ಗಾಂಧೀಜಿ ಈಗಾಗಲೆ ಎಚ್ಚರಿಸಿದ್ದಾರೆ. ಇದನ್ನು ನೆನೆದು ಎಲ್ಲರೂ ಆ ಶಾಂತಿಗಾಗಿ ಸರ್ವ ವಿಧದಿಂದ ಪ್ರಯತ್ನಿಸಬೇಕು. ಮಹಾತ್ಮರು ಇಂತು ಈ ದಿವ್ಯದೊಳಗಿಂದ ಪಾರಾದುದಕ್ಕಾಗಿ ಇಡೀ ದೇಶವೆ ಆನಂದ ಸಾಗರದಲ್ಲಿ ಓಲಾಡುತ್ತಿರುವಾಗ ಯಾವನೊ ಒಬ್ಬ ನಿರಾಶ್ರಿತನು ಅವರ ಪ್ರಾರ್ಥನಾ ಸಭೆಯಲ್ಲಿ ಬಾಂಬನ್ನೆಸೆವ ಘೋರ ಕೃತ್ಯವನ್ನು ಮಾಡಿದನು. ಪುಣ್ಯಕ್ಕೆ ಯಾರಿಗೂ ಅಪಾಯವಾಗಲಿಲ್ಲ. ಇಂಥ ಹೇಡಿತನದ ಕೃತ್ಯ ಮಾಡಿದವನು ಏನನ್ನು ಸಾಧಿಸಲೆಳಸಿದ್ದನೋ ತಿಳಿಯದು! ಮಹಾತ್ಮರು ಈ ಅಪಘಾತದೊಳಗಿಂದಲೂ ಸುಖರೂಪ ಪಾರಾದುದಕ್ಕಾಗಿ ನಾವೆಲ್ಲ ದಯಾಘನನಾದ ಆ ಪರಮಾತ್ಮನನ್ನು ಅಭಿವಂದಿಸಬೇಕಾಗಿದೆ. ಪರಮಾತ್ಮನ ಕೃಪೆಯಿಂದ, ನಮ್ಮೆಲ್ಲರ ಹಾರೈಕೆಯಿಂದ ಮಹಾತ್ಮರು ದೀರ್ಘಾಯುಗಳಾಗಿ ಅವರ ನೇತೃತ್ವ ಭಾರತಕ್ಕೆ ಅಷ್ಟೇ ಅಲ್ಲ ಇಡೀ ಜಗತ್ತಿಗೆ ಸಿಕ್ಕುವಂತಾಗಲಿ.

ಪ್ರಾಂತಾಭಿಮಾನ ಮಾರಕವಲ್ಲ

ಹಿಂದುಸ್ತಾನ ಸ್ವತಂತ್ರವಾದ ಬಳಿಕ ಭಾಷಾನ್ವಯ ಪ್ರಾಂತಗಳನ್ನು ರಚಿಸಲಾಗುವುದೆಂದು ಕಾಂಗ್ರೆಸ್ಸು ಎಂದಿನಿಂದಲೂ ಆಶ್ವಾಸಿಸುತ್ತ ಬಂದಿದೆ. ತನ್ನ ಆಡಳಿತದಲ್ಲಿ ಅದರಂತೆ ನಡೆದುಕೊಂಡಿದೆ. ಈಗ ಭಾರತ ಸ್ವತಂತ್ರವಾಗಿದ್ದರಿಂದ ಆಯಾ ಭಾಷೆಯ ಜನರು ತಮ್ಮ ನೈಜವಾದ ಹಕ್ಕುಬಾಧ್ಯತೆಗಳನ್ನು ಪಡೆಯುವುದಕ್ಕಾಗಿ ಸ್ವತಂತ್ರ ಪ್ರಾಂತಗಳನ್ನು ಬೇಡುವುದರಲ್ಲಿ ತಪ್ಪೇನೂ ಇಲ್ಲ. ಸದ್ಯದ ಪರಿಸ್ಥಿತಿಯಲ್ಲಿ ಹೊಸ ಪ್ರಾಂತಗಳನ್ನು ನಿರ್ಮಿಸುವದು ಬೇಡ. ಅದರಿಂದ ಮತ್ತೆ ಅನೇಕ ತೊಡಕುಗಳು ಉದ್ಭವಿಸುವವು ಎಂದು ಹೇಳುವುದಾದರೆ ಎಲ್ಲ ಪ್ರಾಂತಗಳಿಗೂ ಅದು ಅನ್ವಯಿಸತಕ್ಕದ್ದು. ಕೆಲ ಪ್ರಾಂತಗಳನ್ನು ಪ್ರತ್ಯೇಕ ಮಾಡಿದರೆ ಆ ತೊಡಕುಗಳು ಬರುವದಿಲ್ಲ. ದೇಶದ ಸದ್ಯದ ಪರಿಸ್ಥಿತಿಗೆ ಅದರಿಂದ ಯಾವ ತರದಿಂದಲೂ ಹಾನಿಯಿಲ್ಲ. ಬೇರೆ ಪ್ರಾಂತಗಳನ್ನು ಪ್ರತ್ಯೇಕಿಸಿದ್ದಾದರೆ ಇವೆಲ್ಲ ತೊಡಕು ಉತ್ಪನ್ನವಾಗುವವು ಎಂದು ಹೇಳುವದು ಧಾರ್ಷ್ಟ್ಯದ ಮಾತೇ ಸೈ. ಪ್ರಾಂತಗಳ ವಿಭಜನೆಯಲ್ಲಿ ಗಡಿ ಮುಂತಾದ ಪ್ರಶ್ನೆಗಳು ಸಹಜವಾಗಿ ಏಳುವವು. ಅವರಲ್ಲಿ ಬಗೆ ಬಗೆಯ ತಿಕ್ಕಾಟಗಳೂ ಏಳುವ ಸಂಭವವುಂಟು. ಆದರೆ ಗಡಿ ನಿರ್ಣಯಸಮಿತಿಯನ್ನು ನೇಮಿಸಿ ಇವೆಲ್ಲವನ್ನು ಪರಿಹರಿಸಿಕೊಳ್ಳಬಹುದು. ಒಂದು ವೇಳೆ ಸದ್ಯದ ಪರಿಸ್ಥಿತಿಯಲ್ಲಿ ಇದು ಶಕ್ಯವಿಲ್ಲದಿದ್ದರೆ ಯಾವ ಪ್ರಾಂತವನ್ನೂ ಬೇರ್ಪಡಿಸಲು ಹೋಗಬೇಡಿರಿ. ಆಂಧ್ರವನ್ನು ಪ್ರತ್ಯೇಕಿಸುವದು ಸುಲಭ, ಕರ್ನಾಟಕ ಮಹಾರಾಷ್ಟ್ರಗಳನ್ನು ಪ್ರತ್ಯೇಕಿಸುವದು ಬಹಳ ತೊಡಕಿನದು ಎಂದು ತಿಳಿಯುವದು ಒಂದು ಬಗೆಯ ಪಕ್ಷಪಾತವೆಂದೇ ಹೇಳಬೇಕಾಗುವುದು. ಆಂಧ್ರವನ್ನು ಪ್ರತ್ಯೇಕಿಸುವಾಗ ಗಡಿಗಳ ಪ್ರಶ್ನೆ ಬರುವದಿಲ್ಲವೆ? ಮದ್ರಾಸದ ಬಗ್ಗೆ ಆಂಧ್ರ ತಮಿಳ ಮೊದಲಾದವರಲ್ಲಿ ತಿಕ್ಕಾಟ ನಡೆಯುವದಿಲ್ಲವೆ? ಆದುದರಿಂದ ಹಿಂದುಸ್ತಾನ ಸರಕಾರದ ವರಿಷ್ಠರು ಈ ಬಗೆಯ ಅನ್ಯಥಾ ಕಲ್ಪನೆ ಮಾಡಿಕೊಂಡು ಉಳಿದ ಪ್ರಾಂತಗಳನ್ನು ನಿರ್ಮಿಸುವದನ್ನು ಮುಂದಕ್ಕೆ ಹಾಕಕೂಡದು. ಸ್ವತಂತ್ರ ಪ್ರಾಂತ ರಚನೆಯಿಂದ ಇಲ್ಲವೆ ಪ್ರಾಂತೀಯ ಭಾವನೆಯನ್ನು ತಾಳುವದರಿಂದ ದೇಶಕ್ಕೆ ಯಾವ ಬಗೆಯ ಹಾನಿಯೂ ಆಗಲಾರದು. ಅದು ಮಾರಕವೂ ಆಗಲಾರದು, ತದ್ವಿರುದ್ಧವಾಗಿ ಆಯಾ ಪ್ರಾಂತೀಯ ಜನರು ಒತ್ತಟ್ಟಿಗೇ ಇದ್ದವಾದರೆ ಅವರ ಮತ್ತು ಇಡೀದೇಶದ ಉನ್ನತಿ ಹೆಚ್ಚುವದು. ಇದನ್ನು ನೆನೆದು ಕಾಂಗ್ರೆಸ್ ವರಿಷ್ಠರು ಮತ್ತು ಹಿಂದುಸ್ತಾನ ಸರಕಾರದ ವರಿಷ್ಠರು ಕರ್ನಾಟಕ ಮಹಾರಾಷ್ಟ್ರ ಮೊದಲಾದ ಪ್ರಾಂತಗಳನ್ನು ಆಂಧ್ರದೊಡನೆಯೇ ನಿರ್ಮಿಸಿ ಎಲ್ಲ ಪ್ರಾಂತಗಳಿಗೂ ಸಮಾನವಾದ ನ್ಯಾಯವನ್ನು ದಯಪಾಲಿಸಿದ ಶ್ರೇಯಸ್ಸನ್ನು ಪಡೆಯಬೇಕೆಂದು ಕೇಳಿಕೊಳ್ಳುತ್ತೇವೆ.

ಅಪಪ್ರಚಾರ ಸಲ್ಲದು

ವರಿಷ್ಠರು ಇಂತು ಸ್ವತಂತ್ರ ಪ್ರಾಂತ ನಿರ್ಮಾಣದ ಬಗ್ಗೆ ಉದಾಸೀನ ಭಾವವನ್ನು ತಾಳುತ್ತಿರುವಾಗ ಕರ್ನಾಟಕದಲ್ಲಿಯ ಕೆಲ ಜನರು ಮತ್ತು ಮಹಾರಾಷ್ಟ್ರದಲ್ಲಿಯ ಕೆಲ ಜನರು ನಿರರ್ಥಕವಾದ ವಿವಾದವನ್ನೆಬ್ಬಿಸಿ ಮತ್ತಷ್ಟು ತೊಡಕನ್ನು ಉದ್ಭವಿಸುತ್ತಿರುವರೆಂದು ವಿಷಾದದಿಂದ ಹೇಳಬೇಕಾಗುವದು. ಉತ್ತರ ಕನ್ನಡ ಜಿಲ್ಲೆಯ ಹಲವು ಕೊಂಕಣಿಗಳು ಕೊಂಕಣೀ ಪ್ರಾಂತವನ್ನು ಬೇಡುತ್ತಿರುವರು. ಉತ್ತರ ಕನ್ನಡ ಜಿಲ್ಲೆಯಲ್ಲಿ ಕೆಲವು ಕೊಂಕಣಿಗಳು ಇದ್ದ ಮಾತ್ರಕ್ಕೆ ಅದು ಕೊಂಕಣಿ ಜಿಲ್ಲೆಯಾಗದು. ಹಿಂದಿನಿಂದಲೂ ಅದು ಕರ್ನಾಟಕದ ಭಾಗವಾಗಿದೆ. ಕೊಂಕಣಿಗಳಂತೆ ಅಲ್ಲಿ ಕನ್ನಡಿಗರು ಹೆಚ್ಚಾಗಿ ಇದ್ದಾರೆ. ಬಹುಸಂಖ್ಯ ಜನರ ಅಭಿಮತದಂತೆ ಪ್ರಾಂತಗಳನ್ನು ನಿರ್ಮಿಸುವದು ಕ್ರಮಪ್ರಾಪ್ತ. ಸೀಮಾ ಸಮಿತಿಯು ನೇಮಿಸಲ್ಪಟ್ಟಾಗ ಯಾವ ಯಾವ ಭಾಗವನ್ನು ಎಲ್ಲೆಲ್ಲಿ ಸೇರಿಸಬೇಕೆಂಬುದನ್ನು ವಿಚಾರಿಸಲಾಗುವದು. ಮತ್ತು ಸೀಮಾ ಸಮಿತಿಯ ನಿರ್ಣಯದಂತೆ ಗಡಿಗಳೇರ್ಪಡಿಸಲ್ಪಡುವವು. ಹೀಗೆ ಇರುವಾಗ ಈಗಲೆ ಕೊಂಕಣಿ ಕನ್ನಡ ಮೊದಲಾದ ಪ್ರಶ್ನೆಗಳನ್ನು ಎತ್ತಿ ಸ್ವತಂತ್ರ ಪ್ರಾಂತ ನಿರ್ಮಾಣವನ್ನು ಮುಂದೆ ಹಾಕಿಸುವದು ಯಾವ ಬಗೆಯಿಂದಲೂ ಜಾಣತನವಾಗಲಾರದು. ಹೀಗೆ ಬೇರೆ ಬೇರೆ ತೊಡಕಿನ ಪ್ರಶ್ನೆಗಳೇಳುವವೆಂದು ವರಿಷ್ಠರಿಗೆ ತಿಳಿದಿದ್ದುದರಿಂದಲೆ ಅವರು ಆಂಧ್ರವನ್ನು ಬಿಟ್ಟು ಉಳಿದ ಹೊಸ ಪ್ರಾಂತಗಳ ರಚನೆಗೆ ವಿರೋಧ ಪ್ರದರ್ಶಿಸುತ್ತಿರುವರು. ಕೊಂಕಣಿಗಳ ಈ ಚಳವಳಿಗೆ ಕೆಲ ಮರಾಠಿಗರು ಪ್ರೋತ್ಸಾಹ ಕೊಡುತ್ತಿರುವರಲ್ಲದೆ ಕೊಂಕಣ ಪ್ರಾಂತ ಸಾಧ್ಯವಾಗದಿದ್ದರೆ ಮಹಾರಾಷ್ಟ್ರದಲ್ಲಿಯೇ ಆ ಭಾಗವನ್ನು ಸೇರಿಸಿಕೊಂಡುಬಿಡುವ ಹೊಂಚು ಹಾಕಿದ್ದಾರೆ. ಮಹಾರಾಷ್ಟ್ರ ಪ್ರಾಂತಿಕ ಕಾಂಗ್ರೆಸ ಸಮಿತಿಯ ಅಧ್ಯಕ್ಷ ಶ್ರೀ ಕೇಶವರಾವ ಜೇಧೆ ಇವರ ಅಧ್ಯಕ್ಷತೆಯಲ್ಲಿ ಸೇರಿದ್ದ ಸಂಯುಕ್ತ ಮಹಾರಾಷ್ಟ್ರ ಪರಿಷತ್ತಿನಲ್ಲಿ ಬೆಳಗಾವಿ, ಕಾರವಾರ ಜಿಲ್ಲೆ ಮಹಾರಾಷ್ಟ್ರದ್ದು ಕನ್ನಡಿಗರು ಅಲ್ಲಿ ನಡೆಸಿರುವ ಕೈವಾಡವನ್ನು ತಡೆಯತಕ್ಕದ್ದು ಎಂದು ಮುಂತಾಗಿ ಆಕ್ರೋಶ ಮಾಡಿದ್ದಾರೆ. ಪ್ರಾಂತಿಕ ಕಾಂಗ್ರೆಸ ಸಮಿತಿಯಂಥ ಹೊಣೆಗಾರ ಸ್ಥಳದಲ್ಲಿ ಕುಳಿತುಕೊಂಡು ಈ ಬಗೆಯ ಅಪಪ್ರಚಾರ ಮಾಡುವದು ಎಂದಿಗೂ ಸಲ್ಲದು. ಮರಾಠೀ ಪತ್ರಿಕೆಯ ಹಿಂದಿನ ಸಂಪಾದಕರಾಗಿರುವ ಡಾ. ವಿ. ಗೋಖಲೆಯವರೂ ಬೆಳಗಾವಿಯಲ್ಲಿ ೧೦೦ಕ್ಕೆ ೬೦ ರಷ್ಟು ಜನ ಮರಾಠಿಗರಿರುವರೆಂದು ಹೇಳಿರುವರು. ಯಾವ ಆಧಾರದ ಮೇಲೆ ಅವರು ಹಾಗೆ ಹೇಳುತ್ತಿರುವರೋ ತಿಳಿಯದು. ಅದು ಏನೇ ಇದ್ದರೂ ಗಡಿ ನಿರ್ಣಯ ಸಮಿತಿಯ ಮುಂದೆ ತಮ್ಮ ಹಕ್ಕು ಬಾಧ್ಯತೆಗಳನ್ನು ಮಂಡಿಸಬೇಕಲ್ಲದೆ ಹೊಣೆಗೇಡಿಗಳಂತೆ ಮನಸ್ಸಿಗೆ ಬಂದಂತೆ ಹರಟಿ ಪರಿಸ್ಥಿತಿಯನ್ನು ಮತ್ತಷ್ಟು ಕೆಡಿಸಬಾರದು. ಮರಾಠಿಗರು ಮತ್ತು ಕೊಂಕಣಿಗರು ಈ ರೀತಿ ಅಪಪ್ರಚಾರ ನಡೆಸಿ ಪರಿಸ್ಥಿತಿಯನ್ನು ಹದಗೆಡಿಸುತ್ತಿರುವದರಿಂದಲೆ ವರಿಷ್ಠರು ಈ ಪ್ರಾಂತಗಳ ಪುನರ್ನಿರ್ಮಾಣದ ಪ್ರಶ್ನೆಯನ್ನು ಸದ್ಯಕ್ಕೆ ಬಿಟ್ಟುಗೊಟ್ಟಿರುವರು. ಇದರಿಂದ ಅವರಾದರೂ ಬುದ್ಧಿಗಲಿತು ಮರಾಠಿಗರು ಈ ಅಪಪ್ರಚಾರವನ್ನು ಬಿಟ್ಟುಕೊಡುವದು ಒಳ್ಳೇದು. ಕೊಂಕಣಿಗಳಾದರೂ ಈ ಸಮಯದಲ್ಲಿ ದೂರದೃಷ್ಟಿಯಿಂದ ವಿಚಾರಿಸಿ ಕರ್ನಾಟಕದಲ್ಲಿ ಕೂಡುವದರಲ್ಲಿಯೇ ತಮ್ಮ ಉನ್ನತಿಯಿದೆಯೆಂಬುದನ್ನು ತಿಳಿದುಕೊಂಡು ಅದರಂತೆ ವರ್ತಿಸಬೇಕೆಂದು ಒತ್ತಾಯ ಪೂರ್ವಕ ಸೂಚಿಸುತ್ತೇವೆ.

ಹಿಂದುಸ್ತಾನ– ಪಾಕಿಸ್ತಾನ

ಪಾಕಿಸ್ತಾನ ಹಿಂದುಸ್ತಾನಗಳ ಸಮಸ್ಯೆ ಇನ್ನೂ ಬಗೆಹರಿಯಲೊಲ್ಲದು. ಎರಡೂ ದೇಶಗಳಲ್ಲಿ ಸಂಪೂರ್ಣ ಶಾಂತಿಯೂ ನೆಲೆಗೊಳ್ಳಲೊಲ್ಲದು. ಇದರಿಂದ ಮಹಾತ್ಮರಂಥವರು ಆತ್ಮಾಹುತಿ ಕೊಡುವ ಪ್ರಸಂಗವೂ ಬಂದಿತ್ತು. ಈಗಲೂ ಅದು ಪೂರ್ಣ ಇಲ್ಲದಂತಾಗಿದೆಯೆಂದು ಹೇಳಲಿಕ್ಕೆ ಬರುವುದಿಲ್ಲ. ಎರಡೂ ರಾಷ್ಟ್ರಗಳಲ್ಲಿಯ ವಿವಾದದ ಮುದ್ದೆಗಳನ್ನು ಪರಸ್ಪರ ಸ್ನೇಹಪೂರಿತ ವಿಚಾರ ವಿನಿಮಯದಿಂದ, ಶಕ್ಯವಾಗದಿದ್ದರೆ ನಿಷ್ಪಕ್ಷಪಾತ ಪಂಚಾಯತಿಯಿಂದ ಬಗೆಹರಿಸಿಕೊಳ್ಳುವುದು ನ್ಯಾಯ್ಯವು ಶಿಷ್ಟಸಮ್ಮತವು. ಅದನ್ನು ಬಿಟ್ಟುಗೊಟ್ಟು ಹಿಂಸೆಗೆ ಪ್ರೋತ್ಸಾಹಕರಾದ ರೀತಿಯಲ್ಲಿ ಯಾವದೇ ಸರಕಾರದ ಧುರೀಣರು ಇಲ್ಲವೆ ಜನರು ವರ್ತಿಸುವುದು ಇಷ್ಟವಲ್ಲ. ತದ್ವಿರುದ್ಧವಾಗಿ ಘಾತಕವಾಗಿದೆ. ಕಾಶ್ಮೀರ ಪ್ರಶ್ನೆಯ ಸಂಬಂಧದಲ್ಲಿ ಪಾಕಿಸ್ತಾನ ಸರಕಾರದವರು ತಾಳಿದ ಧೋರಣವು ಸ್ನೇಹ ಸೌಹಾರ್ದತೆಗೆ ಅನುಕೂಲವಾಗಿರುವದಿಲ್ಲ; ಅದನ್ನು ಮತ್ತಷ್ಟು ಹದಗೆಡಿಸುವಂತಹದಾಗಿದೆ. ನಮ್ಮ ನಮ್ಮಲ್ಲಿಯೆ ಬಗೆ ಹರಿಯಬೇಕಾಗಿದ್ದ ಈ ಪ್ರಶ್ನೆ ಈಗ ಭದ್ರತಾ ಮಂಡಳದ ಮುಂದೆ ಹೋಗಿದ್ದು ಅದರ ನಿರ್ಣಯದಂತೆ ನಡೆಯಬೇಕಾದ ಪ್ರಸಂಗ ಬಂದಿದೆ. ಎರಡೂ ಸರಕಾರಗಳಿಗೆ ಒಪ್ಪಿಗೆಯಾಗುವಂಥ ಸಮಂಜಸ ನಿರ್ಣಯವನ್ನು ಅದು ಕೊಡುವದೊ ಇಲ್ಲವೆ ತಿಕ್ಕಾಟ ಮತ್ತಷ್ಟು ಹೆಚ್ಚುವಂತೆ ಪಕ್ಷಪಾತೀ ತಂತ್ರವನ್ನು ನಡೆಸುವದೋ ನೋಡಬೇಕಾಗಿದೆ. ಅದೇನೆ ಇದ್ದರೂ ಎರಡೂ ನೆರೆ ರಾಷ್ಟ್ರಗಳು ಪರಸ್ಪರ ಚೆನ್ನಾಗಿ ತಿಳಿದುಕೊಂಡು ಕೂಡಿಕೊಳ್ಳುವ ಧೋರಣವನ್ನು ವಹಿಸಬೇಕು. ಇದರಲ್ಲಿಯೇ ಎರಡೂ ರಾಷ್ಟ್ರಗಳ ಹಿತವಿದೆ. ಎರಡೂ ಸರಕಾರಗಳು ವಿಶೇಷತಃ ಪಾಕಿಸ್ತಾನ ಸರಕಾರವು ಸ್ವಲ್ಪ ತಾಳ್ಮೆಯಿಂದ ವರ್ತಿಸಿ ಸಮಸ್ಯೆಗಳ ಪರಿಹಾರ ಮಾಡಿಕೊಳ್ಳಬೇಕೆಂದು ಸೂಚಿಸಬಯಸುತ್ತೇವೆ.

ಬಟ್ಟೆಯ ವಿನಿಯಂತ್ರಣ

ಹಿಂದುಸ್ತಾನ ಸರಕಾರವು ದೀರ್ಘ ವಿಚಾರ ವಿನಿಮಯದ ನಂತರ ಬಟ್ಟೆಯ ಮೇಲಿನ ನಿಯಂತ್ರಣವನ್ನು ಬಹುಮಟ್ಟಿಗೆ ಸಡಿಲಿಸುವ ಪ್ರಕಟನೆಯನ್ನು ಹೊರಡಿಸಿದೆ. ಉತ್ಪಾದನೆಯ ಮೇಲೆ ಕೆಲ ನಿರ್ಬಂಧಗಳನ್ನು ಇಟ್ಟಿದ್ದು ಹಂಚಿಕೆ ಮತ್ತು ಬೆಲೆಯ ಮೇಲಿನ ಎಲ್ಲ ನಿಯಂತ್ರಣಗಳನು ರದ್ದುಗೊಳಿಸಿದೆ. ಗಿರಣಿಗಾರರು ವ್ಯಾಪಾರಸ್ಥರು ಸರಕಾರದ ಈ ಧೋರಣದಲ್ಲಿ ಸಹಕರಿಸಿದರೆ ಮಾತ್ರ ಇದು ಯಶಸ್ವಿಯಾಗಬಲ್ಲದು. ಇಲ್ಲದಿದ್ದರೆ ಬಟ್ಟೆಯ ಕೊರತೆ ಮತ್ತಷ್ಟು ಹೆಚ್ಚಿ, ಸರಕಾರವು ಈಗಲೆ ಸೂಚಿಸಿದಂತೆ ಮತ್ತೆ ನಿಯಂತ್ರಣ ಹೇರುವ ಪ್ರಸಂಗ ಬರಬಲ್ಲದು. ಹೀಗಾಗದಂತೆ ನೋಡಿಕೊಳ್ಳುವದು ಅವಶ್ಯವಾಗಿದೆ. ಯುದ್ಧ ಕಾಲದಲ್ಲಿ ಬಟ್ಟೆಯ ಕೊರತೆ ಹೆಚ್ಚಾದ್ದರಿಂದ ೧೯೪೩ ರಲ್ಲಿ ಬಟ್ಟೆಯ ಮೇಲೆ ನಿಯಂತ್ರಣ ಹಾಕಲಾಯಿತು. ಆದರೆ ಲಾಭಬಡಕ ವ್ಯಾಪಾರಿಗಳು ಸರಕಾರದ ಈ ಧೋರಣದಲ್ಲಿ ಸಹಕರಿಸಲಿಲ್ಲದ್ದರಿಂದ ಅದು ಯಶಸ್ವಿಯಾಗಲಿಲ್ಲೆಂದು ಎಲ್ಲರೂ ಒಪ್ಪತಕ್ಕ ವಿಷಯವಾಗಿದೆ. ಸರಕಾರದಲ್ಲಿ ಇದರ ಅರಿವಿಲ್ಲೆಂದು ಹೇಳಲಾಗದು. ಆಹಾರ ಪದಾರ್ಥಗಳ ಕಳ್ಳಪೇಟೆಗಿಂತ ಇದು ಹೆಚ್ಚು ಉಗ್ರವಾಗಿತ್ತೆಂದು ಹೇಳಲು ಪ್ರತ್ಯವಾಯವಿಲ್ಲ. ನಿಯಂತ್ರಣ ಈ ಸಲ [illegible] ರಿಂದ ಜನ ಎಷ್ಟೋ [illegible] ಬಟ್ಟೆಯ [illegible] ಈ ಜವಾಬ್ದಾರಿ [illegible] ಮೊದಲೇ [illegible] ಸಂಬಂಧಪಟ್ಟವರು [illegible] ಪ್ರಾಪ್ತವಾಗಿದೆ. [illegible] ಬಿಟ್ಟುಕೊಡುವ [illegible] ಅಧಿಕಾರ್ಯ [illegible] ಹೆಚ್ಚು [illegible] ಆವಶ್ಯವಾಗಿದೆ. [illegible] ಬಹಳ ದಿನಗಳಿಂದ [illegible] ಕ್ರಮವು ಹೋಗಿದ್ದಿದೆ. ಈಗಲಾದರೂ [illegible] ಲಾಭಬಡುಕರಾಗದೆ ಜನ ಸಾಮಾನ್ಯರ [illegible] ವುದಕ್ಕಾಗಿ ಎಲ್ಲರಿಗೂ ಬಟ್ಟೆ ಸಿಕ್ಕುವಂತೆ ವ್ಯವಸ್ಥಿತವಾಗಿ ಕಾರ್ಯತತ್ಪರರಾಗಬೇಕು.

ಸಾಮ್ಯವಾದಿಗಳಿಗೆ ಸೂಕ್ತ ಸಲಹೆ


ಸ್ವಾತಂತ್ರ್ಯವನ್ನು ಸಂಪಾದಿಸಿ ಅದನ್ನು ಸುಸ್ಥಿರವಾಗಿ ಇಟ್ಟುಕೊಳ್ಳುವದಕ್ಕಾಗಿ ದೇಶದಲ್ಲಿಯ ಎಲ್ಲ ಪಕ್ಷಸಂಘಟನಗಳು ಸಹಕರಿಸಿ ಕಾರ್ಯ ಮಾಡುತ್ತ ಹೋಗುವದು ಕ್ರಮಪ್ರಾಪ್ತ. ಇಂಗ್ಲಂಡ ಮೊದಲಾದ ಸ್ವತಂತ್ರ ರಾಷ್ಟ್ರಗಳಲ್ಲಿ ದೇಶಕ್ಕೆ ಗಂಡಾಂತರ ಬಂದಾಗ ಎಲ್ಲ ಪಕ್ಷಸಂಘಗಳು ಕೂಡಿಕೊಂಡು ಗಂಡಾಂತರವನ್ನೆದುರಿಸುವದುಂಟು. ನಮ್ಮ ದೇಶದಲ್ಲಿಯೂ ಸದ್ಯಕ್ಕೆ ಗಂಡಾಂತರ ಬಂದಿದೆ. ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಪರಕೀಯರ ಪ್ರತ್ಯಕ್ಷ ಅಪ್ರತ್ಯಕ್ಷ ಕೈವಾಡವನ್ನು ಹೊಡೆದು ಹಾಕಬೇಕಾಗಿದೆ. ಇದೆಲ್ಲಕ್ಕೂ ಮಹತ್ವದೆಂದರೆ ಸದ್ಯಕ್ಕೆ ನೆಲಸಿದ ಅಶಾಂತಿಯನ್ನು ಇಲ್ಲದಂತೆ ಮಾಡಿ ಎಲ್ಲೆಲ್ಲಿಯೂ ಶಾಂತಿ ಸೌಹಾರ್ದತೆಯನ್ನು ನೆಲೆಗೊಳಿಸಿ ಜನ ಸುಖಸಮೃದ್ಧಿಯಲ್ಲಿ ಬಾಳುವಂತೆ ಮಾಡಬೇಕಾಗಿದೆ. ಈ ಪರಿಸ್ಥಿತಿಯಲ್ಲಿ ಆಯಾ ಪಕ್ಷಸಂಘಟನಗಳವರು ಮತಭೇದವನ್ನು ಬದಿಗಿಟ್ಟು ಸರಕಾರದ ಕೂಡ ಸಹಕರಿಸಬೇಕು. ಸರಕಾರ ಕೈಕೊಳ್ಳುವ ವಿವಿಧ ಯೋಜನೆಗಳಲ್ಲಿ ಮನಸಾ ಸಹಕರಿಸಬೇಕು. ಈ ಸೂಕ್ತ ಮಾರ್ಗವನ್ನು ಬಿಟ್ಟುಗೊಟ್ಟು ಸರಕಾರದ ಕೂಡ ಅಸಹಕಾರ ಮಾಡಿದರೆ ಇಲ್ಲವೆ ಉದಾಸೀನ ಧೋರಣವನ್ನಿಟ್ಟುಕೊಂಡರೆ ದೇಶಕ್ಕೆ ದ್ರೋಹ ಬಗೆದಂತಾಗುವದು. ಸಾಮ್ಯವಾದಿಗಳಾಗಲಿ, ಸಮಾಜಸತ್ತಾವಾದಿಗಳಾಗಲಿ ಇಲ್ಲವೆ ಹಿಂದೂ ಮಹಾಸಭೆಯವರಾಗಲಿ ಈ ಸಮಯದಲ್ಲಿ ತಮ್ಮ ತಮ್ಮ ಮತಭೇದಗಳನ್ನು ಬಿಟ್ಟುಗೊಟ್ಟು ಕಾಂಗ್ರೆಸಿನೊಡನೆ ಸಹಕರಿಸಿ, ಧ್ಯೇಯವನ್ನು ಸಾಧಿಸಿಕೊಳ್ಳಬೇಕು. ಪರಿಸ್ಥಿತಿಯಲ್ಲಿ [illegible] ಹಿಂದುಸ್ತಾನದ ಆಡಳಿತ ಸುಭದ್ರ ತಳಹದಿಯಲ್ಲಿ ಸಾಗುವಂತಾದ ನಂತರ ಬೇಕಾದರೆ ತಮ್ಮ ವಿಶಿಷ್ಟ ತತ್ವಪ್ರಣಾಲಿಯ ಜಯಕ್ಕಾಗಿ ಹೋರಾಡಲಿ. ಯಾರೂ ಅದಕ್ಕೆ ಅಡ್ಡಿಯನ್ನು ಒಡ್ಡಲಾರರು. ಪರದೇಶಗಳಲ್ಲಿ ಇದೇ ಬಗೆಯ ಸಂಪ್ರದಾಯವುಂಟು. [illegible] ಅಧಿಕಾರ [illegible] ದೇಶದಲ್ಲಿ ಅನೇಕರನ್ನು [illegible] ಸಾಧ್ಯವಾಗುವದಿಲ್ಲ. ಅಷ್ಟೇ ಅಲ್ಲ ವಿರುದ್ಧವಾಗಿ ದೇಶಕ್ಕೆ [illegible] ಸಾಮ್ಯವಾದಿಗಳಿಗೆ [illegible] ಸಾಮ್ಯವಾದಿಗಳಿಗೆ ಮತ್ತು [illegible] ಸಲಹೆಯನ್ನು ಕೊಟ್ಟದ್ದುಂಟು. [illegible] ಕಾಂಗ್ರೆಸ್ಸಿನ [illegible] ಸಾಮ್ಯವಾದಿಗಳು [illegible] ಕಾಂಗ್ರೆಸ್ಸಿನ [illegible] ಈ [illegible] ಸಾಮ್ಯವಾದಿಗಳು [illegible] ಕಾರ್ಯತತ್ಪರರಾಗುವರೆಂದು [illegible] ಹಾರೈಸುತ್ತೇವೆ.



ಪರ್ಯಾಯದಿಂದಿಳಿದ ಶೀರೂರ ಮಠದ
ಶ್ರೀ ಲಕ್ಷ್ಮೀಂದ್ರ ತೀರ್ಥರು



ಉಡುಪಿಯ ಶ್ರೀಕೃಷ್ಣ



ಪರ್ಯಾಯ ಪಟ್ಟವೇರಿದ ಸೋದೇಮಠದ
ಶ್ರೀ ವಿಶ್ವೋತ್ತಮ ತೀರ್ಥರು

ಉಡುಪಿಯಲ್ಲಿ ವೈಭವದ ಪರ್ಯಾಯೋತ್ಸವ

ಪಲಿಮಾರು ಮಠಕ್ಕೆ ಹೊಸ ಯತಿಗಳು

ಏಕೀಕರಣ ಸಭೆ, ಧರ್ಮ ಪರಿಷತ್ತು ಇತ್ಯಾದಿ ಕಾರ್ಯಕ್ರಮ

ಕಳೆದ ವಾರ ಭಾರತದ ಅತಿ ಪ್ರಸಿದ್ಧ ಪುಣ್ಯ ಕ್ಷೇತ್ರಗಳಲ್ಲೊಂದಾದ ಉಡುಪಿಯಲ್ಲಿ ಏಳು ಶತಮಾನಗಳ ಹಿಂದೆ ಶ್ರೀಮನ್ಮಧ್ವಾಚಾರ್ಯರಿಂದ ಪ್ರವರ್ತಿಸಲ್ಪಟ್ಟ ಸಪ್ತೋತ್ಸವ, ಪರ್ಯಾಯೋತ್ಸವಗಳು ವಿಜೃಂಭಣೆಯಿಂದ ನೆರವೇರಿದವು. ತಾ. ೨೦ ಕ್ಕೆ ಮಧ್ವನವಮಿಯ ವರೆಗೂ ನಿತ್ಯವೂ ಹಗಲು ರಾತ್ರಿ ಪೂಜಾ ಉತ್ಸವ ಮೊದಲಾದ ಕಾರ್ಯಕ್ರಮಗಳು ಎಡೆ ಬಿಡದೆ ಸಾಗಿದ್ದವು. ದೇಶ ವಿದೇಶಗಳಿಂದ ಸಾವಿರ ಗಟ್ಟಲೆ ಭಕ್ತರು—ಮಾಧ್ವರು ಮತ್ತು ಮಾಧ್ವರಲ್ಲದವರು ಸೇರಿಯೆ—ಕಿಕ್ಕಿರಿದು ನೆರೆದಿದ್ದರು. ಮರಾಠಿಯಿಂದ ಮಲೆಯಾಳಿಯ ವರೆಗಿನ ನಾನಾ ಭಾಷೆಗಳ ಧ್ವನಿಮೇಳವನ್ನು ಉಡುಪಿಯಲ್ಲಿ ಕೇಳಬಹುದಾಗಿತ್ತು. ಈ ಸಂದರ್ಭದ ಉಪಯೋಗ ಪಡೆದು ಅನೇಕ ಸಂಘ ಸಂಸ್ಥೆಗಳ ಪರವಾಗಿ ಸಾಹಿತ್ಯಕ ಮತ್ತು ಧಾರ್ಮಿಕ ಸಭೆ ಸಮ್ಮೇಲನಗಳೂ ಜರಗಿದ್ದವು.

ಪ್ರತಿವರ್ಷ ಜರುಗುವ ಸಪ್ತೋತ್ಸವನಲ್ಲದೆ ಎರಡು ವರ್ಷಕ್ಕೊಮ್ಮೆ ನಡೆಯುವ ಪರ್ಯಾಯೋತ್ಸವವೂ ಈ ತಡವೆ ಸಂಗಡಿಸಿದ್ದರಿಂದ ಅದು ಹೆಚ್ಚು ವೈಭವಶಾಲಿಯಾಗಿತ್ತು. ಮಧ್ವಪ್ರತಿಷ್ಠಿತ ಕೃಷ್ಣಮೂರ್ತಿಯ ಪೂಜೆಯ ಸರದಿ ಜನೇವರಿ ೧೮ ಕ್ಕೆ ಶ್ರೀ ಶೀರೂರು ಮಠದವರ ಕೈಯಿಂದ ಶ್ರೀಸೋದೇಮಠಕ್ಕೆ ವರ್ಗಾಯಿಸಲ್ಪಟ್ಟಿತು.

ವರ್ಷವರ್ಷವೂ ನಡೆವ ಸಪ್ತೋತ್ಸವ (ತಾ. ೯ ಕ್ಕೆ ಪ್ರಾರಂಭವಾಗಿ ತಾ. ೧೫ ಕ್ಕೆ ಅವಭೃತ ಸ್ನಾನದೊಂದಿಗೆ ಸಮಾಪ್ತವಾಯಿತು. ಮಕರ ಸಂಕ್ರಮಣದ ಉತ್ಸವ ಒಳ್ಳೆ ಪ್ರೇಕ್ಷಣೀಯವಾಗಿರುತ್ತದೆ. ಮೂರು ಅತಿ ಸುಂದರವಾಗಿ ಅಲಂಕೃತವಾದ ರಥಗಳು ಕೃಷ್ಣನ ತೆಂಕಣ ಬೀದಿಯಲ್ಲಿ ಸಾಲಾಗಿ ನಿಂತಿರುವ ದೃಶ್ಯ ಅಸಾಮಾನ್ಯವಾದುದೇ ಸರಿ. ತಾ. ೧೫ ಕ್ಕೆ ಹಗಲಲ್ಲೆ ಮಹೋತ್ಸವ ಜರಗಿ ಅವಭೃತ ಸ್ನಾನವಾಯಿತು. ಉತ್ಸವಾಂತದಲ್ಲಿ ಅವಭೃತ ಸ್ನಾನ ಮಾಡುವ ಕೃಷ್ಣಮೂರ್ತಿಯೊಡನೆ ಮಧ್ವಸರೋವರದಲ್ಲಿ ಸ್ನಾನ ಮಾಡುವ ಪುಣ್ಯಕ್ಕಾಗಿ ನುಗ್ಗುವ ಜನರ ಗಡಿಬಿಡಿಯಲ್ಲಿ ಅಪಘಾತಗಳಾಗದಂತೆ ತಡೆಯುವ ಶಕ್ತಿ ಕೃಷ್ಣ ಮಹಿಮೆಗೊಂದಕ್ಕೇ ಇದೆಯೆನ್ನಬೇಕು!

ಸುಧಾ ಮಂಗಲ

ಅವಭೃತ ಸ್ನಾನದ ಮರುದಿನ ಉತ್ಸವವೇನೂ ಇರದ ಖಾಲಿ ದಿನವಾಗಿರುವದು ಸಾಮಾನ್ಯ ರೂಢಿ. ಆದರೆ ಈ ಬಾರಿ ಆ ದಿನವೂ ಸಮಾರಂಭಪೂರ್ಣವಾಗಿತ್ತು. ಪರ್ಯಾಯ ಪಳಿವ ಶ್ರೀ ಶಿರೂರು ಮಠದವರು ತಮ್ಮ ಕೊನೆಯ ಉತ್ಸವವನ್ನು ರೂಢಿಯಂತೆ ತಾ೧೭ ಕ್ಕೆ ಮಾಡಿಸದೆ ತಾ೧೬ಕ್ಕೆ ನೆರವೇರಿಸಿದರು. ಶ್ರೀ ಶೀರೂರು ಮಠದ ಶ್ರೀ ಮಲ್ಲಕ್ಷ್ಮೀಂದ್ರತೀರ್ಥಶ್ರೀಪಾದಂಗಳವರು ಪರ್ಯಾಯಕಾಲದಲ್ಲಿ ತಾವು ಶಿಷ್ಯರಿಗೆ ಸುಧಾ ಗ್ರಂಥವನ್ನು ಪಾಠ ಹೇಳಿ ಮುಗಿಸಿದ್ದರಿಂದ ಸುಧಾ ಮಂಗಲೋತ್ಸವವನ್ನು ಆ ದಿನ ಜರಗಿಸಿ ವಿಶೇಷ ಭೋಜನ ಉತ್ಸವಾದಿಗಳನ್ನು ನಡೆಸಿ ಯಾತ್ರಿಕರಿಗೆ ಒಂದು ದಿನವೂ ಬಿಡುವು ದೊರೆಯದಂತೆ ಮಾಡಿದರು! ಸುಧಾ ಮಂಗಲವನ್ನು ಶ್ರೀ ಶೀರೂರು ಮಠಾಧೀಶರು ಜರಗಿಸುವದು ಇದು ಮೂರನೆ ಸಲವೆಂದು ಇಲ್ಲಿ ಉಲ್ಲೇಖಿಸುವದು ಅಪ್ರಸ್ತುತವಾಗಲಾರದು. (ಮಧ್ವಮಠದ ಉದ್ಗ್ರಂಥಗಳಲ್ಲೊಂದಾದ ಸುಧಾ ಗ್ರಂಥದ ಪಾಠವೆಂಬುದು ಆ ಮಠದಲ್ಲಿ ದಿಗ್ವಿಜಯವನ್ನು ಸಂಪಾದಿಸಿದಂತೆ ಎಂದು ಪರಿಗಣಿತವಾಗಿದೆ. ಸುಧಾ ಪಾರಂಗತರಿಗೂ ನೂರಾರು ಇತರ ವಿದ್ಯಾರ್ಥಿಗಳಿಗೂ ಅಂದು ಶ್ರೀಮಲ್ಲಕ್ಷ್ಮೀಂದ್ರರು ಉಚಿತಸಂಭಾವನೆಯನ್ನು ಮಾಡಿದರು.

ಹೊಸ ಶ್ರೀಗಳವರು

ತಾ. ೧೭ ಕ್ಕೆ ಇನ್ನೊಂದು ಸಂಭ್ರಮ ಯಾತ್ರಿಕರಿಗೆ ಅನಾಯಾಸವಾಗಿ ದೊರಕಿತು. ಶ್ರೀ ಪಲಿಮಾರು ಮಠದ ಕಾಲವಾದ ಶ್ರೀ ರಘುಮಾನ್ಯ ತೀರ್ಥ ಶ್ರೀಪಾದಂಗಳವರ ಸ್ಥಾನದಲ್ಲಿ ಅದೇ ದಿನ ಪಲಿಮಾರು ಗ್ರಾಮದಲ್ಲಿ ದ್ವಂದ್ವ ಮಠದವರಾದ ಅದಮಾರು ಸ್ವಾಮಿಗಳಿಂದ ಸನ್ಯಾಸ ದೀಕ್ಷೆ ಪಡೆದ ಬಾಲಯತಿ ಶ್ರೀ ರಘುವಲ್ಲಭ ತೀರ್ಥರ ಪುರ ಪ್ರವೇಶವೂ ಅಂದು ಸೂರ್ಯಾಸ್ತ ಸಮಯಕ್ಕಾಯಿತು. ಬರಿ ಮಗುವಾಗಿರುವಾಗಲೆ (ವಯಸ್ಸು ಸುಮಾರು ೮) ತುರೀಯಾಶ್ರಮದ ದೀಕ್ಷೆಯನ್ನು ಹೊತ್ತು ಶ್ರೀ ರಘುವಲ್ಲಭರನ್ನು ಎರಡೂ ಪಕ್ಕದಲ್ಲಿ ಮಠದ ಅಧಿಕಾರಿ ವರ್ಗದವರು ಕೈ ಹಿಡಿದು ನಡೆಸಿಕೊಂಡು ಹೋಗಬೇಕಾಗುತಿತ್ತು. ಇರಲಿ. ಸಂಭ್ರಮಪೂರ್ವಕವಾಗಿ ಮೆರವಣಿಗೆಯಿಂದ ಪುರಪ್ರವೇಶ ಮಾಡಿ ಶ್ರೀ ರಘುವಲ್ಲಭರು ಚಂದ್ರಮೌಳಿ, ಅನಂತೇಶ್ವರ ಹಾಗು ಶ್ರೀ ಕೃಷ್ಣನ ದರ್ಶನಗಳನ್ನು ಮುಗಿಸಿ ತಮ್ಮ ಮಠವನ್ನು ಪ್ರವೇಶಿಸಿದ ನಂತರ ಇತರ ಸ್ವಾಮಿಗಳನ್ನು ಕರೆಸಿಕೊಂಡು ನೆರೆದವರಿಗೆ ದರ್ಶನವಿತ್ತರು. ಶ್ರೀ ದಂಡಿಲ್ಲಾಯ ಎಂಬ ವಕೀಲರನ್ನು ಸ್ವಾಮಿಗಳು ಅಪ್ರಬುದ್ಧರಾಗಿರುವಷ್ಟು ಕಾಲ ಮಠದ ತಾತ್ಪೂರ್ತಿಕ ವಿಶ್ವಸ್ತರನ್ನಾಗಿ ಮದರಾಸಿನ ಧಾರ್ಮಿಕ ಎಂಡೋಮೆಂಟ್ಸ ಖಾತೆಯವರ ಸಮ್ಮತಿಯಿಂದ ನೇಮಿಸಲಾಗಿದೆಯೆಂದು ತಿಳಿಯುತ್ತದೆ.

ಪರ್ಯಾಯೋತ್ಸವ

ಮರುದಿನ (ತಾ ೧೮) ಮುಂಜಾನೆ ಐದು ಗಳಿಗೆಗೆ ಶ್ರೀ ಸೋದೇ ಮಠದ ಶ್ರೀ ವಿಶ್ವೋತ್ತಮ ತೀರ್ಥರ ಪರ್ಯಾಯ ಪಟ್ಟಬಂಧೋತ್ಸವ ನೆರವೇರಿತು. ಉಡುಪಿಯ ಈ ಪರ್ಯಾಯ ಸಮಾರಂಭಕ್ಕೆ ಸರಿ ಹೋಲುವಂಥದು ಬೇರೆಲ್ಲಿಯೂ ಇಲ್ಲವೆಂದರೆ ತಪ್ಪಾಗದು. ಉಡುಪಿಯಲ್ಲಿನ ಬೇರೆಲ್ಲ ಉತ್ಸವಗಳಂತೆ ಇದಾದರೂ ಅತಿ ಸೂಕ್ಷ್ಮಾಂಗಗಳ ವರೆಗೂ ಕ್ರಮಬದ್ಧವಾಗಿದೆ. ಬ್ರಾಹ್ಮ ಮುಹೂರ್ತದಲ್ಲೇ ಪರ್ಯಾಯ ಸ್ವಾಮಿಗಳು ದಂಡತೀರ್ಥ (ಉಡುಪಿಯಿಂದ ೬ ಮೈಲು) ದಲ್ಲಿ ಸ್ನಾನ ಮಾಡಿ ಉಡುಪಿಯ ಸಮೀಪದ ಜೋಡು ಕಟ್ಟೆಗೆ ಬಂದಾಗ ಉಳಿದ ೬ ಮಠಗಳ ಸಂನ್ಯಾಸಿಗಳು ಮೆರವಣಿಗೆಯಿಂದ ಅಲ್ಲಿ ಹೋಗಿ ಅವರನ್ನು ಎದುರ್ಗೊಂಡು ಕರೆತಂದು ಶ್ರೀ ಕೃಷ್ಣ ದರ್ಶನಾನಂತರ ಬಡಗು ಮಳಿಗೆ ಎಂಬ ಸಭಾಗೃಹದಲ್ಲಿ ಬತ್ತದ ಅರಳಿನ ಗಾದಿಯ ಮೇಲೆ ಪಟ್ಟಕ್ಕೇರಿಸುವರು. ಅಷ್ಟ ಮಠದ ಸ್ವಾಮಿಗಳಲ್ಲಿ ಪ್ರತಿಯೊಬ್ಬರಿಗೆ ಈ ಯೋಗ ೧೬ ವರ್ಷಕ್ಕೊಮ್ಮೆ ಪ್ರಾಪ್ತವಾಗುವದು. ಪರ್ಯಾಯ ದಿನದಿಂದ ಎರಡು ವರ್ಷಗಳ ವರೆಗೆ ಶ್ರೀ ಕೃಷ್ಣನ ಪೂಜೆ ಮೊದಲಾದ ಸಮಸ್ತ ಭಾರವನ್ನು ಹೊತ್ತು ಅದರ ಕೀರ್ತಿ ಅಕೀರ್ತಿಗೆ ಅವರು ತಲೆ ಕೊಡಬೇಕಾಗುವದು. ಈ ಸಮಾರಂಭದ ಎಲ್ಲ ಅಂಗಗಳನ್ನು ಒಂದೇ ವ್ಯಕ್ತಿಗೆ ಒಂದೇ ಬಾರಿಗೆ ನೋಡಿ ಮುಗಿಸುವದು ಅಸಾಧ್ಯವೆಂದೇ ಹೇಳಬಹುದು. ಮೆರವಣಿಗೆ ನೋಡುವವರು ಪಟ್ಟಬಂಧದ ದರ್ಶನಕ್ಕೆರವಾಗಬೇಕು. ಇದನ್ನು ನೋಡಬಯಸುವವರು ಅದಕ್ಕೆರವಾಗಬೇಕು. ಅಗಾಧ ಜನಸಂದಣಿಯಿರುವದರಿಂದ ಎರಡನ್ನೂ ಕಾಣಲು ಸಾಧ್ಯವಿಲ್ಲ.

ಈ ಬಾರಿಯ ಪರ್ಯಾಯೋತ್ಸವಕ್ಕೆ ಶ್ರೀಕೃಷ್ಣಾಪುರ ಸ್ವಾಮಿಗಳನ್ನು ಬಿಟ್ಟರೆ ಅಷ್ಟಮಠಗಳ ಉಳಿದ ಎಲ್ಲ ಸ್ವಾಮಿಗಳು ಮಾತ್ರವಲ್ಲ, ಶ್ರೀ ಭಂಡಾರಿಕೇರಿ ಮಠದ ಸ್ವಾಮಿಗಳೂ ದಯಮಾಡಿಸಿದ್ದರು. ಸಿಂಗರಿಸಿದ ಸಭಾಂಗಣದಲ್ಲಿ ಅರಳಿನ ಗದ್ದುಗೆಯ ಮೇಲೆ ಎಲ್ಲ ಸ್ವಾಮಿಗಳೂ ಆಸೀನರಾದರು. ದ. ಕನ್ನಡದ ಸಹಾಯಕ ಕಲೆಕ್ಟರ ಮೊದಲಾದ ಅಧಿಕಾರಿಗಳೂ ಪುರಪ್ರಮುಖರೂ ಆಗಮಿಸಿದ್ದರು. ಬಳಿಕ ಇನ್ನಂಜೆಯ ವಿಷ್ಣುಮೂರ್ತಿ ಹಯವದನ ಹೈಸ್ಕೂಲ, ಉಡುಪಿಯ ಕಲಾವೃಂದ ಮೊದಲಾದ ಸಂಘಗಳ ಮಾನಪತ್ರಗಳೂ ಶ್ರೀ ಬಿ. ಶ್ರೀನಿವಾಸಭಟ್ಟ ವಿದ್ವಾನ್ ಇವರು ಸಂಸ್ಕೃತದಲ್ಲಿ ಬರೆದ ಶ್ರೇಯಃಪ್ರಾರ್ಥನೆಯೂ ಓದಲ್ಪಟ್ಟವು. ಬಳ್ಳಾರಿಯ ಶ್ರೀ ಕೋಲಾರ ರಾಮರಾವ್, ಮೈಸೂರಿನ ಶ್ರೀ ಬಿ. ಸುಬ್ಬರಾವ್ ಮೊದಲಾದವರು ಸಂದರ್ಭೋಚಿತ ಭಾಷಣಗಳನ್ನು ಮಾಡಿದರು. ಆ ಮೇಲೆ ಪರ್ಯಾಯ ಕಾಲದ ವಿವಿಧ ಅಧಿಕಾರಿಗಳ ಯಾದಿಯನ್ನೋದಲಾಯಿತು. ಕೊನೆಯಲ್ಲಿ ಮೈಸೂರು ಸರಕಾರ, ಹಿಂದುಸ್ತಾನ ಸರಕಾರ ಮೊದಲಾದವರ ಪರವಾಗಿಯೂ ಅನೇಕ ಭಕ್ತ,ಆಶ್ರಿತರ ಪರವಾಗಿಯೂ ಪರ್ಯಾಯ ಸ್ವಾಮಿಗಳಿಗೆ ಪಟ್ಟಕಾಣಿಕೆಗಳನ್ನು ಅರ್ಪಿಸಲಾಯಿತು. ತ್ಯಾಗಿ ಸಂನ್ಯಾಸಿಗಳ ಪಟ್ಟಬಂಧೋತ್ಸವವಿದು ರಾಜಯೋಗಿಗಳ ಸಮಾರಂಭದ ಎಲ್ಲ ವೈಭವದಿಂದ ಕೂಡಿ ಪ್ರೇಕ್ಷಣೀಯವಾಗಿತ್ತು. ೧೪ ವಯಸ್ಸಿನ ಶ್ರೀ ವಿಶ್ವೋತ್ತಮ ತೀರ್ಥರು ಎರಡು ವರ್ಷದ ಪರ್ಯಾಯಾವಧಿಯನ್ನು ರೂಢಿಗೆ ಚಾತೂ ತಪ್ಪದೆ ಸಾಗಿಸಿಕೊಂಡು ಹೋಗಬೇಕಾಗುವದು. ಇದರಿಂದ ಮುಖ್ಯ ಪಾರುಪತ್ಯಗಾರ ಶ್ರೀ ಶ್ರೀಪತಿ ಆಚಾರ್ಯ ಹಾಗು ಸಹಾಯಕ ಪಾರುಪತ್ಯಗಾರ ಶ್ರೀ ಮಿತ್ತಂತಾಯರ ಹೊಣೆ ಇನ್ನಷ್ಟು ಹೆಚ್ಚಾಗಿದೆ.

ಎಂದಿನಂತೆ ಪರ್ಯಾಯ ದಿನ ರಾತ್ರಿಯಲ್ಲಿ ಮಹೋತ್ಸವ ನೆರವೇರಿತು. ಆದರೆ ಇಡೀ ದಿನ ಜಿನುಗು ಮಳೆಬಂದು ಎಲ್ಲ ಕಾರ್ಯಕ್ರಮಗಳನ್ನೂ ಅಂದಗೆಡಿಸಿತು.

ತಾ. ೨೦ ಕ್ಕೆ ಮಧ್ವನವಮಿಯು, ಉತ್ಸವವಾಯಿತು.

ಇತರ ಕಾರ್ಯಕ್ರಮಗಳು

ಕರ್ನಾಟಕದ ಎಲ್ಲ ಮೂಲೆಗಳಿಂದಲೂ ಯಾತ್ರಿಕರು ಬರುವ ಸಂದರ್ಭವನ್ನು ಪಯೋಗಿಸಿಕೊಂಡು ಉಡುಪಿಯ ಕಲಾವೃಂದದವರು ತಾ. ೧೮ ಕ್ಕೆ ಮಧ್ವಮಠದ ಸಂಬಂಧದಲ್ಲಿ ಒಂದು ಭಾಷಣ ಕೂಟವನ್ನೇರ್ಪಡಿಸಿದರು. ಕಾರ್ಕಳದ ವಕೀಲ ಶ್ರೀ ಪಾಡೂರು ವಾಸುದೇವ ಉಪಾಧ್ಯಾಯ, ದಾವಣಗೆರೆಯ ಶ್ರೀ ಬಿ. ಭೀಮರಾವ್ ಹಾಗು ಮೈಸೂರಿನ ಶ್ರೀ ಎಚ್ ಸುಬ್ಬರಾಯರು ಭಾಷಣ ಮಾಡಿದರು. ತಾ. ೧೫ ರಿಂದ ೧೭ ರ ವರೆಗೆ ಮೂರು ದಿನ ಕರ್ನಾಟಕ ಸಂಘದವರ ಆಶ್ರಯದಲ್ಲಿ ಭಾಷಣಗಳಾದವು. ಮೊದಲನೆ ದಿನ ಉಡುಪಿಯಲ್ಲಿ ಕಾಲೇಜು ಸ್ಥಾಪನೆಯಾಗಬೇಕೆಂಬ ವಿಷಯದಲ್ಲಿ ಡಾ. ಟಿ. ಮಾಧವ ಪೈಯವರ ಅಧ್ಯಕ್ಷತೆಯಲ್ಲಿ ಶ್ರೀ ಪುತ್ತಿಗೆ ಸ್ವಾಮಿಗಳು (ಚಿಕ್ಕವರು) ಶ್ರೀ ಅಲೂರು ಲಕ್ಷ್ಮೀನಾರಾಯಣರಾವ್ ಶ್ರೀ ಕೊರಡ್ಕಲ್ ಮೊದಲಾದವರು ಮಾತಾಡಿದರು. ತಾ. ೧೬ ಕ್ಕೆ ಕ್ರಿಶ್ಚನ್ ಹೈಸ್ಕೂಲ್ ಮುಖ್ಯಾಧ್ಯಾಪಕರಾದ ಶ್ರೀ ಎ ಎಚ್ ಕಾರಟರ ಅಧ್ಯಕ್ಷತೆಯಲ್ಲಿ ಶ್ರೀ ಸಂಯುಕ್ತ ಕರ್ನಾಟಕ ಸಂಪಾದಕ ವರ್ಗದ ಶ್ರೀ ವಿ. ಬಿ. ನಾಯಕ ಪರಮೇಶ್ವರ ಹಾಗು ಶ್ರೀ ಶಾಸ್ತ್ರಿ ಕನ್ನಡ ಸಾಹಿತ್ಯವನ್ನು ಕುರಿತು ಮಾತಾಡಿದರು. ತಾ. ೧೭ ಕ್ಕೆ ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯ ನಿರ್ದೇಶಕರಾದ ಶ್ರೀ ಆರ್. ಎಸ್. ಪಂಚಮುಖಿಯವರು ಕರ್ನಾಟಕ ಏಕೀಕರಣವನ್ನು ಕುರಿತು ಮಾತಾಡಿದರು. ವಕೀಲ ಶ್ರೀ ಬಿ. ವಾಸುದೇವರಾಯರು ಅಧ್ಯಕ್ಷರಾಗಿದ್ದರು. ತಾ. ೧೯-೨೦ ಕ್ಕೆ ಧಾರ್ಮಿಕ ಪರಿಷತ್ತಿನ ಆಶ್ರಯದಲ್ಲಿ ಧರ್ಮಕ್ಕೆ ಬಂದಿರುವ ಗಂಡಾಂತರ, ಅದರ ಪರಿಹಾರ, ಮಧ್ವ ಮತದ ಶ್ರೇಷ್ಠತೆ ಮೊದಲಾದವುಗಳ ಬಗ್ಗೆ ಅನೇಕ ಮಹನೀಯರು ಭಾಷಣ ಮಾಡಿದರು. ಅನೇಕ ಸ್ವಾಮಿಗಳವರೂ ಇದರಲ್ಲಿ ಭಾಗವಹಿಸಿದ್ದರು. ಶ್ರೀ ಬಿ. ಭೀಮರಾವ್, ಶ್ರೀ ಆರ್. ಎಸ್. ಪಂಚಮುಖಿ, ಪುತ್ತಿಗೆ ಶ್ರೀಗಳವರು, ಭಂಡಾರಿ ಕೇರಿ ಶ್ರೀಗಳು, ಪೇಜಾವರ ಶ್ರೀಗಳವರು, ಶ್ರೀ ವಿ ಬಿ ನಾಯಕರು ಮೊದಲಾದವರ ಭಾಷಣಗಳಾದವು.

ಬಟ್ಟೆಯ ವಿನಿಯಂತ್ರಣ

ಸರಕಾರದ ಪ್ರಕಟನೆ

ಇದೇ ತಿಂಗಳ ೨೦ ನೇ ತಾ. ದಿಂದ ಬಟ್ಟೆಯ ಮೇಲಿನ ನಿಯಂತ್ರಣವನ್ನು ಹಿಂದುಸ್ತಾನ ಸರಕಾರವು ಸಡಿಲಿಸಬೇಕೆಂದು ನಿರ್ಧರಿಸಿದ್ದು ಮುಂಬಯಿ ಸರಕಾರನಾದರೂ ಅದೇ ಧೋರಣವನ್ನು ಅನುಸರಿಸಿ ಈ ಬಗ್ಗೆ ಒಂದು ಪ್ರಕಟನೆ ಹೊರಡಿಸಿದೆ. ಜನತೆಯ ಅನುಕೂಲಕ್ಕಾಗಿಯೇ ಈ ವಿನಿಯಂತ್ರಣದ ಧೋರಣವಿದ್ದುದರಿಂದ ಸರಕಾರವು ವರ್ತಕರ, ಕೂಲಿಕಾರ ಹಾಗೂ ಬಳಕೆಗಾರರ ಸಹಕಾರ ಕೋರಿದೆ. ಜವಳಿಯ ಬೆಲೆಯು ಮಿತಿಮೀರಿ ಏರದಂತೆ ಸರಕಾರವು ಮುಂಜಾಗ್ರತೆ ವಹಿಸಿದೆ. ಅದರ ಸಾರ ಹೀಗೆ.

ಬೆಲೆ ಏರಬಹುದು

ಕಳೆದ ಕೆಲ ತಿಂಗಳಲ್ಲಿ ಜಗತ್ತಿನ ಅರಳೆಯ ಬೆಲೆಯು ಬಹಳ ಏರಿದೆ. ಇದರ ಪರಿಣಾಮವು ಹಿಂದುಸ್ತಾನದ ಮೇಲೂ ಆಗಿದೆ. ಪಾಕಿಸ್ತಾನದ ಉದ್ದ ಅರಳೆಯು ಸ್ಟ್ಯಾಂಡರ್ಡಾಯಿಝೇಶನ್ ಕ್ಕೆ ಮೂಲಾಧಾರವಾಗಿತ್ತು. ಅದು ಈಗ ದುರ್ಲಭವಾಗಿದೆ. ತತ್ಪರಿಣಾಮವಾಗಿ ಬಟ್ಟೆ ಮತ್ತು ನೂಲಿನ ಬೆಲೆ ಕೆಲಕಾಲನಾದರೂ ಏರುವಸಂಭವವುಂಟು. ಇದಕ್ಕಾಗಿಯೇ ಹುಟ್ಟುವಳಿ ಮತು ಬೆಲೆ ನಿರ್ಣಯದ ನಿಯಮಗಳನ್ನು ಸಡಿಲಿಸಬೇಕಾಯಿತು.

ಉತ್ಪಾದನೆ

ಉತ್ಪಾದನೆಯನ್ನು ಸಾಧ್ಯವಿದ್ದಷ್ಟು ಹೆಚ್ಚಿಸುವ ನಿರ್ಧಾರ ಮಾಡಲಾಗಿದೆ. ಈ ಬಗ್ಗೆ ಗಿರಣಿಗಳಿಗೆ ಕೆಲವು ಸೂಚನೆ ಕೊಡಲಾಗಿದೆ. ಸೀರೆ ಧೋತರ ಮೊದಲಾದ ಅಗತ್ಯದ ಅರಿವೆ ಹೆಚ್ಚು ಪ್ರಮಾಣದಲ್ಲಿ ಉತ್ಪಾದಿಸುವಂತೆ ನಿರ್ದೇಶಿಸಿ ಉಳಿದ ಅರಿವೆಗಳ ಬಗ್ಗೆ ಗಿರಣಿಯ ಒಡೆಯರಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಡಲಾಗಿದೆ. ಆದರೆ ಕಳ್ಳತನದಿಂದ ಬಟ್ಟೆಯನ್ನು ಬಚ್ಚಿಡುವ ಬಗ್ಗೆ ಇದ್ದ ನಿರ್ಬಂಧಗಳೆಲ್ಲ ಹಾಗೇ ಉಳಿಯುವವು.

ಅಧಿಕ ಉತ್ಪಾದನೆಗೆ ಸಹಾಯವಾಗಲೆಂದು ಪ್ರತಿಯೊಂದು ಗಿರಣಿಯಲ್ಲಿ ಉತ್ಪಾದನಾ ಸಮಿತಿಯೊಂದನ್ನು ರಚಿಸಲು ಪ್ರೋತ್ಸಾಹಿಸಲಾಗಿದೆ. ಇದರಿಂದ ಕೆಲಸಗಾರರು ವ್ಯವಸ್ಥಾಪಕರ ಸಂಪರ್ಕ ಉಳಿದು ವಿಚಾರವಿನಿಮಯಕ್ಕೆ ಅನುವುಂಟಾಗುವದು.

ಬೆಲೆ ಏರದಂತೆ ಮುಂಜಾಗ್ರತೆ

ವಿನಿಯಂತ್ರಣದ ಪರಿಣಾಮವಾಗಿ ಬೆಲೆಗಳು ಮಿತಿಮೀರಿ ಏರಬಾರದೆಂದು ಸರಕಾರದ ಇಚ್ಛೆ. ಅರಳೆಯ ಬೆಲೆಗನುಸರಿಸಿಯೇ ಬಟ್ಟೆಗೆ ತಕ್ಕ ಬೆಲೆಗೊತ್ತು ಮಾಡುವದಾಗಿ ಉದ್ದಿಮೆದಾರರು ಆಶ್ವಾಸನ ಕೊಟ್ಟಿದ್ದಾರೆ. ಜವಳಿ ಉದ್ದಿಮೆದಾರರ ಸಂಘವು ನಿರ್ಣಯಿಸಿದ ಬೆಲೆಯ ಮಿತಿಯನ್ನು ಯಾವುದೇ ಗಿರಣಿಯು ಮೀರಿದರೆ ಸರಕಾರದವರು ಅದರ ಮೇಲೆ ಯೋಗ್ಯಕ್ರಮ ತೆಗೆದುಕೊಳ್ಳುವದು. ಇನ್ನು ಮೇಲೆ ನೂಲು ಹಾಗು ಬಟ್ಟೆಯ ಮೇಲೆ ಸರಚಾರ್ಜ ವಸೂಲ ಮಾಡುವದಿಲ್ಲ.

ಹಂಚಿಕೆಯ ವ್ಯವಸ್ಥೆ

ಪ್ರಾಂತದಲ್ಲಿ ಬಟ್ಟೆಯ ಸಾಗಾಟದ ಮೇಲೆ ಯಾವದೇ ನಿರ್ಬಂಧ ಉಳಿಯುವದಿಲ್ಲ. ಆದರೆ ಅಂತರಪ್ರಾಂತೀಯ ಸಾಗಾಟಕ್ಕೆ ಜವಳಿ ಕಮಿಶನರರ ಅಪ್ಪಣೆ ಬೇಕು. ಕೋಟಾ ಪದ್ಧತಿಯನ್ನು ರದ್ದು ಮಾಡಲಾಗುವದು. ಸ್ಥಾನಿಕ ಕೊರತೆ ಉಂಟಾಗದಂತೆ ಉಳಿಕೆಯ ಪ್ರದೇಶದಲ್ಲಿದ್ದ ಗಿರಣಿಯು ತನ್ನ ಉತ್ಪಾದನೆಯ ಕಾಲು ಭಾಗವನ್ನು ಒಂದು ತಿಂಗಳ ವರೆಗೆ ಕಾದಿಟ್ಟು ಜವಳಿ ಕಮಿಷನರರಿಗೆ ಒಪ್ಪಿಸಬೇಕೆಂದು ವಿಧಿಸಲಾಗಿದೆ. ಕೊರತೆ ಭಾಗದಲ್ಲಿ ಯೋಗ್ಯದರದ ಅಂಗಡಿ ಇಡಲು ಉತ್ತೇಜನ ಕೊಡಲಾಗುವದು.

ಕೈಮಗ್ಗದ ನೇಕಾರರ ಹಿತದ ದೃಷ್ಟಿಯಿಂದ ನೂಲಿನ ಈಗಿನ ಹಂಚಿಕೆಯ ಪದ್ಧತಿಯನ್ನು ಅಸ್ತಿತ್ವದಲ್ಲಿಡಲಾಗುವದು. ಆದರೆ ಗೊತ್ತುಪಡಿಸಿದ ಅವಧಿಯಲ್ಲಿ ತೆಗೆದುಕೊಂಡ ಹೋಗದ ನೂಲನ್ನು ಗಿರಣಿಗಳು ಬೇಕಾದ ಹಾಗೆ ಹಂಚಬಹುದು. —೧೧ನೆಯ ಪುಟಕ್ಕೆ

ಕರ್ಮವೀರ
ಹರಿಜನ ಪುರವಣಿ

ಪವಿತ್ರ ನಿಮಿಷಗಳು

ಲೇ:— ಶ್ರೀ. ಪ್ಯಾರೇಲಾಲ

ನವಖಾಲಿಯಲ್ಲಿ ಇಳಿದೊಡನೆ ನಮಗೆ ಕಾಣಿಸಿದ ಅತ್ಯಂತ ದಾರುಣವಾದ ದೃಶ್ಯವೆಂದರೆ ಬಲಾತ್ಕಾರ ಧರ್ಮಾಂತರ ಮಾಡುವಾಗ ಹಿಂದೂ ಹೆಂಗಸರ ಶುಭಚಿಹ್ನೆಗಳಾದ ಬಳೆ ಮತ್ತು ಕುಂಕುಮಗಳನ್ನು ತೆಗೆದುಹಾಕಿದ್ದರಿಂದ ಅವರು ಬರಿಗೈ ಬರಿಹಣೆಗಳಿಂದ ಇದ್ದುದು. ಕೆಲವೆಡೆ ಅವರೇ ಸ್ವತಃ ಅಂಜಿಕೆಗೊಳಗಾಗಿ ತೆಗೆದುಹಾಕಿದ್ದರು. ಅವರ ಮುಖಗಳು ಅಪ್ರಸನ್ನವೂ ಮ್ಲಾನವೂ ಆಗಿದ್ದವಲ್ಲದೆ, ಬೇಟೆಯಲ್ಲಿ ಭಯಭ್ರಾಂತವಾಗಿ ಓಡುವ ಜಿಂಕೆಗಳಂತಹ ಅವರ ಬೆದರುಗಣ್ಣುಗಳು ಮರ್ಮಭೇದಕವಾಗಿದ್ದವು. ಸಾಮಾನ್ಯವಾಗಿ ಅವರು ಹೊರಗೆ ನಿನ್ನೊಡನೆ ಮಾತಾಡುವದೇ ಇಲ್ಲ;· ತುಟಿ ತೆರೆಯುವದಾದರೆ ನಿನ್ನನ್ನು ತಮ್ಮ ಖಾಸಗಿ ಕೋಣೆಗಳಿಗೆ ಕರೆದುಕೊಂಡು ಹೋದ ಮೇಲೆ—ಅಲ್ಲಿ ನಿನಗೆ ತಮ್ಮ ಘೋರಂತ ವೃತ್ತಾಂತಗಳನ್ನು ಧಾರೆಧಾರೆಯಾಗಿ ಹೃದಯದಿಂದ ಸುರಿವ ಧೈರ್ಯಮಾಡುವರು. ಈ ಜೀವನ್ಮೃತ ಸ್ಥಿತಿಯಿಂದ ಅವರನ್ನು ಉದ್ಧರಿಸಿದ್ದೆಂದರೆ ರಾಮನಾಮವೇ. ಅವರಿಗೆ ನಾನು ಇನ್ನೇನನ್ನೂ ಕೊಡಲಾರದಾದೆ.

ಮೊಟ್ಟಮೊದಲು ನಾನು ಅವರನ್ನು ಶಹಪುರದ ಒಂದು ಜೀರ್ಣಮಂದಿರದಲ್ಲಿ ಕೂಡಿಸಿ ರಾಮನಾಮವನ್ನು ಹೇಳುವಂತೆಮಾಡಿದೆ. ಆ ಅನುಭವನನ್ನು ನಾನೆಂದೂ ಮರೆಯಲಾರೆ. ಅವರೆಲ್ಲರೂ ದರಿದ್ರರು—ದಟ್ಟದರಿದ್ರರು—ಮಡಿವಾಳ ಮಾಲಿ, ಚೌಕೀದಾರರ ವರ್ಗದವರು. ಅವರ ಯಜಮಾನರು ಮನೆಮಾರುಗಳನ್ನು ನೋಡಿಕೊಳ್ಳುವದನ್ನು ಅವರಿಗೆ ಬಿಟ್ಟು ಪಲಾಯನ ಮಾಡಿಬಿಟ್ಟಿದ್ದರು. ನಾವು ಹೋದೊಡನೆ ಬಾಲಕರ ಒಂದು ಚಿಕ್ಕಗುಂಪು ಅಪರಿಚಿತರಾದ ನಮ್ಮನ್ನು ಕಂಡಂಜಿ ಮನೆಯೊಳಗೆ ಓಡಿಹೋಯಿತು. ಅವುಗಳ ತಂದೆ ತಾಯಿಯರೆಂದರು: "ಸ್ವಲ್ಪ ಹೊತ್ತಿಗೆ ಮುಂಚೆ ನಾವೆಲ್ಲರೂ ಮುಸಲ್ಮಾನರ ಉಡುಪನ್ನು ಧರಿಸಿಕೊಳ್ಳುತ್ತಿದ್ದೆವು" ಅವರಿಗೆ ನಮಾಜು ಮಾಡುವುದನ್ನು ಕಲಿಸಲು ಒಬ್ಬ ಮೌಲ್ವಿಯು ಬರುತ್ತಿದ್ದನು. ಅವರು ಒಂದು ಭಯದ ಮುಸುಕಿನಲ್ಲಿ ಬದುಕಿದ್ದರು.

"ನಮಗೆ ಭೂಮಿಯಲ್ಲಿ ಯಾರೂ ಕಾವರಿಲ್ಲ; ನಾವು ಅಸಹಾಯರು," ಅವರೆಂದರು.

"ನೀವೆಂದಾದರೂ ರಾಮನಾಮ ಸ್ಮರಣೆ ಮಾಡಿದ್ದೀರಾ?" ನಾನು ಕೇಳಿದೆ.

"ನಮಗೆ ಹಾಗೆ ಮಾಡುವ ಧೈರ್ಯವಿಲ್ಲ."

"ನಿಮ್ಮ ಮನೆಗಳಲ್ಲಿ ಕೂಡ?"

"ಹೌದು, ನಮ್ಮ ಮನೆಗಳಲ್ಲಿ ಕೂಡ; ನಾವು ಎಂತಹ ಅಗ್ನಿಪರೀಕ್ಷೆಗಳಲ್ಲಿ ಹೊಕ್ಕು ಬಂದಿರುವೆವೆಂಬುದು ನಿಮಗರಿಯದು."

"ಹಾಗಾದರೆ ಇಂದಿನಿಂದ ಹಾಗೆ ರಾಮನಾಮ ಸ್ಮರಣವನ್ನಾರಂಭಿಸಿರಿ—ಈಗಲೇ ನನ್ನೊಡನೆ"

ಅವರೊಪ್ಪಿದರು. ಅವರ ನಾಮಸಂಕೀರ್ತನ ಪ್ರವೃದ್ಧಿಯಾದಂತೆ ಅವರು ಬಾಹ್ಯ ಪ್ರಪಂಚವನ್ನು ಮರೆತರು. ಹೊಸದೊಂದು ಜ್ಯೋತಿ ಅವರ ಮುಖದಲ್ಲಿ ಮೂಡಿತು. ಅವರು "ಅಸಹಾಯರ ಸಹಾಯ"ವನ್ನು ಕಂಡುಕೊಂಡರು.

ಎರಡನೆಯ ಹೆಜ್ಜೆಯೆಂದರೆ, ೨ ಹಳ್ಳಿಗಳಿಂದ ಅವರೆಲ್ಲರನ್ನೂ ಒಂದೆಡೆ ಕೂಡಿಸಿ ಒಂದು ಹರಿಕೀರ್ತನ ಕೂಟವನ್ನೇರ್ಪಡಿಸಿದುದು. ಅದು ಬಹಳ ಯಶಸ್ವಿಯಾಗಿ ಪರಿಣಮಿಸಿತು. ದಂಗೆಗಾಲವಾದ ಬಳಿಕ ಮೊದಲ ಬಾರಿಗೆ ಶಹಪುರ ಪೇಟೆಯಲ್ಲಿ ಶಂಖಘೋಷ ಕೇಳಿಸಿತು. ಅದರಿಂದ ವಿಚಿತ್ರ ಪರಿಣಾಮಗಳುಂಟಾದವು. ಅದನ್ನು ನಾನು ಸದ್ಯಕ್ಕೆ ಬಿಟ್ಟುಬಿಡಬೇಕಾಗಿದೆ.

ಕಾರತಖಿಲ್ ಹಳ್ಳಿಯಲ್ಲಿ ಪುನರ್ನಿವೇಶನ ಕಾರ್ಯವು ಬಹಳ ತಡವಾಗಿಪ್ರಾರಂಭವಾಗಿತ್ತು. ಕಳೆದ ಎಪ್ರಿಲಿನ ಕೊನೆಯಲ್ಲಿ ಅದರ ಸ್ಮಾರಕವಾಗಿ ಒಂದು ಅಂತರ್ಜಾತೀಯ ಭೋಜನ ಸಮಾರಂಭವನ್ನೇರ್ಪಡಿಸಲಾಗಿತ್ತು. ಶಹಪುರ ಪೇಟೆಯಿಂದ ಡಿಸ್ಟ್ರಿಕ್ಟ್ ಬೋರ್ಡ ರಸ್ತೆಯಲ್ಲಿ ಅಲ್ಲಾ ಹೋ ಅಕ್ಬರ್ ಎಂದು ಕೂಗುತ್ತ ಹೋಗುತ್ತಿದ್ದ ಮುಸಲ್ಮಾನರ ಮೆರವಣಿಗೆಯೊಂದು ಆ ಇಡೀ ಸಭೆಯನ್ನೇ ಅಲ್ಲೋಲ ಕಲ್ಲೋಲ ಮಾಡಿತು. ಮೆರವಣಿಗೆಯಲ್ಲಿಂದ ಒಬ್ಬನು ಮಾಲಿಯೊಬ್ಬನ ಮನೆಗೆ ನುಗ್ಗಿ ಅಲ್ಲಿ ಒಬ್ಬನೇ ಇದ್ದ ಅವನ ಚಿಕ್ಕ ಹುಡುಗನನ್ನು ಹೊಡೆದನೆಂದು ಸುದ್ದಿ ಹಬ್ಬಿತು. ಅಪರಾಧಿಯಾರೆಂದು ಪತ್ತೆ ಹಿಡಿಯಲಾಗಲಿಲ್ಲ. ನಾನು ಸೋಮವಾರ ಪೇಟೆಯ ವರೆಗೆ ಮೆರವಣಿಗೆಯ ಬೆನ್ನು ಹಿಡಿದು ಹೋದೆ. ಅವರಲ್ಲಿ ಅನೇಕರೊಡನೆ ನಾನು ಗೆಳೆತನ ಮಾಡಿಕೊಂಡೆ. ಮತ್ತು ಅವರು ಯಾವ ತೊಂದರೆಯನ್ನೂ ಕೊಡುವ ಇಷ್ಟವುಳ್ಳವರಾಗಿದ್ದಂತೆ ಕಾಣಲಿಲ್ಲ. ನಾನು ಮರಳಿದಾಗ, ಭೋಜನ ನಡೆದೇ ಇತ್ತು. ಯಾರೂ ಆ ಗದ್ದಲದಿಂದಾಗಿ ಭಯಕಂಪಿತರಾಗಲಿಲ್ಲವೆಂಬುದನ್ನು ಕೈಯೆತ್ತಿ ಸೂಚಿಸುವಂತೆ ಅವರಿಗೆ ಹೇಳಿದೆ. ಉತ್ತರವಾಗಿ ಗಂಡಸರಲ್ಲಿ ಐವರೂ ಹೆಂಗಸರಲ್ಲಿ ಕೇವಲ ಮೂರು ಮಂದಿಯೂ ಕೈಯೆತ್ತಿದರು.

ಮರುದಿನ ಬೆಳಗ್ಗೆ ನಿದ್ರೆಯಿಲ್ಲದ ರಾತ್ರಿಯನ್ನು ಕಳೆದ ನಂತರ, ಒಟ್ಟಾಗಿ ಅವರೆಲ್ಲರೂ ರಾಮನಾಮ ಹೇಳುವಂತೆ ಮಾಡಿದೆ. ಮೊಟ ಮೊದಲು ಒಂದೆಡೆ ಪ್ರತಿಯೊಂದು ವಾಡಿಯ ಜನರೆಲ್ಲರೂ ಸೇರುವಂತೆ ಮಾಡಿ ರಾಮನಾಮದ ಅಂತರಾರ್ಥ ಮತ್ತು ಪ್ರಾಮುಖ್ಯವನ್ನು ವಿಶದಪಡಿಸುತ್ತಿದ್ದೆ. ಅನಂತರ ಎಲ್ಲ ವಾಡಿಗಳಿಂದಲೂ ಅವರು ತಮ್ಮ ಪಾಳುದೇಗುಲದ ಮುಂದೆ ಬಂದು ಸೇರತೊಡಗಿದರು. ಹತ್ತಾರು ಮನಂಬುಗುವ ಮಾತುಕತೆಗಳಲ್ಲಿ ನಾನು ಹೇಳಿದ ಸಾರಾಂಶವೆಂದರೆ ದೇವರಲ್ಲಿ ಜೀವಂತ ಶ್ರದ್ಧೆ ಅವರಿಗಿದ್ದು, ಯಾವಾಗಲೂ ಅವನಿಗಂಜಿ ತಿರುಗಾಡಿದರೆ ಅವರಿಗೆ ಮತ್ತಾವ ಭಯವೂ ಇರದು—ಎಂದು. ಮರಣ ಭಯವು ಮನುಷ್ಯರನ್ನು ಹೇಡಿಗಳನ್ನಾಗಿ ಮಾಡಿತು. ಅಷ್ಟಾದರೂ ಹುಟ್ಟಿದ ಮನುಷ್ಯನು ಎಂದಾದರೂ ಸಾವಿನಿಂದ ತಪ್ಪಿಸಿಕೊಳ್ಳಬಲ್ಲನೇ? ತದ್ವಿರುದ್ಧವಾಗಿ, ೨ ಸಲ ಸಾವು ಬರುವಂಥ ಯಾವನಾದರೊಬ್ಬನಿರುವನೆ? ಯಾವುದು ಗ್ರಾಹ್ಯ— ತನ್ನ ಮಾನ ಮತ್ತು ಧರ್ಮಗಳನ್ನು ಕಾಯ್ದುಕೊಳ್ಳಲು ಪಾಪಿಯ ಖಡ್ಗಕ್ಕೆದುರಾಗಿ ಗಂಡಸುತನದಿಂದ ನಿಲ್ಲುವುದೋ ಇಲ್ಲವೆ ಕಾಹಿಲೆಯಿಂದ, ವಯೋವೃದ್ಧಿಯಿಂದ ಅಥವಾ ದೀರ್ಘಕಾಲದ ನರಳುವಿಕೆಯಿಂದ ಸಾವನ್ನು ಅಂತ್ಯದಲ್ಲಿ ಕಾಣುವಂಥ ಸದ್ಯದ ಜೀವದಾನವನ್ನು ಪಡೆಯುವುದೋ? ಅವರು ದೇವನನ್ನು ನಿಜವಾಗಿಯೂ ತಂದೆಯೆಂದು ತಿಳಿದದ್ದಾದರೆ ಅವನ ಕರೆಗೆ ಉತ್ತರವಾಗಿ ಅವನನ್ನು ಕಾಣುವ ಭವಿಷ್ಯದ ಬಗ್ಗೆ ಅಂಜುವುದೇಕೆ? ಆತನ ಇಚ್ಛೆಯಿಲ್ಲದೆ ಒಂದು ಗುಬ್ಬಿ ಕೂಡ ಸತ್ತು ಬೀಳದೆಂದು ನಂಬುವುದಿಲ್ಲವೆ? ಇದನ್ನು ವಿವರಿಸಲು ನಾನು ದಿವಂಗತ ಮೌಲಾನಾ ಶೌಕತ ಅಲ್ಲಿಯವರು ಅನೇಕ ಸಲ ಹೇಳುತ್ತಿದ್ದ ಯರವಾಡ ಜೈಲಿನಲ್ಲಿ ಮರಣಶಿಕ್ಷೆಗೆ ಗುರಿಯಾಗಿದ ಕೈದಿಯೊಬ್ಬನ ಕಥೆಯನ್ನು ತೆಗೆದುಕೊಂಡೆನು. ಅವನು ಹೇಗೆ ತನ್ನ ಕೋಣೆಯಲ್ಲಿ ಹೆಂಡತಿಯನ್ನು ಕೊಂದದ್ದಕ್ಕಾಗಿ ತಲೆದಂಡ ತೆರುವ ಮುಂಚಿನ ರಾತ್ರಿ ಕುಣಿಯುತ್ತ ಈ ಕೆಳಗಿನ ಹಾಡನ್ನು ಹಾಡಿದನೆಂಬುದನ್ನು ಅವರ ನಿದರ್ಶನಕ್ಕೆ ತಂದೆ:

"ಸಿಂಗರಿಸಿಕೊಳ್ಳೆಲೆ ಜವ್ವನೆ !
ಚತುರೆಮುಗ್ಧೆ, ಮನೋಹರೆ—
ಪ್ರಿಯತಮನ ಮಂದಿರಕೆ ತೆರಳಲು
ಸಿದ್ಧಳಾಗು ಸುಧಾಧರೆ !"

ದೇವರೇ ತಮ್ಮ ಗೆಳೆಯ ಮತ್ತು ರಾಕ್ಷಸನೆಂದು ನಂಬಿದ್ದರೆ ಅವನನ್ನು ನೋಡಲು ಸಂತೋಷ ಪಡುತ್ತಾರೆ. ಅಂಥ ಜೀವಂತ ಶ್ರದ್ಧೆಯು ಅವರಲ್ಲಿಯ ಅತ್ಯಂತ ದುರ್ಬಲನನ್ನೂ ದೇಹದಾರ್ಢ್ಯದಲ್ಲಿ ಅತಿ ಪ್ರಬಲನೆನಿಸಿದವನಿಗೆ ಸರಿಸಮನೆನಿಸಿ ಬಿಡಬಲ್ಲದು. ಆ ಯುದ್ಧಗಳು ಮರಣವನ್ನು ಮತ್ತೇನೂ ಹೆಚ್ಚಿನದನ್ನಾಗಿ ಮಾಡಲಾರಮಾಡುದರಿಂದ ಅವು ಅವರ ಮೇಲೆ ಯಾವ ತರಹದ ಭಯಕಾರಕ ಪರಿಣಾಮಗಳನ್ನೂ ಉಂಟುಮಾಡಲಾರವು. ರಾಮನಾಮ ಸಂಕೀರ್ತನ ಕಾಲದಲ್ಲಿ ಒಂದು ವೇಳೆ ಒಂದು ಪುಂಡರ ಗುಂಪು ಲಾಠಿ ಮತ್ತು ಚೂರಿಗಳನ್ನು ತೆಗೆದುಕೊಂಡು ಅವರ ಮೇಲೆ ಬೀಳಬಂದಾಗ ಹೆಂಗಸರು ಮಕ್ಕಳು ಹೆದರಿ ಮೂರ್ಛೆ ಹೋಗುವದರ ಬದಲು ಇಲ್ಲವೆ ಅವರನ್ನು ಕಂಡು ದಿಕ್ಪಾಲಾಗಿ ಪಲಾಯನಮಾಡಹೋಗುವದನ್ನು ಬಿಟ್ಟು, ತಮ್ಮ ಗಾನದಲ್ಲೇ ವಿಲೀನರಾಗಿ ಅವರ ಬರವನ್ನೇ ಲಕ್ಷ್ಯಕ್ಕೆ ತರದಿದ್ದರೆ ಪುಂಡರು ಕಂಗೆಡದಿರರು· ನಿರಾಯುಧರಾದ ಹೆಂಗಸರು ಮಕ್ಕಳಲ್ಲಿ ತಮ್ಮಲ್ಲಿಲ್ಲದ ಆಯುಧಕ್ಕೂ ಬಲವತ್ತರವಾದ, ಏನೋ ಒಂದು, ಮರಣವೆದುರಿಸಿದಾಗಲೂ ಕಂಗೆಡದೆ ನಿಲ್ಲುವ ಒಂದು ಶಕ್ತಿ-ಇದೆಯೆಂದು ಪುಂಡರಿಗೆ ಅರಿವಾಗುತ್ತದೆ. ಅದಕ್ಕೆ ಒಂದು ಕರಾರಿದೆ· ಅದೆಂದರೆ ಭಕ್ತರು ಎಂದಿಗೂ ವಿವರ್ಣರೂ ಕಂಪಿತರೂ ಆಗಕೂಡದು ಅಥವಾ ಹೃದಯದಲ್ಲಿ ವಿರೋಧಭಾವ ಇಲ್ಲವೆ ದುರುದ್ದೇಶವನ್ನು ಇಟ್ಟುಕೊಂಡಿರಬಾರದು. ಹೆಂಗಸು ತಾನು ಅಬಲೆಯೆಂದು ತನ್ನನ್ನು (ಅವಳನ್ನು ಹಾಗೆಂದು ಇತರರು ತಿಳಿದಿದ್ದರು) ತಿಳಿದುಕೊಂಡಿದ್ದಳು. ಆಯುಧ ಹಿಡಿಯುವ ಪ್ರಸಂಗದಲ್ಲಿ ಬಹುಶಃ ಅದು ಸತ್ಯವೆನಿಸಬಹುದು. ಆದರೆ ಸತ್ಯಾಗ್ರಹ ಯುಗದ ಪ್ರಾರಂಭದಿಂದ ಪರಿಸ್ಥಿತಿಯು ತಲೆಕೆಳಗಾಗಿದೆ. ಸತ್ಯಾಗ್ರಹದ ಹೋರಾಟದಲ್ಲಿ ಹೆಂಗಸರು ಗಂಡಸರೊಡನೆ ಸರಿಸಮ ಭಾಗವಹಿಸಬಹುದಲ್ಲದೆ ಅವರೇ ಸ್ವತಃ ಗಂಡಸರನ್ನು ಮುಂದೆ ಕೊಂಡೊಯ್ವ ನಾಯಿಕೆಯರಾಗಬಹುದು. ಅವರಿಗೆ ಮೌನದಿಂದ ಕಷ್ಟವನ್ನು ಸಹಿಸುವ ಒಂದು ಅಕ್ಷಯ ಶಕ್ತಿಯಿದೆ. ಅವರ ಮನೆಗಳಲ್ಲಿ ಕಾಲದಾದಿಯಿಂದ—ಬಹುಶಃ ಅರಿವಿಲ್ಲದೆ—ಸತ್ಯಾಗ್ರಹವೆಂಬ ಆಯುಧವನ್ನು ಅವರು ಬಳಸುತ್ತಿದ್ದಾರೆ. ತಮ್ಮ ಬಲಗೈಯ ಬಲದಿಂದ ತಮ್ಮನ್ನು ತಾವು ಕಾಯ್ದುಕೊಳ್ಳಬಲ್ಲೆವೆಂದು ಗಂಡಸರು ಆತ್ಮವಂಚನೆ ಮಾಡಿಕೊಳ್ಳಬಹುದು. ನಿಜ, ಪ್ರಯೋಗದಿಂದ ಅದು ವ್ಯರ್ಥವೆಂಬದನ್ನು ಅವರು ಕಂಡಿದ್ದಾರೆ. ಆದರೆ ಹೆಂಗಸರಿಗೆ ದೇವ ಮತ್ತು ಸತ್ಯಾಗ್ರಹಗಳಲ್ಲದೆ ಅನ್ಯಥಾ ಶರಣವೇ ಇಲ್ಲ. ಆದುದರಿಂದ ರಾಮನಾಮವು ಅವರಿಗೆ ಸರ್ವಾರ್ಥ ಸಾಧಕವೆನಿಸಬೇಕು. ಅದು ಕೇವಲ ಅವರ ತುಟಿಯಿಂದ ಹೊರಹೊಮ್ಮದೆ ಹೃದಯದಿಂದ ಹೊರಹೊರಟರೆ ಅದೊಂದು ಜೀವಂತ ಶಕ್ತಿಯಾಗಿ ಪರಿಣಮಿಸಿ, ಇನ್ನು ಮುಂದೆ ಪುಂಡರೆದುರು ಹೆದರುವವರು ಅವರಲ್ಲ, (ಹೆಂಗಸರು ಮಕ್ಕಳಲ್ಲಿ) ಅವರಿಗೇ ಪುಂಡರು ಹೆದರಿ ನಡುಗಬೇಕಾಗುತ್ತದೆ.

ಕೊನೆಯ ಮಾತುಗಳು ನನ್ನ ಹೃದಯದ ಆಳದಿಂದ ತಾವೇತಾವಾಗಿ ಹೊರಹೊಮ್ಮಿದವು. ನನಗೆ ವಿಚಾರಮಾಡಿ ಸರಿಪಡಿಸಿಕೊಳ್ಳಲು ಸಮಯವಿದ್ದಿದ್ದರೆ ಈ ಶಬ್ದಗಳನ್ನು ಹೇಳುವಲ್ಲಿ ನಡುಗಿಹೋಗುತ್ತಿದ್ದೆನೆಂಬುದನ್ನು ನಾನು ಒಪ್ಪಲೇಬೇಕಾಗಿದೆ. ತಾಳಕ್ಕೆ ಸರಿಯಾಗಿ ಗಂಡಸರೆದುರು ಸಾಲಾಗಿ ನಿಂತು ಗಟ್ಟಿಯಾಗಿ ರಾಮನಾಮವನ್ನು ನಿರ್ಭಯವಾಗಿ ಹಾಡಿರೆಂದು ಹೇಳಿದೆ. ಮೊದಲು ಹೆಂಗಸರನ್ನು ಅವರ ಪ್ರತ್ಯೇಕ ವಾಸಸ್ಥಳಗಳಿಂದ ಕರೆಯುವುದು ಸಣ್ಣ ಕೆಲಸವಾಗಲಿಲ್ಲ. ಆದರೆ ಕ್ರಮೇಣ ಅವರಿಗದು ರೂಢಿಯಾಗಿ ಹೋಯಿತು. ಮೊದಲು ಗಂಡಸರು ಹೇಳಿದ್ದನ್ನು ಹೆಂಗಸರು ಅನುಕರಿಸಿ ಹೇಳುತ್ತಿದ್ದರು. ಆದರೆ ಕೆಲಕಾಲದ ನಂತರ ಕ್ರಮ ವಿಪರೀತವಾಯಿತು. ಹೆಂಗಸರು ಹೇಳಿದ್ದನ್ನು ಗಂಡಸರು ಅನುಕರಿಸಿ ಹೇಳತೊಡಗಿದರು.

ಭಾಟಿಯಾಪುರದ ಎಲ್ಲ ಓಣಿಯಲ್ಲಿ ಪ್ರತಿದಿನ ಬೆಳಗ್ಗೆ ನಾವು ರಾಮನಾಮ ಸಂಕೀರ್ತನ ಮಾಡುತ್ತಿದ್ದೆವು. ಅದಕ್ಕೆ ಜೇಗಟೆಯ ತಾಳವಿತ್ತು. ನಮ್ಮಲ್ಲಿಯ ಕೆಲವರು ಪಕ್ಕದ ಹಳ್ಳಿಗೆ ಹೋದೆವು. ಅಲ್ಲಿಯೂ ಇದೇ ಪ್ರಕಾರ ರಾಮನಾಮ ಕೀರ್ತನ ಪ್ರಾರಂಭವಾಯಿತು, ದಾರಿಯುದ್ದಕ್ಕೂ ನಾವು ಹೋದಾಗ ತಾಳಕ್ಕೆ ಸರಿಯಾಗಿ ರಾಮನಾಮ ಕೀರ್ತನ ಮಾಡುತ್ತಲೇ ಸಾಗಿದೆವು. ಅಲ್ಲಿಗೆ ಹೋದೊಡನೆ ಜೇಗಟೆ ಬಾರಿಸುತ್ತಿದ್ದೆವು. ಅದು ನಾವು ಅನಂತರ ಹೆಚ್ಚು ಜನರೊಡನೆ ಭೆಟ್ಟಿಯಾದ ಮುಂದಿನ ಹಳ್ಳಿಯ ನಮ್ಮ ಕಾರ್ಯಕ್ರಮವನ್ನು ಸೂಚಿಸುತ್ತಿತ್ತು. ತಿರುಗುವಾಗ ನಾವು ಚಿಕ್ಕ ಬಾಲಬಾಲಿಕೆಯರಿಗೆ ಕೆಲವು ಹಾಡುಗಳನ್ನೂ ಮಂತ್ರಗಳನ್ನೂ ಕಲಿಸಿದೆವು. ಅವನ್ನು ಅವರು ಈಗಲೂ ಪ್ರಾರ್ಥನೆಯಲ್ಲಿ ಹೇಳುತ್ತಾರೆ. ರಾಮನಾಮ ಸಂಕೀರ್ತನದ ಜೊತೆ ಅವರೆಲ್ಲ ಆಪತ್ತಿಂತನು ಮನೆಗಳೆದುರಿನ ಕಸಗೂಡಿಸುವುದು ಮುಂತಾದ ನಿರ್ಮಲೀಕರಣದ ಕೆಲಸಕ್ಕೆ ನಡೆದರು. ಈ ಸ್ವಚ್ಛ ಮಾಡುವ ಕೆಲಸವು ನಮ್ಮ ಕಾರ್ಯಕ್ರಮದ ಮುಖ್ಯಾಂಗವಾಗಿತ್ತು. ನಮ್ಮ ಸಹೋದ್ಯೋಗಿಗಳಾದ ವೈದ್ಯರೊಡನೆ ನಾನು ಅನಂತರ ರೋಗಗ್ರಸ್ತರಾಗಿ ಮಲಗಿದವರನ್ನು ಭೆಟ್ಟಿಯಾಗುತ್ತಿದ್ದೆ. ಇದರ ಜತೆ ಇದು ನಮ್ಮೊಡನಿದ್ದ ಹುಡುಗ ಹುಡುಗಿಯರಿಗೆ ರೋಗಿಗಳಿಗೆ ಉಪಚಾರ ಮಾಡುವುದು, ಅವರನ್ನು ನಡೆಸಿಕೊಳ್ಳುವುದು ಮತ್ತು ಆರೋಗ್ಯ ಶಾಸ್ತ್ರದ ಮೂಲಭೂತ ನಿಯಮಾವಳಿಗಳು ಇವನ್ನು ಕಲಿಸಲು ಅನುಮಾಡಿಕೊಟ್ಟಿತು. ಮಧ್ಯಾಹ್ನ ನಾವೆಲ್ಲರೂ ಒಂದೆಡೆ ಸೇರಿ ಸಂಪೂರ್ಣ ಮೌನದಿಂದ ನಮ್ಮ "ಕದಿರು ಪೂಜೆ"ಯನ್ನು ನೆರವೇರಿಸಿದೆವು.

ಹೊಸದಿಲ್ಲಿ ೧೨-೧-೪೬

ಕೆಲ ಚಿಕ್ಕ ಚಿಕ್ಕ ಸಂದರ್ಭಗಳು ಅಭ್ಯಾಸ ಪರೀಕ್ಷೆ ಮಾಡಲೂ ಶ್ರದ್ಧಾ ಪರೀಕ್ಷಣ ಮಾಡಿಕೊಳ್ಳಲೂ ಅವಕಾಶವೊದಗಿಸಿಕೊಟ್ಟವು. ಹೆಂಗಸರು ಮತ್ತು ನಮ್ಮ ಚಿಕ್ಕ ಹುಡುಗ ಹುಡುಗಿಯರು ಕೂಡ ದೀಪವಿಲ್ಲದೆ ಎಲ್ಲಿಗೆಂದರಲ್ಲಿಗೆ ಹೆದರದೆ ಕತ್ತಲಲ್ಲಿ ಹೋಗುವುದಾಗಿ ಪ್ರತಿಜ್ಞೆ ಮಾಡಿದರು. ನಾನು ನಮ್ಮ ಹತ್ತಿರದ ಹಳ್ಳಿಗೆ ಇಬ್ಬರು ಚಿಕ್ಕ ಹುಡುಗಿಯರನ್ನು ಕಳುಹಿದೆ. ಅವರಿಗೊಂದು ವಿದ್ಯುದ್ದೀಪ ಕೊಟ್ಟಿತ್ತು. ನಿಜವಾಗಿ ಹೆದರಿಕೆಯಾದಾಗ ಮಾತ್ರ ಅವರು ಅದನ್ನು ಬಳಸಬೇಕೆಂದು ಹೇಳಲಾಗಿತ್ತು. ಅವರಿಗೆ ತಿಳಿಯದಂತೆ ಅವರನ್ನು ಕಾಯಲು ನಾನು ನನ್ನೊಬ್ಬ ಗೆಳೆಯನನ್ನು ಕಳುಹಿದ್ದೆನೆನ್ನಿರಿ. ದಾರಿಯು ಒಂದು ದಟ್ಟವಾದ ಅಡಿಕೆ ತೋಟದಲ್ಲಿ ಹೋಗಿತ್ತು. ಹಗಲಲ್ಲಿ ಕೂಡ ಅಲ್ಲಿ ಸೂರ್ಯಕಿರಣಗಳು ಪ್ರವೇಶಿಸುತ್ತಿದ್ದಿಲ್ಲ. ಹಿಂದಿನ ದಿನ ಆ ಹಳ್ಳಿಯ ಒಬ್ಬ ಹೆಂಗಸು ಒಂದು ಮುಸಲ್ಮಾನರ ಮೆರವಣಿಗೆಯ ಕೂಗನ್ನು ಕೇಳಿ ಬಹಳವಾಗಿ ಹೆದರಿ ಪಕ್ಕದ ಮನೆಗೆ ಓಡಿ ತಲೆ ಮರೆಸಿಕೊಂಡಾಗ ರಾತ್ರಿ ಅವಳಿಗೆ ಭಯದಿಂದ ಜ್ವರ ಬಂದು ಬಿಟ್ಟಿತ್ತು. ಹುಡುಗಿಯರು ಅವಳನ್ನು ಕಂಡು ಅವಳಿಗೆ ಧೈರ್ಯ ಹೇಳಿದರು ಅನಂತರ ಅವಳು ಅವರೊಡನೆ ೧೦ ಗಂಟೆ ರಾತ್ರಿಯಲ್ಲಿ ನಮ್ಮಲ್ಲಿಗೆ ಬಂದು ತಾನೂ ಅವರಂತೆಯೇ ಹೆದರುವುದಿಲ್ಲವೆಂದು ಪ್ರತಿಜ್ಞೆ ತೆಗೆದುಕೊಂಡದ್ದುಂಟೆಂದೂ ತಾನು ಇನ್ನೊಂದೂ ಹಾಗೆ ಹೆದರುವುದಿಲ್ಲೆಂದೂ ನನಗೆ ಹೇಳಿದಳು. ತಾನೊಬ್ಬಳೇ ದೀಪವಿಲ್ಲದೆ ಯಾರ ಸಹಾಯವೂ ಇಲ್ಲದೆ ತನ್ನ ಮನೆಗೆ ಹೋಗುವುದಾಗಿ ಅವಳು ಹಟ ಹಿಡಿದು ನಾನು ಕಳುಹಬೇಕೆಂದಿದ್ದ ಹುಡುಗಿಯರ ಸಹಾಯ ಕೂಡ ಇಲ್ಲದೆ ಒಬ್ಬಳೇ ಹೋದಳು. ನಮ್ಮ ಓಣಿಯ ಒಬ್ಬ ಹಿರಿಯ ವಿಧವೆಯಾದ ಠಾಕೂರಮಾ ಎಂಬವಳು ಅತ್ಯಂತ ಅಪಾಯಕರವೆಂದು ಗಣಿಸಲಾಗಿದ್ದ ಕಾಜ್ಲಾ ತೋಲಿಗೆ ಹೋಗಿ ಮುಸಲ್ಮಾನರಿಗೆ ಕೂಡ ಆಶ್ಚರ್ಯವನ್ನುಂಟು ಮಾಡಿದಳು. "ಅದರೇನು, ಅವಳು ಭಾಟಿಯಾಪುರದವಳು ಅದೇ ಹೇಳುತ್ತದೆ—ಅವಳೆಂಥವಳೆಂಬುದನ್ನು!" ಎನ್ನುತ್ತಿದ್ದರು. ಕರ್ಪರ ಹಳ್ಳಿಯಲ್ಲಿ ಅವಳು ಹೋಗುತ್ತಿದ್ದಾಗ ಹೀಗಾಯಿತು. ಕರ್ಪರ ಹಳ್ಳಿಯೆಂದರೆ ತಿಂಗಳ ಹಿಂದೆ ರಾಯಸಾಹೇಬ ರಾಜೇಂದ್ರಲಾಲ ಚೌಧರಿಯವರ ಕುಟುಂಬದ ದಾರುಣ ಕತೆಯಿಂದ ವಿಖ್ಯಾತವಾದದ್ದು. "ಅಲ್ಲ, ಅಲ್ಲ—ಅವಳೊಬ್ಬ ನೇಪಾಳಿ ಇರಬೇಕು" ಎಂದರು ಕೆಲವರು. ಏಕೆಂದರೆ ಅವಳು ಸ್ವಲ್ಪ ಹಾಗೇ ಕಾಣುತ್ತಿದ್ದಳು· "ನಮ್ಮ ಓಣಿಯಲ್ಲಿ ಬಂದು ಒಂದು ಹದಿನೈದು ದಿನ ಇದ್ದರೆ ನೀವೆಲ್ಲರೂ ನೇಪಾಳಿಗಳೇ ಆಗುವಿರಿ" ಎಂದು ಅವಳು ಮಾರುತ್ತರವಿತ್ತಳು. ಅಂದಿನಿಂದ ಅವಳನ್ನು ನಾವೆಲ್ಲರೂ "ನೇಪಾಳೀಮಾ" ಎಂದು ಕರೆಯಲಾರಂಭಿಸಿದೆವು. ಎರಡು ತಿಂಗಳ ನಂತರ ನಡುರಾತ್ರಿಯಲ್ಲಿ ಕೆಲವರು ಬಂದು ನನ್ನನ್ನೆಬ್ಬಿಸಿ ಗೋಪೀರಬಾಗಿಗೆ ಬರಬೇಕೆಂದರು. ಅಲ್ಲಿ ಒಬ್ಬ ಮಾಲಿಯ ಮನೆಗೆ ಒಂದು ಗಂಟೆಯೊಳಗೆ ಬೆಂಕಿ ಹಚ್ಚುವದಾಗಿ ಕೆಲವು ದುಷ್ಟರು ಬೆದರಿಕೆ ಹಾಕಿದ್ದರು. ನನ್ನೊಡನೆ ನಾನು ಠಾಕೂರಮಾ ಮತ್ತು ಇಬ್ಬರು ಹುಡುಗಿಯರಲ್ಲಿ ಒಬ್ಬಳನ್ನು ಕರೆದುಕೊಂಡು ಹೊರಟೆ. ಅದೇ ಹೊತ್ತಿಗೆ ಒಂದು ದಿನ ಸಿಂಧೂರಪುರವೆಂಬ ಹಳ್ಳಿಯಲ್ಲಿ ಮುಂಚಿನ ದಿನ ದರೋಡೆಯೊಂದು ನಡೆದುದಾಗಿ ಕೆಲವರು ಬಂದು ವರದಿ ಮಾಡಿದರು. ಕತ್ತಲಾದ್ದರಿಂದ ತಮ್ಮ ಹಳ್ಳಿಗೆ ಯಾರ ಬೆಂಗಾವಲೂ ಇಲ್ಲದೆ ಮರಳಲು ಅವರು ಅಂಜಿದರು. ಇಬ್ಬರು ಹುಡುಗಿಯರು ಅವರ ಹಿಂದೆ ಹೋಗುವುದಾಗಿ ಹೇಳಿದರು. ಆದರೆ ಮೇಲೆ ಅವರು ಬೆಂಗಾವಲಿಗಳು ಬೇಕೆಂದು ಕೇಳದೆ ತಾವೇ ಮರಳಿದರು.

—೮ನೇಯ ಪುಟಕ್ಕೆ

ಪವಿತ್ರ ನಿಮಿಷಗಳು

(೩ನೇಯ ಪುಟದಿಂದ)

ಮುಖ್ಯವಾಗಿ ಒಬ್ಬ ಭಯಂಕರ ಖೂಳಿಯೊಬ್ಬನನ್ನು ನಾನು ನೋಡಬೇಕಾಗಿತ್ತು. ಅವನು ಆಗಾಗ ಕೆಲವು ಹಳ್ಳಿಗಳಲ್ಲಿ ಕಳ್ಳತನ ಮಾಡುತ್ತ ಜನರಲ್ಲಿ ಭಯವನ್ನು ಹುಟ್ಟಿಸಿದ್ದನು. ಅವನ ಹೆಸರೆತ್ತಿದರೆ ಜನರು ಥರ ಥರ ನಡುಗಿ ಬೆಚ್ಚಿಬೀಳುತ್ತಿದ್ದರು. ಅವನೂ ನಾನೂ ಮಾತಾಡುತ್ತ ನಿಂತಿದ್ದಾಗ ಸೊಗಸಾದ ಉಡುಪು ಧರಿಸಿದ ಹುಡುಗಿಯರು ಅವನ ಮನೆಯೊಳಗೆ ನುಗ್ಗಿ ನಮ್ಮ ಮುಂದೆ ಬಂದು ನಿಂತರು. ನೋಟಬೇಕಾಗ್ ಕೋಣೆಯಲ್ಲಿ ಅವರಲ್ಲಿ ಒಬ್ಬಳು ತನ್ನ ಮುಖವನ್ನು ಇದೇ ಚೋರನಾಯಕನು ಕೋಡಿದ್ದನು. ನಾನು ಅವನ ಮುಂದೆ ಹೋಗಿ ನಿಂತು ತನ್ನ ತಲೆಯನ್ನು ಕಡಿದು ಹಾಕೆಂದು ನಿರ್ಭಯವಾಗಿ ಹೇಳಬಹುದಾಗಿ ಅವಳು ಪ್ರತಿಜ್ಞೆ ಮಾಡಿದ್ದಳು. ನಾನು ನಡುಗಿ ನೀವು ಓಡಿಹೋಗೆನು ಎಂದೂ ಅವಳು ಆಣೆ ಮಾಡಿದ್ದಳು.

"ನೀವೆಲ್ಲಿಗೆ ಬಂದಿರುವಿರೆಂಬುದನ್ನು ಬಲ್ಲಿರಾ?" ಎಂದು ನಾನು ಅವರನ್ನು ಕೇಳಿದೆ.

"ಹೌದು... ಇಂಥವನ ಮನೆಗೆ"

"ನಿಮಗೆ ಗೊತ್ತೇನು...?"

"ಹೌದು."

"ಹಾಗಾದರೆ ಅವನು ಇಲ್ಲೇ ಇದ್ದಾನೆ," ಎಂದೆ; ನನ್ನ ಬಳಿ ಕುಳಿತ ಅವನನ್ನು ತೋರಿಸುತ್ತ "ನಮ್ಮ ನಿಮ್ಮಂತೆಯೇ ಅವನೂ ಒಬ್ಬ ಸಾಮಾನ್ಯ ಮನುಷ್ಯನಲ್ಲದೆ ಬಾಲ ಕೊಂಬುಗಳುಳ್ಳ ಒಂದು ಭಯಂಕರ ಪ್ರಾಣಿಯಲ್ಲವೆಂಬುದನ್ನು ಈಗ ತಿಳಿದಿರಾ? ಸಮಾಧಾನವಾಯಿತೆ?" ಅವರು ವಾತ್ಸಲ್ಯದ ಒಂದು ನಗೆಯೊಂದನ್ನು ನಕ್ಕರು. ಅದೇ ಮನುಷ್ಯನಿಂದ ತರಬೇತಾದ ಒಂದು ಕಳ್ಳರ ತಂಡವು ಮೇ ತಿಂಗಳಲ್ಲಿ ಮೇಲಿಂದ ಮೇಲೆ ಅಲ್ಲಲ್ಲಿ ದರೋಡೆ ಮಾಡತೊಡಗಿತ್ತು. ಕೊನೆಗೆ ಅವರು ಕಾರಕಬಿಲ್ಲಿಗೆ ಬಂದರು. ಅಲ್ಲಿ ಅವರು ಜನರು ಬಿಟ್ಟು ಓಡಿಹೋದ ಒಂದು ಹಾಳು ಮನೆಯನ್ನು ಹೊಕ್ಕು ತೆಂಗಿನ ಮರಗಳ ಪ್ಲಿದ್ದ ಬಲಿತ ತೆಂಗಿನ ಕಾಯಿಗಳೆಲ್ಲವನ್ನು ಹಾಳು ಮಾಡಿ ಎಳೆಯುವನ್ನು ಹಾರಡೆ ಮಾಡಿ ಕಣಿಯು ತುಂಬ ಬಿಡಿಗಿದ ಸಿಪ್ಪೆಗಳನ್ನು ಬಿಟ್ಟು ಹೋದರು. ಅದಕ್ಕೇ ಉತ್ತರವಾಗಿ ನಾವು ರಾತ್ರಿ ಗಸ್ತಿ ತಿರುಗುವ ವ್ಯವಸ್ಥೆ ಮಾಡಿದೆವು.

ದಿನವೂ ರಾಮನಾಮ ಸಂಕೀರ್ತನ ನಡೆಯುತ್ತಿದ್ದ ದೇಗುಲದೆದುರು ನಾನು ಆ ಹಳ್ಳಿಯ ಗಂಡಸರು, ಹೆಂಗಸರು ಮತ್ತು ಮಕ್ಕಳನ್ನು ಸಭೆ ಸೇರಿಸಿದೆ. "ಈಗ ಹೇಳಿರಿ, ನಿಮ್ಮಲ್ಲಿ ಎಷ್ಟು ಜನರು ರಾತ್ರಿಯ ಗಸ್ತಿಗೆ ಸಿದ್ಧರಿದ್ದೀರಿ?" ಎಂದ ಕೂಡಲೆ ನೂರಕ್ಕೆ ತೊಂಬತ್ತು ಹೆಂಗಸರು ಕೈ ಯೆತ್ತಿದರು. ಗಂಡಸರಲ್ಲಿ ಮೂವರು ಕೈಯೆತ್ತಲಿಲ್ಲ. ಗಸ್ತಿ ತಿರುಗಲು ಯಾರಿಗೆ ಇಷ್ಟವಿಲ್ಲವೋ, ಯಾರು ಸಿದ್ಧರಿಲ್ಲವೋ ಅವರು ಮಕ್ಕಳುಮರಿಗಳನ್ನು ನೋಡಿಕೊಳ್ಳುವ ಮುಂತಾದ ಗೃಹಕೃತ್ಯದ ಕೆಲಸಗಳನ್ನು ನೋಡಿಕೊಂಡು ರಾತ್ರಿಯ ಗಸ್ತಿಗೆ ಹೆಂಗಸರನ್ನು ಮುಕ್ತಗೊಳಿಸಬೇಕೆಂದು ನಾನು ಸಲಹೆ ಮಾಡಿದೆ. ಹಾಗೇ ಆಗಲೆಂದು ಎಲ್ಲರೂ ಜೋರಾಗಿ ನಕ್ಕು ಅದರಂತೆ ನಡೆಯಲೊಪ್ಪಿದರು.

ಅನಂತರ ರಾತ್ರಿಯ ಗಸ್ತಿ ತಿರುಗಲು ಸಿದ್ಧರಿರುವಿರೋ ಎಂದು ನಾನು ಹೆಂಗಸರನ್ನು ಕೇಳಿದೆ.

"ಹೌದು, ಆದರೆ ನಿಮ್ಮ ಜೊತೆಯಲ್ಲಿ," ಅವರೆಂದರು.

"ಅದು ಸರಿಯಾದುದಲ್ಲ," ನಾನು ಜೈದು ಹೇಳಿದೆ. "ನೀವು ನಿಮಗೆ ದೇವರಲ್ಲಿ ವಿಶ್ವಾಸವಿದೆಯೆಂದು ಹೇಳಿದ್ದಿರಿ."

"ಹೌದು, ನಮಗೆ ನಿಜವಾಗಿಯೂ ವಿಶ್ವಾಸವಿದೆ. ಆದರೆ ನಮಗೆ ನಿಮ್ಮ ಪರಿಚಯವಾಗಿದೆ; ಎಂಥ ಕಠಿನ ಪ್ರಸಂಗದಲ್ಲೂ ನಿಮ್ಮ ಬುದ್ಧಿವಂತಿಕೆ ಕಾರ್ಯಸಾಧಕವಾಗುತ್ತದೆಂದು ನಮಗೆ ನಂಬಿಕೆಯಿದೆ. ನಮ್ಮನ್ನೆಂದೂ ನೀವು ಸಾಯಗೊಡಲಾರಿರಿ."

"ಈಗ ನೀವು ನಿಮಗೆ ದೇವರಲ್ಲಿರುವ ನಂಬಿಗೆಗೆ ಕೊಟ್ಟ ಸಾಕ್ಷಿಯಿಂದ ನನ್ನಲ್ಲಿ ನಿಮಗೆ ಎಂತಹ ವಿಶ್ವಾಸವಿದೆಯೆಂಬುದನ್ನು ನಾನು ತಿಳಿದುಕೊಂಡೆ. ಎಂಥ ಕಾಲದಲ್ಲೂ ನಾನು ನಿಮ್ಮನ್ನು ರಕ್ಷಿಸಬಲ್ಲೆನೆಂದು ನೀವು ತಿಳಿದರೆ ನಿಮ್ಮದು ತಿರುಕನ ಕನಸಾದೀತು. ನಿಜ ನಾನು ನನ್ನ ಪ್ರಾಣವನ್ನೇ ರಕ್ಷಿಸಿಕೊಳ್ಳಲಾರೆ. ಕರ್ತವ್ಯ ಪಾಲನೆಯಲ್ಲಿ ಮರಣವೊದಗಿದರೆ ಅದು ನಮಗೆ ಬಹಳ ಒಳ್ಳೆಯದೆಂದು ನನಗಿರುವ ನಂಬಿಗೆಯೊಂದೇ ನನ್ನ ಒಡ್ಡಿ ಸಾಮರ್ಥ್ಯ. ಈಗ ಹೇಳಿರಿ- ನಾನು ಇದನ್ನು ಹೇಳಿದ ನಂತರ ನನ್ನಲ್ಲಿ ನಿಮಗೆ ವಿಶ್ವಾಸವಿದ್ದರೆ ನೀವು ಇದನ್ನು ಅಕ್ಷರಶಃ ಸತ್ಯವೆಂದು ತಿಳಿಯತಕ್ಕದ್ದು-ನನ್ನ ಸಾಮರ್ಥ್ಯದ ಇತಿಮಿತಿಯ ಪರಿತಿ ನಿಮ್ಮಲ್ಲಿ ಎಷ್ಟು ಜನರು ರಾತ್ರಿ ನನ್ನೊಡನೆ ಬರಲು ತಯಾರಿದ್ದೀರಿ?"

ಉತ್ತರವಾಗಿ, ಒಂದಾದ ಮೇಲೊಂದರಂತೆ ಕೈಗಳು ಕೆಳಗೆ ಬೀಳಹತ್ತಿ ಕೊನೆಯಲ್ಲಿ ಕೇವಲ ಏಳೇ ಕೈಗಳುಳಿದವು. "ನಿಮ್ಮ ಜೊತೆಯಲ್ಲಿ ನಾವು ಸಾವನ್ನು ಎದುರಿಸುವೆವು" ಎಂದರವರು. ಅವರಲ್ಲೊಬ್ಬಳು, "ಸತ್ಯವನ್ನು ಹೇಳುವುದಾದರೆ ನಾವು ಸಾವಿಗಂಜುವುದಿಲ್ಲ, ಅತ್ಯಾಚಾರಕ್ಕಂಜುವೆವು." "ಸಾಯಲಂಜದವಳ ಮಾನವನ್ನು ಯಾರೂ ತೆಗೆಯಲಾರರು" ಎಂದೆ ನಾನು. "ಪಾವಿತ್ರ್ಯವೇ ಹೆಂಗಸಿನ ಅತ್ಯುತ್ತಮ ರಕ್ಷಾಕವಚ. ಅದು ಅವಳಿಗೆ ಅಪಾಯವನ್ನು ಎದುರಿಸುವ ಸಾಮರ್ಥ್ಯವನ್ನು ಕೊಡುತ್ತದೆ; ಅದರಿಂದ ಅದು ಅವಳನ್ನೆಂದೂ ಓಡಿ ಹೋಗುವಂತೆ ಮಾಡದು. ಕಡೆಯಲ್ಲಿ ವಿವೇಚಿಸಿದರೆ ಅದು ಭಗವಂತನಲ್ಲಿಯ ಜೀವಂತ ಶ್ರದ್ಧೆಯ ಪ್ರಶ್ನೆಯೇ ಆಗಿ ಪರಿಣಮಿಸುತ್ತದೆ. ಅಂಜದೆ ಸಾಯಲು ಮನುಷ್ಯನಿಗೆ ಅದೊಂದೇ ಶಕ್ತಿ ಕೊಡಬಲ್ಲುದು. ಅದರ ಬಲವೊಂದರಿಂದ ಮಾತ್ರ ಅವನು ಸಿಟ್ಟಿಲ್ಲದೆ, ಪ್ರತೀಕಾರ ಬುದ್ಧಿಯಿಲ್ಲದೆ ಸಾವನ್ನಪ್ಪಬಲ್ಲವನಾದಾನು." ಈ ವಾದ ಅವರ ಎದೆಗೆ ನಾಟಿತು.

ಏಳು ಜನರಲ್ಲಿ ಒಬ್ಬಳನ್ನು ಆರಿಸಿ ನೀನೊಬ್ಬಳೇ ಪಕ್ಕದ ಹಳ್ಳಿಗೆ ಹೋಗೆಂದೆನು. "ನನ್ನೊಡನೆ ನೀನು ನಿಜವಾಗಿಯೂ ಸಾವನ್ನೆದುರಿಸಲು ಸಿದ್ಧಳಿರುವೆಯಾದರೆ, ಖಂಡಿತವಾಗಿಯೂ ನನ್ನ ಅಪ್ಪಣೆಯ ಮೇರೆಗೆ ನೀನು ಸಂಭಾವ್ಯ ಅಪಾಯವನ್ನೆದುರಿಸಲು ಸಿದ್ಧಳೀಬೇಕು. ಭಯವು ಹೃದಯವನ್ನು ಹಿಡಿದರೆ ರಾಮನಾಮಾಮೃತವನ್ನು ಪಾನ ಮಾಡು," ಎಂದು ಸೂಚಿಸಿದೆ.

ಅವಳು ಕೆಲ ನಿಮಿಷ ತಡೆದಳು. ಅನಂತರ ಒಂದು ನಿಟ್ಟುಸಿರನ್ನು ಬಿಟ್ಟು "ಹೇ ಭಗವನ್" ಎಂಬ ಎರಡೇ ಶಬ್ದಗಳನ್ನು ಗೊಣಗುಡನಿಯಿಂದ ಉಚ್ಚರಿಸಿ ಮುಷ್ಟಿಯನ್ನು ಭದ್ರ ಮಾಡಿಕೊಂಡು ಕತ್ತಲಲ್ಲಿ, ಕೆಸರಲ್ಲಿ ಒಬ್ಬಳೇ ಹೊರಟಳು. ಅವಳ ಹೆಸರು ಕು.. ಒಬ್ಬರ ಮೇಲೊಬ್ಬರಂತೆ ಉಳಿದ ಆರು ಜನರೂ ಅವಳನ್ನು ಹಿಂಬಾಲಿಸಿದರು. ಅದರ ನಂತರ ಅವರು ತಪ್ಪದೆ ರಾತ್ರಿಯ ಗಸ್ತಿಗೆ ಬಂದರು ಮತ್ತು ನಾನು ರಾತ್ರಿ ಎಂಥ ವೇಳೆಯಲ್ಲಿ ಹೋದರೂ ಅವರಲ್ಲಿ ಏಳೂ ಜನ ಓಗೊಡದಿರುತ್ತಿರಲಿಲ್ಲ.

ಕೊನೆಯ ಅಂಕ ಅದೇ ಸ್ವಲ್ಪ ಕಾಲದಲ್ಲಿ ಬಂತು. ಒಂದು ದಿನ ಕು... ಎಂಬವಳು ತನ್ನ ಅಡಿಕೆ ತೋಟದಲ್ಲಿ ಒಬ್ಬಳೇ ಹೋಗಿ ಶೌಚಕ್ಕೆ ಕುಳಿತಾಗ ಅ ಎಂಬ ಆ ಊರಿನ ಕುಪ್ರಸಿದ್ಧ ಪಾಪಿಷ್ಠನು ಅನೇಕ ದಿನಗಳಿಂದ ಅವಳ ಮನೆಯ ಸುತ್ತುಮುತ್ತು ತಿರುಗುತ್ತಿದ್ದು ಅಶ್ಲೀಲ ಚೇಷ್ಟೆಗಳನ್ನು ಅವಳೆದುರು ಮಾಡುತ್ತಿದ್ದವನು ಅಲ್ಲಿಗೆ ಬಂದನು. ಅವಳು ಆ ಕೂಡಲೆ ಎದ್ದು ಮನೆಗೆ ನಡೆದು ಅವಿತುಕೊಂಡಳು. ನಡೆದ ಸಮಾಚಾರವನ್ನು ತಂದೆಗೆ ಹೇಳಿದಳು. ಈ ಸುದ್ದಿ ನನಗೆ ವರದಿ ಮಾಡಲ್ಪಟ್ಟಿತು. ನಾನು ಆ ಪಾಪಿಷ್ಠನನ್ನು ಬರಹೇಳಿದೆ. ಅವನನ್ನು ಹಿಂದೆ ಬೇರೆ ಬೇರೆ ಅಪರಾಧಗಳಿಗಾಗಿ ನಾನು ಅನೇಕ ವೇಳೆ ತನಿಖೆಗೆ ಗುರಿಪಡಿಸಬೇಕಾಗಿ ಬಂದಿತ್ತು. ವೇಳೆಗಳೆಯದೆ ತಕ್ಕ ಪ್ರತೀಕಾರೋಪಾಯವನ್ನು ಮಾಡದಿದ್ದರೆ ಕೆಲಸ ಕೆಡುವುದೆಂದುಕೊಂಡೆ. ಆ ಕರೆಯ ಮೇರೆಗೆ ಆ ಪಾಪಿಯು ತನ್ನ ತಪ್ಪನ್ನೊಪ್ಪಿಕೊಂಡು ಬಹಳವಾಗಿ 'ಜೀಯೆಂದು ದೇವೆಂದು' ನನ್ನ ಉಪದೇಶ ಕೇಳಬೇಕೆಂದು ಅಪೇಕ್ಷಿಸಿದನು. 'ನೀನು ನನಗೆ ಸ್ವತಃ ಏನನ್ನೂ ಮಾಡಿಲ್ಲ. ನೀನು ನಿನ್ನ ಪಶ್ಚಾತ್ತಾಪದಲ್ಲಿ ಸತ್ಯವಂತನಿದ್ದರೆ ಅದನ್ನು ದೂರು ಕೊಟ್ಟವಳಿಗೆ ಸಮಾಧಾನವಾಗುವಂತೆ ತಿಳಿಸಬೇಕು. ನಿನ್ನದು ಒಬ್ಬ ಹೆಂಗಸಿನ ವಿರುದ್ಧ ಮಾಡಿದ ಅಪರಾಧವಿರುವುದರಿಂದ ನೀನು ಹೆಂಗಸರ ಸಭೆಯೆದುರು ನಿಂತು ಅವರು ಕೊಟ್ಟ ನ್ಯಾಯ ನಿರ್ಣಯವನ್ನು ಸ್ವೀಕರಿಸಬೇಕು. ಸತ್ಯಾಂಶವೆಲ್ಲವನ್ನೂ ಅಲ್ಲಿ ಹೇಳಿದರೆ ಎಲ್ಲರೂ ನಂಬುತ್ತಾರೆ!' ಎಂದೆ. ಅದೇ ಕಾಲದಲ್ಲಿ ಈ ದೂರು ಯೂನಿಯನ್ ಬೋರ್ಡ ಅಧ್ಯಕ್ಷರ ಪಂಚಾಯತಕ್ಕೆ ಮುಟ್ಟಿತು. ಅವರು ಇವನ ವಾಜ್ಯವನ್ನು ಮಧ್ಯಾಹ್ನ ೪ ಗಂಟೆಗೆಂದು ನಿಶ್ಚಯಮಾಡಿದರು. ಹೆಂಗಸರ ನ್ಯಾಯಸಭೆ ಸೇರುವದು ೨ ಗಂಟೆಗೆಂದಿಡಲಾಯಿತು. ನಮ್ಮಲ್ಲೊಂದು ನೋಡತಕ್ಕದ್ದು: ನವಖಾಲಿಯಲ್ಲಿಯ ಗಡಿಯಾರಗಳು ಬೆಳಗು, ಮಧ್ಯಾಹ್ನ ಮತ್ತು ಸಂಜೆಗಳನ್ನು ಮಾತ್ರ ತೋರಿಸುತ್ತವೆ,ಎಂದು. ಎರಡು ಕಾರ್ಯಕ್ರಮಗಳೂ ಮಧ್ಯಾಹ್ನದ ಮೇಲೆ ನಡೆಯತಕ್ಕದ್ದೆಂದು ನಿಶ್ಚಯಿಸಲಾಯಿತು, ಯೂನಿಯನ್ ಬೋರ್ಡಿನ ಅಧ್ಯಕ್ಷರ ಪಂಚಾಯತ ಸಭೆ ಮತ್ತು ಹೆಂಗಸರ ನ್ಯಾಯಸಭೆ ಎರಡೂ ಸಂಜೆ ೩ ಗಂಟೆಗೆ ಸೇರಿದವು. ಸ್ವಾಭಾವಿಕವಾಗಿ, ಗಂಡಸರು ಕಾಯಬೇಕಾಯಿತು. ಹೆಂಗಸರ ನ್ಯಾಯಸಭೆ ಮೊದಲು ಪ್ರಾರಂಭವಾಯಿತು.

ಅದೊಂದು ಮಹಾದಿನ. ಊರಿನ ಇತಿಹಾಸದಲ್ಲಿ ಕೇವಲ ಹೆಂಗಸರಿಂದ ತುಂಬಿದ ಒಂದು ನ್ಯಾಯಸಭೆಯಲ್ಲಿ ಹೆಂಗಸರಿಗೆ ಅಪರಾಧ ಮಾಡಿದವನೊಬ್ಬನ ತನಿಖೆ ನಡೆಯುವುದು ಅದೇ ಮೊದಲನೆಯ ಸಲ. ಅಗಸ್ಟಿನ ಘಟನೆಗಳ ನಂತರ ಇದು ಸಂಭವಿಸಿದ್ದರಿಂದ ಇದನ್ನು ನಂಬುವುದೇ ಕಷ್ಟವೆಂಬಂತಾಯಿತು. ಆದುದರಿಂದ ಮುಂಚಿನ ರಾತ್ರಿ ಮಳೆ ಬಂದು ನೆಲವೆಲ್ಲ ಕೆಸರಿಂದ ರಾಡಿಯಾಗಿ ಕಾಲುವೆಗಳೆಲ್ಲ ತುಂಬಿ ಕೊಚ್ಚೆಯಾಗಿ ಹೋಗಿದ್ದರೂ ನಾಲ್ಕು ಹಳ್ಳಿಗಳಿಂದ ಸುಮಾರು ನೂರು ಜನ ಹೆಂಗಸರೂ ಹುಡುಗಿಯರೂ ನೀರನ್ನು ಹಾಯ್ದುಕೊಂಡು ರಾಮಜಪ ಮಾಡುತ್ತ ಅಲ್ಲಿಗೆ ಹಾಜರಾದರು. ಗಂಡಸರಿಗೆ ಪ್ರವೇಶ ಕೊಡಲಿಲ್ಲ. ಆದರೆ ಔದಾರ್ಯದ ಮೇರೆಗೆ ನಾನು, ನನ್ನ ದ್ವಿಭಾಷಿ ಮತ್ತು ಸಹೋದ್ಯೋಗಿ ಇಷ್ಟು ಜನರಿಗೆ ಪ್ರವೇಶವಿತ್ತು. ದೂರನ್ನು ವಿವರಿಸುತ್ತ, ನಾನು ನಿರ್ಣಾಯಕರು ದೃಢ ಮನಸ್ಕತೆಯಿಂದಲೂ ನಿರ್ಭಯದಿಂದಲೂ ಇರಬೇಕು, ಆದರೆ ಕ್ಷಮಾಶೀಲರಾಗಿರಬೇಕು ಎಂದೆ. ಅವನನ್ನು ಅವಮಾನಿಸುವುದು ಇಲ್ಲವೆ ಶಿಕ್ಷಿಸುವುದೇ ಗುರಿಯೆಂದು ತಿಳಿಯದೆ ಅವನನ್ನು ಸುಧಾರಿಸುವುದೇ ಉದ್ದೇಶವೆಂದು ತಿಳಿದುಕೊಳ್ಳಬೇಕೆಂದು ಅವರಿಗೆ ಹೇಳಿದೆ. ದೂರು ಕೊಟ್ಟಾಕೆ ತನ್ನ ಅನುಭವವನ್ನು ವಿಶದಪಡಿಸಿದಳು. ನಿರ್ಣಾಯಿಕೆಯರೆದುರು ನಿಂತಾಗ ತನ್ನ ವಿರುದ್ಧ ಅವರಿಗಿರಬಹುದಾದ ಬಲವಾದ ವಿರೋಧಾಭಿಪ್ರಾಯಕ್ಕಂಜಿ ಅಪರಾಧಿಯು ಥರ ಥರಿಸುತ್ತ ತೊದಲತೊಡಗಿದನು. ನಾನು ಅನಂತರ ಸಭೆಯಿಂದ ಹೊರಬಿದ್ದೆ. ಆದರೆ ಅವನನ್ನು ಹೆಂಗಸರ ಕೈಯಲ್ಲಿ ಬಿಟ್ಟು ಬರುವಾಗ ಅವರಿಗೆ—ಅವನನ್ನು ಕ್ಷಮಿಸುವುದೆಂದರೆ ಅವನನ್ನು ಆಪಾದಿಸಿದಂತೆಯೇ ಸರಿ—ಎಂದು ಎಚ್ಚರಿಕೆ ಕೊಟ್ಟು ಬಂದೆ. ಹೆಂಗಸರು ಅವನೊಡನೆ ನೇರವಾಗಿ ಮಾತನಾಡಿ ದೈವಭಯವನ್ನು ಅವನ ತಲೆಯಲ್ಲಿ ತುಂಬಲು ಶಕ್ತರಾದರು. ೧೫ ನಿಮಿಷಗಳಲ್ಲಿ ನನ್ನನ್ನು ವಾಪಸು ಕರೆದರು. ಮತ್ತು ಅವನು ಸಂಪೂರ್ಣವಾಗಿ ತನ್ನ ಕತೆಯನ್ನು ವಿವರವಾಗಿ ಹೇಳಿದ. ಅದನ್ನು ಅಲ್ಲಿಯೇ ಬರೆದುಕೊಳ್ಳಲಾಯಿತು. ತನ್ನ ಹೇಳಿಕೆಯಲ್ಲಿ ಅವನು ದೂರು ಕೊಟ್ಟಾಕೆಯನ್ನು 'ತಾಯಿ' ಎಂದು ಕರೆದಿದ್ದ ಮತ್ತು ಅವಳಲ್ಲಿ ಕ್ಷಮಾಯಾಚನೆಮಾಡಿ ಅವಳು ಕೊಟ್ಟ ಶಿಕ್ಷೆಯನ್ನು ಅನುಭವಿಸುವುದಾಗಿ ವಚನ ಕೊಟ್ಟಿದ್ದ. ಅವನ ಹಿಂದಿನ ಇತಿಹಾಸವನ್ನು ಕಂಡು ಕೆಲ ಹೆಂಗಸರು ಅವನ ಪಶ್ಚಾತ್ತಾಪದ ಸತ್ಯತೆಯನ್ನು ಶಂಕಿಸಿ ಉಳಿದವರಿಗೆ ಮಾದರಿಯಾಗುವಂತೆ ಅವನನ್ನು ದಂಡಿಸಬೇಕೆಂದು ಬಗೆದರೂ ಕೊನೆಯಲ್ಲಿ ಯೂನಿಯನ್ ಬೋರ್ಡ ಅಧ್ಯಕ್ಷರ ಪಂಚಾಯತರ ತೀರ್ಪು ಏನಾಗುವುದೆಂಬುದನ್ನು ನೋಡಲು ಕಾದುಕುಳಿತರು.

ಅವನನ್ನು ಅನಂತರ ಸ್ಥಳೀಯ ಮುಸಲ್ಮಾನರ ಪಂಚಾಯತ ಸಭೆಯ ಮುಂದೆ ಒಯ್ದು ನಿಲ್ಲಿಸಲಾಯಿತು. ಅದು ಅತ್ಯಂತ ಕಠಿನವಾದ ನಿರ್ಣಯವನ್ನು ಕೊಟ್ಟಿತು. ಅವನು ಸ್ವಯಂ ತಪ್ಪೊಪ್ಪಿಕೊಂಡು ಅವರ ವಶನಾದುದರಿಂದ ಶಿಕ್ಷೆಯನ್ನು ಕಡಿಮೆ ಮಾಡಬೇಕೆಂದು ನಾನು ಕೇಳಿಕೊಂಡು ಆ ಪ್ರಕಾರ ನೂರು ರೂಪಾಯಿಗಳನ್ನು ಮುಂದೆ ನ್ಯಾಯವಾಗಿ ನಡೆದುಕೊಳ್ಳುವ ಬಗ್ಗೆ ಜಾಮೀನಾಗಿ ಅವನಿಂದ ಪಡೆದು, ದೂರು ಕೊಟ್ಟವಳಲ್ಲಿ ಎಲ್ಲರೆದುರು ಆ ಊರ ಪದ್ಧತಿಯಂತೆ ಅವನು ಪಶ್ಚಾತ್ತಾಪ ವ್ಯಕ್ತ ಮಾಡುವಂತೆ ಮಾಡಿ ಅವನನ್ನು ಬಿಟ್ಟುಬಿಡಲಾಯಿತು.

ಹೆಂಗಸರು ಸಮಾಧಾನ ಹೊಂದಿದರು; ಮತ್ತು ತಾಯ್ತನದ ಮಮತೆಯಿಂದ ಅವನ ನಡತೆಯ ಸುಧಾರಣೆಯಲ್ಲಿ ಆಸಕ್ತಿ ವಹಿಸಿದರು. ಅವನನ್ನು ಕಂಡು, "ನೀನು ನಮ್ಮಲ್ಲಿ ಕ್ಷಮಾಯಾಚನೆ ಮಾಡಿದಂತೆ ದೇವರಲ್ಲಿ ಯಾಚಿಸಿದರೆ ಖಂಡಿತವಾಗಿಯೂ ಅವನು ನೇರವಾಗಿ ನಿನ್ನ ಗುಣವನ್ನು ತಿದ್ದಿ ಸನ್ಮಾರ್ಗಕ್ಕೆ ಹಚ್ಚುವನು" ಎಂದು ಹೇಳಿದರು.

ಈ ಸಂಗತಿಯ ನೀತಿಯನ್ನು ಹೆಂಗಸರ ಸಭೆಗೆ ತೋರಿಸಿಕೊಡುವಾಗ, 'ನೀವು ಬರಿ ತುಟಿಯಿಂದಷ್ಟೇ ಅಲ್ಲದೆ ಹೃದಯದಿಂದ ರಾಮಸ್ಮರಣೆ ಮಾಡಿದರೆ ಇನ್ನು ಮುಂದೆ ನೀವಲ್ಲ, ಪುಂಡರೇ ನಿಮ್ಮ ಮುಂದೆ ಥರಥರಿಸುತ್ತಾರೆ. ಎಷ್ಟರ ಮಟ್ಟಿಗೆ ನೀವು ನಿಜವಾಗಿ ಆ ಮಂತ್ರವನ್ನು ಉಚ್ಚರಿಸುತ್ತಿರುವಿರೋ ಅಷ್ಟರ ಮಟ್ಟಿಗೆ ಅದು ನಿಜವಾದೀತೆ, ಎಂದೆ. ಅಂದಿನಿಂದ ನಮ್ಮ ಆ ನಾಲ್ಕು ಹಳ್ಳಿಗಳಲ್ಲಿ ಇಂತಹ ಹೆಚ್ಚಿನ ಸಂಗತಿ ನಡೆಯಲಿಲ್ಲ. ಆ ಮೇಲೆ ಹೊಸ ಭಾವದ ಗುರುತಾಗಿ, ಗಂಡಸರೊಡನೆ ಇರುವ ತಮ್ಮ ಸಮಾನತೆಯ ಪ್ರತೀಕವಾಗಿ ಹೆಂಗಸರೂ ಗಂಡಸರಂತೆ ವಿಶೇಷ ಸಮಾರಂಭಗಳಲ್ಲಿ ಕೋಟುಗಳನ್ನು ಸಮವಸ್ತ್ರವಾಗಿ ಧರಿಸುವ ನಿರ್ಣಯವನ್ನು ತೆಗೆದುಕೊಂಡರು.

ಹೊಸದಿಲ್ಲಿ, ೧೧-೧-೪೮

ರಶಿಯದಿಂದ ಕಲಿಯತಕ್ಕ ಪಾಠ

ಇತ್ತೀಚೆ ಸಿರಿಯೋಲಗದಲ್ಲಿ ಕಡಿತದ ಸೂಚನೆಯೊಂದರ ಬಗ್ಗೆ ಮಾತಾಡುವಾಗ ಮುಖ್ಯಮಂತ್ರಿಗಳಾದ ಪಂಡಿತ ಜವಾಹರಲಾಲ ನೆಹರು ಇವರು ಮಾಸ್ಕೋದಲ್ಲಿಯ ರಾಯಭಾರ ಗೃಹಕ್ಕಾಗಿ ಸ್ಟಾಕಹಾಮದಿಂದ ಸಾಮಾನ ತರಿಸಿಕೊಂಡದ್ದನ್ನು ಬೆಂಬಲಿಸುತ್ತ ಹೀಗೆ ಹೇಳಿದರು.

"ಮಾಸ್ಕೋದಲ್ಲಿಯೆ ಎಲ್ಲವನ್ನು ಅಂದಗೊಳಿಸುವದು ಶಕ್ಯವಿಲ್ಲ. ಬರಿಮನೆ ನಿಮಗೆ ಸಿಕ್ಕುವದು. ಹಿಂದುಸ್ತಾನದಿಂದ ನಾವು ಸಾಮಾನಗಳನ್ನು ಕಳಿಸಬಯಸಿದೆವು; ಆದರೆ ವಿಮಾನಗಳಲ್ಲಿ ಇಲ್ಲಿಂದ ಖುರ್ಚಿ ಮೇಜುಗಳನ್ನು ಕಳಿಸಲು ವಿಪರೀತ ಹಣವನ್ನು ವೆಚ್ಚಮಾಡದೆ ಕಳಿಸುವದು ಅಶಕ್ಯವಾಗಿತ್ತು. ರಶಿಯಾದ ಸಾಮಾನಗಳಿಂದ ಅದನ್ನು ಅಂದಗೊಳಿಸುವದು ಶಕ್ಯವಾಗಿತ್ತು; ರಶಿಯದ ಜನರು ಈ ಯುದ್ಧಾನಂತರ ತಮಗೆ ಅತ್ಯವಶ್ಯವೆಂದು ತೋರುವ ಸಾಮಾನಗಳನ್ನಷ್ಟೆ ಸಿದ್ಧಪಡಿಸುತಿರುವರು ಮತ್ತು ಜೀವನಾವಶ್ಯಕ ಸಣ್ಣ ಸಣ್ಣ ಪದಾರ್ಥಗಳನ್ನು ಕೂಡ ಸಿದ್ಧಪಡಿಸುವಲ್ಲಿ ವೇಳೆ ಕಳೆಯಲು ಅವರು ಬಯಸುವದಿಲ್ಲ. ಇದಕ್ಕಾಗಿ ಅವರು ಅಭಿನಂದನೆಗೆ ಪಾತ್ರರಾಗಿರುವರು. ಯುದ್ಧಕಾಲದಲ್ಲಿ ಆದ ನಷ್ಟವನ್ನು ತುಂಬಿಕೊಂಡು ತಮ್ಮ ದೇಶವನ್ನು ಅವರಿಗೆ ಕಟ್ಟಬೇಕಾಗಿದೆ ಮತ್ತು ಅವರು ಭಾರೀ ಸಂದರ್ಭಗಳಲ್ಲಿ ಹಾಗೆ ಕೆಲಸ ನಡೆಸಿರುವರು. 'ಹರಕುಬಟ್ಟೆ'ಗಳಲ್ಲಿ ಮತ್ತು 'ಹರಿದಬೂಟು'ಗಳಲ್ಲಿಯೂ ಅವರು ಸಂಚರಿಸುವರು. ಅದಕ್ಕೆ ಅವರೇನು ನಾಚುವದಿಲ್ಲ. ಆದರೆ ಅವರು ಹೆಚ್ಚು ಉಪಯುಕ್ತವೆಂದು ತೋರುವ ಒಡ್ಡುಗಳನ್ನು, ನೀರಿನ ಸಂಗ್ರಹಾಲಯಗಳನ್ನು ಮತ್ತು ಕಾರಖಾನೆಗಳನ್ನು ಕಟ್ಟುತಿರುವರು. ಆದುದರಿಂದ ಜೀವನಾವಶ್ಯಕ ಇಂಥ ಸಣ್ಣ ಸಣ್ಣ ಪದಾರ್ಥಗಳನ್ನು ಅಲ್ಲಿ ದೊರಕಿಸುವದು ಸುಲಭವಲ್ಲ. ತತ್ಪರಿಣಾಮವಾಗಿ ನಮ್ಮ ರಾಯಭಾರ ಕಚೇರಿಯ ಖುರ್ಚಿ ಮೇಜುಗಳಿಗಾಗಿ ಸ್ಟಾಕಹಾಮಿಗೆ ಧಾವಿಸಬೇಕಾಯಿತು."

ರಶಿಯವು ೧೯೧೭ ರ ಕ್ರಾಂತಿಯ ನಂತರ ಆತ್ಯಂತಿಕ ಸ್ವಾರ್ಥತ್ಯಾಗ ಮಾಡಿ ತನ್ನ ಆರ್ಥಿಕ ಭದ್ರತೆಯನ್ನು ಮಾಡಿಕೊಂಡಿತು. ಕೆಲವೊಂದು ಬಗೆಯ ಅರ್ಥಶಾಸ್ತ್ರ ವಿಶಾರದರ ಪ್ರಶಂಸೆ ಮತ್ತು ಅಚ್ಚರಿಗೆ ಅವರು ಪಾತ್ರರಾಗಿದ್ದೂ ಉಂಟು. ಮೂವತ್ತು ವರುಷಗಳ ಐತ್ತಾಯದ ಯೋಜನೆಯ ನಂತರ ಮತ್ತೆ ಒಂದೇಸವನೆ ಉತ್ಪಾದನೆಯನ್ನು ಹೆಚ್ಚಿಸುವ ಯೋಜನೆಗಳನ್ನು ಕಾರ್ಯಕಾರಿಮಾಡಿದ ನಂತರವೂ ರಶಿಯವು ಖುರ್ಚಿ ಮೇಜುಗಳನ್ನು ಕೂಡ ಪೂರಯಿಸಲಾರದು ಮತ್ತು 'ಹರಕುಚಿಂದಿ ಮತ್ತು 'ಹರಿದ ಬೂಟಿನಿಂದಲೆ ಸಂತೃಪ್ತರಿರುವರು 'ಎಂಬದನ್ನು ನಾವು ನೋಡುತ್ತೇವೆ! ಹೀಗೇಕೆ? ಹಿಂದುಸ್ತಾನವೂ ಅದೇರೀತಿ ಕಾರ್ಯಾಸಕ್ತನಾಗುವ ಮುನ್ನ ಸ್ವಸ್ಥ ಮನಸ್ಸಿನಿಂದ ವಿಚಾರ ಮಾಡತಕ್ಕ ಪಾಠವಿದು.

ಮೊದಲನೆ ಯುದ್ಧಾನಂತರ ರಶಿಯವು ಬಹಳ ವೇಗದಿಂದ ಅನೇಕ ಜನರ ತ್ಯಾಗದಿಂದ ಭಾರೀ ಒಡ್ಡುಗಳನ್ನು, ನೀರಿನ ಸಂಗ್ರಹಾಲಯಗಳನ್ನು ಮತ್ತು ಕಾರಖಾನೆಗಳನ್ನು ಕಟ್ಟಿದ್ದುಂಟು. ಅವೆಲ್ಲ ಈಗೆಲ್ಲಿರುವುವು? ಮತ್ತೊಮ್ಮೆ ಅದೀಗ 'ಒಡ್ಡುಗಳನ್ನು, ನೀರಿನ ಸಂಗ್ರಹಾಲಯಗಳನ್ನು ಮತ್ತು ಕಾರಖಾನೆಗಳನ್ನು ಕಟ್ಟಹತ್ತಿರುವದು. ಅವೆಷ್ಟು ದಿನ ಬಾಳಬಲ್ಲವು? ಇನ್ನೊಂದು ಇಪ್ಪತ್ತು ವರುಷಗಳಲ್ಲಿ ಮತ್ತೆ ಇತಿಹಾಸದ ಪುನರಾವೃತ್ತಿಯಾಗುವದೆ? ಈಗ ಜನರು ಮತ್ತೆ ಹರಕುಚಿಂದಿಯಲ್ಲಿ ಮತ್ತು ಹರಕುಬೂಟುಗಳಲ್ಲಿ" ಸಂಚರಿಸುತಿರುವರೆಂದು ಹೇಳಲಾಗುತ್ತದೆ. ಇಷ್ಟೆಲ್ಲ ಸ್ವಾರ್ಥತ್ಯಾಗ ಮಾಡಿದ್ದರ ಲಾಭ ಜನಸಾಮಾನ್ಯಕ್ಕೆ ಯಾವ ರೀತಿಯಿಂದ ಸಿಕ್ಕಿದೆ! ಜಗತ್ತಿಗೂ ಅದರಿಂದ ಕಲ್ಯಾಣವೆಂತಾಗಿದೆ? ಹಿಂದುಸ್ತಾನವು ಇದರಿಂದ ಪಾಠ ಕಲಿಯಲಿ.

"ಅತ್ಯಂತ ಅವಶ್ಯಕ ವಸ್ತುಗಳನ್ನು ಮಾಡುವಲ್ಲಿ ನಿರತರಾಗಿರುವ ರಶಿಯನರಿಂದ ನಾವು ಪಾಠ ಕಲಿಯಬೇಕಲ್ಲವೆ? ಹಿಂದುಸ್ತಾನದಲ್ಲಿ ನಮಗೆ 'ಹರಿಯಲಿಕ್ಕೆ' ಕೂಡ 'ಬಟ್ಟೆಗಳು' ಇಲ್ಲ ಮತ್ತು

—೧೧ನೇ ಪುಟಕ್ಕೆ

ಇಸ್ಲಾಂ ಮತ್ತು ವಿಗ್ರಹಾರಾಧನೆ

ಇಸ್ಲಾಂ ಒಂದು ಕೇವಲ ದೇವಾದ್ವೈತ ಧರ್ಮ. ಅದು ವಿಗ್ರಹಾರಾಧನೆಯನ್ನು ನಿಷೇಧಿಸುತ್ತದೆ. "ಒಬ್ಬನೇ ಆದ ಪರಮಾತ್ಮ"ನನ್ನು ಪೂಜಿಸಿರೆಂದು ಅದು ತನ್ನ ಅನುಯಾಯಿಗಳಿಗೆ ಅಪ್ಪಣೆ ಕೊಡುತ್ತದೆ. ಅರೇಬಿಯದಲ್ಲಿ ಮತ್ತು ಸುತ್ತಲಿನ ಜಗತ್ತಿನಲ್ಲಿ ಆಗಿನ ಕಾಲಕ್ಕಿದ್ದ ಪರಿಸ್ಥಿತಿಯಲ್ಲಿ ಪೈಗಂಬರರಿಗೆ ಒಂದು ವಿಷಯ ಗೋಚರಿಸಿತು. ಅದೆಂದರೆ ಜನರ ಅವನತಿಗೂ ದುರ್ಗತಿಗೂ ಅವರ ಅಸಹಾಯಭಾವಕ್ಕೂ ಅವರಲ್ಲಿ ನೆಲಸಿದ ಕುರುಡು ನಂಬಿಗೆಗಳು ಮತ್ತು ಅಸಂಖ್ಯಾತ ದೇವರಲ್ಲಿದ್ದ ಅವರ ಶ್ರದ್ಧೆ ವ್ರತಾಚರಣೆ ಇವೇ ಮೂಲಭೂತ ಕಾರಣಗಳೆಂಬುದು. ಅವರು ತಮ್ಮ ಜೀವನದುದ್ದಕ್ಕೂ ಇವುಗಳ ವಿರುದ್ಧವಾಗಿಯೇ ಉಪದೇಶ ಮಾಡಿದರು. ಎಲ್ಲರನ್ನೂ ಒಂದೇ ದೇವರ ಪೂಜೆಗೆ ಅಣಿಗೊಳಿಸುವದರಲ್ಲಿ ಹಗಲಿರುಳು ಶ್ರಮ ವಹಿಸಿದರು.

ಈ ತೆರನಾದ ಉಪದೇಶವು ಧಾರ್ಮಿಕ ಇತಿಹಾಸದಲ್ಲಿ ಹೊಸತೇನು ಅಲ್ಲ. ಹಿಂದುಸ್ತಾನದ ಇತ್ತೀಚಿನ ಕಾಲದಲ್ಲಿ ಕೂಡ ಕಬೀರ ಸಾಹೇಬರು, ಗುರು ನಾನಕರು, ರಾಜಾ ರಾಮ ಮೋಹನರಾಯರು ಹಾಗು ಸ್ವಾಮಿ ದಯಾನಂದರು ವಿಗ್ರಹಾರಾಧನೆಯ ವಿರುದ್ಧ ಅತ್ಯಂತ ಆವೇಶಯುಕ್ತವಾಗಿಯೇ ಉಪದೇಶಿಸಿದ್ದುಂಟು. ಕೊನೆಯ ಶೀಖ ಗುರುವು ಔರಂಗಜೇಬನಿಗೆ ಬರೆದ ತನ್ನ ಪರ್ಶಿಯನ್ ಪತ್ರದಲ್ಲಿ ತುಂಬ ಹೆಮ್ಮೆಯಿಂದ ತಾನು ಮೂರ್ತಿನಾಶಕನೆಂದು ಹೇಳಿಕೊಂಡಿದ್ದಾನೆ. ೧೫ನೇ ಶತಮಾನದಿಂದೀಚೆಗಿನ ನೂರಾರು ಸುಧಾರಕ ಸಾಧುಸಂತರು ದೇಶದಲ್ಲೆಲ್ಲ ಇದೇ ಪ್ರಕಾರದ ಉಪದೇಶವನ್ನೇ ಮಾಡಿದರು.

ಕೆಲವು ಧರ್ಮಾಂಧ ಅರಸರ ಕೆಡಕು ಕೆಲಸಗಳ ಮೂಲಕ, ಜನಸಾಮಾನ್ಯರ ಮನೋಭೂಮಿಕೆಯಲ್ಲಿ ಇಸ್ಲಾಂ ಎಂದರೆ ಆಕ್ರಮಣಶೀಲ, ಪರಧರ್ಮ ಘಾತಕ ಹಾಗೂ ಮೂರ್ತಿವಿನಾಶಕ ಧರ್ಮವೆಂಬ ಭಾವನೆ ಬೇರೂರಿ ಹೋಗಿದೆ. ದುರ್ದೈವದಿಂದ ಸುಶಿಕ್ಷಿತ ಮುಸಲ್ಮಾನರು ಸಹ ಧರ್ಮವೀರರೆಂದು ತಿಳಿದುಕೊಂಡ ಇಂತಹರ ಕೃತಿಗಳ ಬಗೆಗೆ ಹೆಮ್ಮೆ ತಾಳುತ್ತಾರೆ. ಅದ್ದರಿಂದ ಈ ವಿಷಯದಲ್ಲಿ ಇಸ್ಲಾಂ ಧರ್ಮ ಏನು ಹೇಳುವದು ಪೈಗಂಬರರ ಉದಾಹರಣೆ ಏನು ಎಂಬುದನ್ನು ಸರಿಯಾಗಿ ಅರಿತುಕೊಳ್ಳುವಾ.

ತನ್ನ ಅನುಯಾಯಿಗಳನ್ನು ಕುರಿತು ಕುರಾನವು, ಎರಡನೆಯವರ ದೇವರು ಮೂರ್ತಿಗಳು ಪೂಜಾ ವಸ್ತುಗಳು ಮೊದಲಾದವುಗಳ ಬಗ್ಗೆ ಅವಜ್ಞಾವಚನವಾಡಕೂಡದೆಂದು ಅಸಂದಿಗ್ಧವಾಗಿ ವಿಧಿಸುತ್ತದೆ. (೬-೧೦೭) ಅದ್ದರಿಂದ ಒಬ್ಬರು ಪೂಜಿಸುವ ಮೂರ್ತಿಯನ್ನು ಒಡೆಯುವದಾಗಲೀ ಅಪಮಾನಗೊಳಿಸುವದಾಗಲೀ ಕುರಾನದ ಆಜ್ಞೆಯನ್ನು ಉಲ್ಲಂಘಿಸಿ ನಡೆದಂತೆ.

ಪೈಗಂಬರರು ಹುಟ್ಟುವ ಮೊದಲು ಕೆಲ ವರ್ಷ ಅಬಿಸೀನಿಯಾ ಚಕ್ರವರ್ತಿಯ ವಶವರ್ತಿಯಾದ ಯಮನ ಪ್ರಾಂತದ ಕ್ರಿಶ್ಚನ್ ಅಡಳಿತಗಾರನು ಕಾಬಾ ಎಂಬ ಗುಡಿಯನ್ನು ಮುತ್ತಿ ಅಲ್ಲಿದ್ದ ೩೬೦ ವಿಗ್ರಹಗಳನ್ನು ವಿನಾಶಗೊಳಿಸಬೇಕೆಂದಿದ್ದನು. ಆ ವಿಗ್ರಹಗಳನ್ನು ಮಕ್ಕಾದ ಹಾಗೂ ಸುತ್ತಲಿನ ಪ್ರದೇಶದ ಜನರು ಪೂಜಿಸುತ್ತಿದ್ದರು. ಅಡಳಿತಗಾರನ ಈ ಮುತ್ತಿಗೆಯ ಮಾತು ಕುರಾನದಲ್ಲಿ ಉಲ್ಲಿಖಿತವಾಗಿದೆ. ಇದಕ್ಕೆ ದೇವದ್ರೋಹವೆಂದು ಕರೆಯಲಾಗಿದೆಯಲ್ಲದೆ ಈ ನಾಸ್ತಿಕರಿಗೆ ಒದಗಿದ ಗಂಡಾಂತರಕ್ಕೆ "ದೇವದತ್ತ ಶಿಕ್ಷೆ" ಎಂದು ಹೇಳಲ್ಪಟ್ಟಿದೆ.

ಇನ್ನು ಪೈಗಂಬರರು ಹಾಕಿಕೊಟ್ಟ ಉದಾಹರಣೆಯನ್ನು ನೋಡುವಾ. ದೇವದೂತನಾಗಿ ಹೊರಟ ಮೊದಲ ೧೩ ವರ್ಷಗಳ ಜೀವನ ಕ್ರಮದಲ್ಲಿ ಪೈಗಂಬರರು ಸಾಧ್ಯವಾದಾಗಲೆಲ್ಲ ತಮ್ಮ ನೇಮಾಝನ್ನು ಕಾಬಾದ ಪ್ರಾಕಾರದಲ್ಲಿಯೇ ಮಾಡುತ್ತಿದ್ದರಲ್ಲದೆ ಉಳಿದವರಿಗೂ ಹಾಗೆ ಮಾಡಲು ಉಪದೇಶಿಸಿದರು. ಆದರೆ ಅವರು ಅಲ್ಲಿದ್ದ ಯಾವ ವಿಗ್ರಹಗಳಿಗೂ ಯಾವದೇ ಬಗೆಯ ಅಪಮಾನ ಮಾಡಲಿಲ್ಲವಷ್ಟೇ ಅಲ್ಲ, ತಮ್ಮ ಅನುಯಾಯಿಗಳಿಗೂ ಅಂತಹ ಕೃತಿ ಮಾಡಗೊಡಲಿಲ್ಲ. ಅವರು ಕಾಬಾದ ಮಾತೆತ್ತಿದಾಗೆಲ್ಲ ಗೌರವಪೂರ್ಣ ಭಾಷೆಯನ್ನೇ ಬಳಸುತ್ತಿದ್ದರು. ಜನರನ್ನು ವಿಗ್ರಹಾರಾಧನೆಯಿಂದ ಪರಾವೃತ್ತಗೊಳಿಸುವಾಗ ಸುಮಧುರವಾದ ವಚನಗಳಿಂದಲೇ ಉಪದೇಶ ಹೇಳುತ್ತಿದ್ದರು.

ಅವರು ಸ್ವಸಂತೋಷದಿಂದ ಮಕ್ಕಾದಿಂದ ೬ ವರ್ಷ ನಿರ್ವಾಸಿತರಾಗಿ ಆ ಮೇಲೆ ೧೪೦೦ ನಿಃಶಸ್ತ್ರ ಮುಸಲ್ಮಾನರ ಜೊತೆಗೆ ಮರಳಿ ಆ ಪಟ್ಟಣಕ್ಕೆ ಬಂದರು. ಯಾತ್ರಿಕರು ನಿಃಶಸ್ತ್ರರಾಗಿಯೇ ಇರಬೇಕಾದುದು ರೂಢಿ. ಕಾಬಾ ಯಾತ್ರೆಗೆ ತನಗೂ ತನ್ನ ಜನರಿಗೂ ಅನುಕೂಲತೆ ಮಾಡಿಕೊಡಬೇಕಾಗಿ ಕೇಳಿದರು. ಈ ಬಗ್ಗೆ ಖುರೇಶ್‌ರೊಡನೆ ಮಾತುಕತೆ ನಡೆದವು. ಪರಸ್ಪರದಲ್ಲಿ ಒಂದು ಒಪ್ಪಂದವಾಯ್ತು, ಆ ಪ್ರಕಾರ ಮುಸಲ್ಮಾನರು ತಿರುಗಿ ಹೋಗಬೇಕಾಯ್ತು. ಅದರೆ ಮರುವರ್ಷ ಮತ್ತೆ ಯಾತ್ರೆಗೆ ಬಂದು ಆ ಪಟ್ಟಣದಲ್ಲಿ ೩ ದಿನ ಇರಬಹುದೆಂದು ಗೊತ್ತಾಯ್ತು. ಆ ಪ್ರಕಾರ ಪೈಗಂಬರರು ಮರುವರ್ಷ ಮತ್ತೆ ಮಕ್ಕಾಕ್ಕೆ ಹೋದರು. ಸಂಗಡ ೨೦೦೦ ಮುಸಲ್ಮಾನರಿದ್ದರು. ಮೂರು ದಿನಗಳ ವರೆಗೆ ಪೈಗಂಬರರೂ ಅವರ ಅನುಯಾಯಿಗಳೂ ಆ ಪವಿತ್ರ ನಗರದಲ್ಲಿ ವಾಸಿಸಿದರು. ಯಾತ್ರೆಯ ಎಲ್ಲ ವಿಧಿವಿಧಾನಗಳನ್ನೂ ನೆರವೇರಿಸಿದ್ದಲ್ಲದೆ ಕಾಬಾದ ಸುತ್ತಲೂ ಏಳು ಸಲ ಪ್ರದಕ್ಷಿಣೆಯನ್ನೂ ಹಾಕಿ ಮುಗಿಸಿದರು. ಆಗ ಕಾಬಾದಲ್ಲಿ ಎಲ್ಲ ೩೬೦ ವಿಗ್ರಹಗಳೂ ಅಕ್ಷುಣ್ಣವಾಗಿದ್ದವು. ಮುಸಲ್ಮಾನರು ನಿರಾತಂಕವಾಗಿ ಕಾಬಾದ ಪ್ರದಕ್ಷಿಣೆ ಹಾಕಿದರು. ಮೂರ್ತಿಗಳು ಇವರಿಗೆ ಕಾಣದಹಾಗೆ ಒಳಗಿದ್ದವು. ಆದರೆ ಸಫಾ ಮತ್ತು ಮರ್ವಾ ಎಂಬ ಪವಿತ್ರ ಗುಡ್ಡಗಳಿಗೆ ಸಂಬಂಧಿಸಿದ ಯಾತ್ರಾ ವಿಧಾನಗಳನ್ನು ಪೂರೈಸಬಂದಾಗ ಆ ಬೆಟ್ಟಗಳಲ್ಲಿ ಬೈಲಿಗಿದ್ದ ಮೂರ್ತಿಗಳು ಕಣ್ಣಿಗೆ ಬೀಳಲು ಮುಸಲ್ಮಾನರು ಹಿಂದೆ ಮುಂದೆ ನೋಡತೊಡಗಿದರು. ತತ್‌ಕ್ಷಣ ಕುರಾನದಲ್ಲಿ ಹೊಸದೊಂದು ಪ್ರತೀತಿಪರ ಉಪದೇಶವು ಸೇರಿಸಲ್ಪಟ್ಟಿತು. "ಸಫಾ ಮತ್ತು ಮರ್ವಾಗಳು ದೇವರ ಕುರುಹುಗಳಲ್ಲಿ ಎರಡಾಗಿರುವದರಿಂದ ಅವುಗಳ ಪ್ರದಕ್ಷಿಣೆ ಮಾಡುದವರಿಗೆ ಯಾವ ದೋಷವೂ ತಗಲದು."

ಮಕ್ಕಾ ನಗರವನ್ನು ತಮ್ಮ ಅನುನಾಯಗಳು ಪ್ರವೇಶಿಸುವ ಪೂರ್ವದಲ್ಲಿ ಪೈಗಂಬರರು ಅವರಿಗೆ ಬಖಾರಿಯ ಪವಿತ್ರ ಮಂದಿರವನ್ನು ಪೂಜಿಸುವವರ ಮನನೋಯುವಂತಹ ಒಂದು ಕೃತಿಯನ್ನೂ ಮಾಡತಕ್ಕದ್ದಲ್ಲವೆಂದೂ ಒಂದು ಶಬ್ದವನ್ನೂ ಉಚ್ಚರಿಸತಕ್ಕದ್ದಲ್ಲವೆಂದೂ ಕಟ್ಟಪ್ಪಣೆ ವಿಧಿಸಿದ್ದರು. ಈ ಅಪ್ಪಣೆಯನ್ನು ತುಸು ಕೂಡ ಮೀರಿ ನಡೆಯಲಿಲ್ಲ. ಅವರ ಈ ಅನುಪಮವಾದ ಸಹಿಷ್ಣತೆಯೇ ಹೆರವರ ಮನೋಭಾವನೆಗಳ ಬಗೆಗಿದ್ದ ಅವರ ಅತ್ಯುಚ್ಚ ಆದರಭಾವವೇ ಮುಂದೆ ಕೆಲ ವರ್ಷಗಳಲ್ಲಿ ಮಾತ್ರ ಮಕ್ಕಾ ಪಟ್ಟಣವನ್ನೆಲ್ಲ ಇಸ್ಲಾಂಮಯವಾಗಿ ಮಾಡಿದವು

ಪೈಗಂಬರರು ಆ ವೇಳೆ ಮತ್ತೊಮ್ಮೆ ಮಕ್ಕಾ ಪಟ್ಟಣಕ್ಕೆ ದಯಮಾಡಿಸಿದಾಗ ಅಲ್ಲಿದ್ದ ೩೬೦ ಮೂರ್ತಿಗಳು ಪೈಗಂಬರರ ಅಜ್ಞೆಯ ಮೇರೆಗೆ ಅವುಗಳ ಪೀಠದಿಂದ ತೆಗೆಯಲ್ಪಟ್ಟವು. ಅದರೆ ಈ ಬಗೆಯ ಆಜ್ಞೆಯನ್ನು ಮಕ್ಕಾ ನಗರಿಯೆಲ್ಲ ಇಸ್ಲಾಂ ಧರ್ಮವನ್ನು ಸ್ವೀಕರಿಸಿದಾಗಲೇ ಕೊಡಲಾಯ್ತು. ಈ ಮೂರ್ತಿಗಳನ್ನು ಎತ್ತಿದಾಗ ಅರಬಸ್ಥಾನದಲ್ಲಿ ಮೂರ್ತಿಪೂಜಕನು ಒಬ್ಬನಾದರೂ ಇದ್ದನೋ ಇಲ್ಲವೊ.

ಬನುದೌಸಿ ಎಂಬ ಗುಡ್ಡಗಾಡ ಜನರು 'ಕಟ್ಟಿಗೆಯ ಕೊರಡು' ಒಂದನ್ನು ಪೂಜಿಸುತ್ತಿದ್ದರು. ಅವನ ಮುಖ್ಯಸ್ಥನ ಹೆಸರು ತುಫೈಲ ಎಂಬುದಾಗಿತ್ತು. ಅವನಿಗೆ ಆ ಕೊರಡನ್ನು ಸುಟ್ಟು ಹಾಕಲು ಹೇಳಿದ್ದು ಅದನ್ನು ಪೂಜಿಸುವವರು ಯಾರೂ ಇಲ್ಲದಂತಾದಾಗಲೇ ಆ ಎಲ್ಲ ಜನರೂ ಇಸ್ಲಾಂ ಧರ್ಮವನ್ನು ಸ್ವೀಕರಿಸಿದ ಮೇಲೆಯೇ.

ಆಯೋಪನಿಗೆ ಯಮನದ ಮೂರು ದೊಡ್ಡ ಗುಡ್ಡಗಾಡ ಪಂಗಡಗಳಿಗೆ ಇಸ್ಲಾಂ ಧರ್ಮದ ಉಪದೇಶಕೊಡಲುಅಜ್ಞಾಪಿಸಲಾಗಿತ್ತು. ಹೋಗುವಾಗ ಅವನಿಗೆ ಆ ಜನರು ಪ್ರಾರ್ಥಿಸುತ್ತಿದ್ದ ಮೂರು ಕಟ್ಟಿಗೆಯ ತುಂಡುಗಳನ್ನು ಸುಡಲು ಪೈಗಂಬರರು ಅಪ್ಪಣೆಕೊಟ್ಟಿದ್ದರು. ಆದರೆ ಅವರೆಲ್ಲ ಮೂರ್ತಿಪೂಜೆಯನ್ನು ಬಿಟ್ಟು ಒಬ್ಬ ದೇವರನ್ನು ಪೂಜಿಸಬೇಕೆಂಬ ಇಸ್ಲಾಂ ಧರ್ಮಕ್ಕೆ ಬಂದು ಸೇರಿದ ಮೇಲೆಯೇ ಅವರ ಪೂಜಾವಸ್ತುಗಳನ್ನು ಸುಡಬೇಕೆಂಬುದನ್ನು ಸ್ಪಷ್ಟಪಡಿಸಲಾಗಿತ್ತು.

ಇಂತಹ ಇನ್ನೂ ಅನೇಕ ಉದಾಹರಣೆಗಳನ್ನು ಕೊಡಬಹುದಾಗಿದೆ. ಕಟ್ಟಿಗೆ ಕಲ್ಲುಗಳ ಪೂಜಾ ವಿಗ್ರಹಗಳನ್ನು ನಷ್ಟಗೊಳಿಸಲು ಇಸ್ಲಾಂ ಧರ್ಮವು ಅನುಮತಿಕೊಡುತ್ತದೆ. ಅದರೆ ಅವುಗಳ ಪೂಜಕರ ಅನುಮತಿಯಿಂದ ಹಾಗೂ ಅವುಗಳನ್ನು ಪೂಜಿಸುವವರು ಒಬ್ಬರೂ ಇಲ್ಲವೆಂದಾಗ ಮಾತ್ರ ಹಾಗೆ ಮಾಡಬಹುದೆಂದಿದೆ. ಅರೇಬಿಯಾದ ಆಡಳಿತಗಾರರೆಂಬ ಅಧಿಕಾರದಿಂದಲೂ ಪೈಗಂಬರರು ಮತ್ತೆ ಮತ್ತೆ ಮುಸಲ್ಮಾನರನ್ನು ಕುರಿತು ಮದೀನಾ ಸರಕಾರದೊಡನೆ ಒಪ್ಪಂದಕ್ಕೆ ಬಂದ ಮುಸಲ್ಮಾನೇತರರ ಪೂಜಾ ಸ್ಥಾನಗಳನ್ನು ರಕ್ಷಿಸುವದು ಮುಸಲ್ಮಾನರ ಅದ್ಯಕರ್ತವ್ಯವೆಂದು ವಿಧಿಸಿದ್ದಾರೆ. ಆ ಸ್ಥಳಗಳೆಲ್ಲ ಮೂರ್ತಿಮಯವಾಗಿದ್ದರೂ ಅವಕ್ಕೆ ಕೈಹಚ್ಚತಕ್ಕದ್ದಲ್ಲವೆಂದೂ ರಾಜಾಜ್ಞೆಯಿತ್ತು.

ಮತ್ತೆ ನಾವು ಒತ್ತಿ ಹೇಳುತ್ತೇವೆ. ಇಸ್ಲಾಂ ಧರ್ಮವು ಒಬ್ಬನೇ ನಿರಾಕಾರ ಈಶ್ವರನನ್ನು ನಂಬುವದು. ಹಿಂದುಸ್ತಾನದ ಹಾಗೂ ಇತರ ದೇಶಗಳ ಧರ್ಮಗಳು ಬೋಧಿಸುವ ಹಾಗೆಯೇ ಇಸ್ಲಾಂ ಧರ್ಮವಾದರೂ ಮೂರ್ತಿ ಪೂಜೆಯನ್ನು ನಿರಾಕರಿಸುತ್ತದೆ. ಹೀಗಿದ್ದರೂ ಮೂರ್ತಿಗಳನ್ನು ಅಪಮಾನಗೊಳಿಸುವದು, ಒಡೆಯುವುದಂತೂ ದೂರವೇ ಉಳಿಯಿತು, ಕುರಾನದ ಅಜ್ಞೆಯ ವಿರುದ್ಧವಾಗಿದೆ; ಪೈಗಂಬರರು ಹಾಕಿಕೊಟ್ಟ ಹಾದಿಗೆ ಹೊರತಾಗಿದೆ; ಮತ್ತು ಆ ಅಮೋಘವಾದ ಧರ್ಮಕ್ಕೆ ಕಲಂಕಪ್ರಾಯವಾಗಿದೆ. ಈ ಬಗೆಯ ವಿಗ್ರಹ ವಿನಾಶವನ್ನೂ ಅಪಮಾನವನ್ನೂ ಎಸಗಿದವನು ಉದ್ಧತ ರಾಜನಾಗಿದ್ದರೂ ಸರಿಯೇ ಅಥವಾ ಅಧುನಿಕ ಸನ್ಮಾರ್ಗಚ್ಯುತ ಧರ್ಮಾಂಧನಾಗಿದ್ದರೂ ಸರಿಯೇ.

ಈ ವರೆಗೆ ಇಸ್ಲಾಂ ಧರ್ಮದ ರಹಸ್ಯವನ್ನು ವರ್ಣಿಸಿ ಹೇಳಿಯಾಯ್ತು. ಇನ್ನು ಸೂಫಿಗಳ ಬಗ್ಗೆ ಅವರು ಒಂದು ಹೆಜ್ಜೆ ಮುಂದೆಯೇ ಹೋಗಿದ್ದಾರೆ.

ದಾರಾನು ಒಮ್ಮೆ "ಲಾ ಇಲಾಹ ಇಲ್ ಅಲ್ಲಾಹ" ಎಂಬುದರ ನಿಜಾರ್ಥವೇನು ಎಂಬುದಾಗಿ ವಿಶ್ವಮಾನ್ಯ ಸಾಧುಗಳಾದ ಮುಹಿಬುಲ್ಲಾ ಇಲಾಹಾಬಾದಿ ಎಂಬವರನ್ನು ಕೇಳಿದನು. ಅಗ ಅವರು 'ದೇವರಲ್ಲದೆ ಪೂಜಾರ್ಹ ವಸ್ತುವೇ ಇಲ್ಲ ಅಂದರೆ ಪೂಜಾ ವಸ್ತುಗಳೆಲ್ಲ ದೇವರೇ' ಎಂಬುದಾಗಿ ಅದರ ಅರ್ಥ ಎಂದು ಹೇಳಿದರು.

ದಾರಾನು ಮತ್ತೆ ಪ್ರಶ್ನೆ ಹಾಕಿ, ಇಸ್ಲಾಂ ಧರ್ಮದ ಮೊದಲಿನ ಕಾಲದಲ್ಲಿ ಅರೇಬಿಯಾದಲ್ಲಿ ಪೂಜಿಸಲ್ಪಡುತ್ತಿದ್ದ ಪ್ರಸಿದ್ಧ ಮೂರು ದೇವತೆಗಳಾದ ಲಾತ, ಉಝ್ಝಾ ಮತ್ತು ಮನ್ನಾತ ಎಂಬವು ದೇವತೆಗಳೇ ಎಂದು ಕೇಳಲು ಮುಹಿಬುಲ್ಲಾ ಅವರು ಹೌದೆಂದು ಉತ್ತರಿಸಿ ಅವರವರ ಅಂತಃಪ್ರೇರಣೆ ಮತ್ತು ಮನೋಭಾವನೆಗಳ ಮೇಲೆ ಈ ವಿಷಯಗಳು ಅವಲಂಭಿಸಿವೆ ಎಂಬ ಮಾತನ್ನು ತಿಳಿಸಿ ಹೇಳಿದರು. ಇದೇ ಬಗೆಯಾಗಿ 'ಮುಶಹದೇ ನಾಝ್' ಅಥವಾ 'ಗುಲ್‌ಶನೆರಾಝ್' ಎಂಬ ಸೂಫಿ ಪುಸ್ತಕ ವಿಖ್ಯಾತ ಲೇಖಕರನ್ನು ಇಷ್ಟ ವಿಗ್ರಹದ ಬಗ್ಗೆ ಮತ್ತೂ ಯಜ್ಞೋಪವೀತ ಪವಿತ್ರ ಸೂತ್ರದ ಬಗ್ಗೆ ಕೇಳಲಾಗಿ ಅವರು ಹೀಗೆ ಉತ್ತರಿಸಿದರು

"ಇಷ್ಟ ಮೂರ್ತಿಯು ಪ್ರೀತಿಯ ಪ್ರತೀಕ ಮತ್ತು ದೇವತಾ ರೂಪ.

"ಯಜ್ಞೋಪವೀತದ ಸೂತ್ರ ಪರಿಧಾನವು ದೇವರ ಸೇವೆಗೆ ನಡಕಟ್ಟಿದಂತೆ [illegible]

"ಕಣ್ಣಿಗೆ ಕಾಣುವ ವಸ್ತುಗಳೆಲ್ಲ ಆ ಏಕರೂಪನ ಪ್ರತಿಬಿಂಬಗಳು

"ಇಷ್ಟ ಮೂರ್ತಿಯೂ ಅವುಗಳಲ್ಲೊಂದು

"ಇಸ್ಲಾಂ ಧರ್ಮವು ಮೂರ್ತಿಪೂಜಕನನ್ನು ಕಾಫಿರನೆಂದು ಕರೆಯುವದು

"ಯಾಕಂದರೆ ಮುಸಲ್ಮಾನನಿಗೆ ಮೂರ್ತಿಯಲ್ಲಿ ಕೇವಲ ಅದರ ಬಾಹ್ಯರೂಪ ಕಂಡಿತಲ್ಲದೆ ಇನ್ನೇನೂ ಕಾಣಲಿಲ್ಲ [illegible]

"ಮೂರ್ತಿಯಲ್ಲಿ ಅವಿರ್ಭಾವಗೊಂಡ ಸತ್ಯಾಂಶನಾದ ದೇವನನ್ನು ಅರಿಯದವನು ಮುಸಲ್ಮಾನನೆನ್ನಿಸಿಕೊಳ್ಳಲು ಯೋಗ್ಯವೇ ಅಲ್ಲ.

ಹೊಸದಿಲ್ಲಿ — ಸುಂದರಲಾಲ
೩-೧-೪೮

ಇದಕ್ಕೆ ಕಾಲ ಮೀರಿತೆ ?

ಸಿಂದರಿ (ಬಿಹಾರ)ಯಲ್ಲಿ ಸ್ಥಾಪಿತವಾಗಲಿರುವ ರಾಸಾಯನಿಕ ಗೊಬ್ಬರದ ಕಾರಖಾನೆ ಬೇಗೆ ಕಟ್ಟಲ್ಪಡುವದೆಂದು ಹೇಳಲಾಗುತ್ತದೆ. ಈ ವರ್ಷದ ಪ್ರಾರಂಭದಲ್ಲಿಯೇ ಕಟ್ಟೋಣದ ಕೆಲಸ ಪ್ರಾರಂಭವಾಗುವದಿದೆ. ಗುಜರಾಥದಲ್ಲಿಯ ಪ್ರಯೋಗಗಳಲ್ಲಿ ಯೋಗ್ಯ ರೀತಿಯಿಂದ ಭೂಮಿಯ ಪೃಥಕ್ಕರಣ ಮಾಡುವ ವ್ಯಾಪಕವಾದ ಸಂಸ್ಥೆಯನ್ನು ಸಂಸ್ಥಾಪಿಸದೆ ಕೃತ್ರಿಮ ರಾಸಾಯನಿಕ ಗೊಬ್ಬರವನ್ನು ಪಯೋಗಿಸಿದರೆ ಆ ಭೂಮಿಯ ಸತ್ವವನ್ನು ಕಾಯ್ದುಕೊಳ್ಳುವುದು ಗಂಡಾಂತರಪ್ರದವಾಗುವದೆಂದು ಈ ಮೊದಲೆ ಸಿದ್ಧವಾಗಿರುವಾಗ ಈ ಅನುಪಯುಕ್ತ ಯೋಜನೆಯನ್ನು ಮುಂದರಿಸಿಕೊಂಡು ಹೋಗುವದು ಜಾಣತನದ್ದೇ? ನಮ್ಮ ಹೆಜ್ಜೆಯನ್ನು ಈಗಳೆ ಹಿಂದಿಟ್ಟು ಆಹಾರ ಪದಾರ್ಥಗಳನ್ನು ಹೆಚ್ಚಾಗಿ ಬೆಳೆವುದಕ್ಕಾಗಿ ಹಿಂದುಸ್ತಾನ ಸರಕಾರದವರು ನೀರಾವರಿ ಮೊದಲಾದ ಅನೇಕ ಯೋಜನೆಗಳಲ್ಲಿ ಆ ಸಾಧನ ಸಾಮುಗ್ರಿಗಳ ಉಪಯೋಗ ಮಾಡಿಕೊಳ್ಳುವುದು ಅತ್ಯಂತ ಜಾಣತನದ್ದು. ಲಾಭದ ಬಗ್ಗೆ ಸಂಶಯವಿರುವ ಯೋಜನೆಯಲ್ಲಿ ೨೦ ಕೋಟಿ ರೂಪಾಯಿಗಳನ್ನು ಹಾಕುವುದಕ್ಕಿಂತ, ಸ್ವಲ್ಪ ಹಾನಿಯಾದರೂ ಚಿಂತೆಯಿಲ್ಲ ಈಗಲೆ ನಮ್ಮ ಮನಸ್ಸನ್ನು ತಿರುಗಿಸಿ ನಿಶ್ಚಿತ ಉದ್ದೇಶವನ್ನು ಸಾಧಿಸುವಂಥ ಯೋಜನೆಗಳನ್ನು ಕಾರ್ಯರೂಪದಲ್ಲಿ ತರಲು ಪ್ರವರ್ತಿಸುವಾ. — ಜೆ. ಸಿ. ಕುಮಾರಪ್ಪ

ಆಟ

ಹಿಂದಿನ ವೈಸರಾಯರೂ ಸಧ್ಯಕ್ಕೆ ಅಬರ್ಡೀನ್ ವಿಶ್ವವಿದ್ಯಾಲಯದ ಕುಲಪತಿಗಳೂ ಆಗಿರುವ ಲಾರ್ಡ ವೇವೆಲ್ಲರು ಕ್ರಿಕೆಟಿನ ಸಂಬಂಧದಲ್ಲಿ ಈ ರೀತಿ ಅಭಿಪ್ರಾಯಪಟ್ಟಿರುವರು.

"ಅಳತೆ ಮೀರಿ, ಮನುಷ್ಯನು ವೇಳೆ ಮತ್ತು ಪರಿಶ್ರಮದ ಜಾಣತನವನ್ನು ಉಪಯೋಗಿಸಬೇಕಾದ ಆಟವಿದು; ಇಂಗ್ಲಿಶ್ ಯುವಕರು ಮತ್ತು ಹಿರಿಯರು ಈ ಆಟಕ್ಕಾಗಿ ಒಂದೇ ಸವನೆ ಅನೇಕ ದಿನಗಳನ್ನು ಕಳೆಯುವದು, ತಿಂಗಳುಗಟ್ಲೆ ಇದೇ ಆಟದಲ್ಲಿ ಮಗ್ನವಾಗುವದು ಅವಿವೇಕತನದ ಪರಮಾವಧಿ"

ಇದೇನು ಮಾತಾಡುತಿರುವರೆಂಬುದು ಲಾರ್ಡ ವೇವೆಲ್ಲರಿಗೆ ಗೊತ್ತಿದೆಯೆಂದು ನಾವು ತಿಳಿಯುತ್ತೇವೆ. ಜಗತ್ತಿನಲ್ಲಿಯ ಶ್ರೀಮಂತ ರಾಷ್ಟ್ರಗಳಲ್ಲಿ ಒಂದಾದ ಇಂಗ್ಲಂಡಿನಲ್ಲಿಯ ಕ್ರಿಕೆಟ ಪಂದ್ಯವು ಇಷ್ಟೊಂದು ಕಾಲ ಮತ್ತು ಹಣದ ಅಪವ್ಯಯದ್ದಾಗಿರುವಾಗ ಹಿಂದುಸ್ತಾನದಂಥ ಬಡ ರಾಷ್ಟ್ರವು ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ತನ್ನ ಕ್ರಿಕೆಟ ಪಟುಗಳನ್ನು ಕಳಿಸಿ ಭಾರತೀಯರ ನೈಪುಣ್ಯವನ್ನು ಪ್ರದರ್ಶಿಸಬಯಸುವದಕ್ಕೆ ಏನೆನ್ನಬೇಕೋ ತಿಳಿಯದು! ಹಿಂದಿನ ಅರಸರು ಹಾಕಿಕೊಟ್ಟ ಅನೇಕ ರೂಢಿ ಸಂಪ್ರದಾಯಗಳನ್ನು ನಾವು ಅಧುನಿಕ ನಾಗರಿಕತೆಯ ಪ್ರತೀಕವೆಂದು ಭಾವಿಸಿರುವೆವು; ಆದರೆ ಅಂಥ ಅನೇಕ ರೂಢಿ ಸಂಪ್ರದಾಯಗಳ ಬಗ್ಗೆ ನಾವು ಪುನರ್ವಿಚಾರಮಾಡುವ ಸಮಯ ಈಗ ಬಂದಿದೆಯೆಂದು ನಮಗೆ ಎನಿಸುತ್ತದೆ. ವೃತ್ತಪತ್ರಗಳ ಕಾಗದದ ಕೊರತೆ ವಿಪರೀತವಾಗಿರುವ ಈ ಕಾಲದಲ್ಲಿ ಈ ಪಂದ್ಯಾಟಗಳ ಸುದ್ದಿಗಳಿಗಾಗಿ ಬೇಕಾದಷ್ಟು ಕಾಗದಗಳನ್ನು ಬಳಸಲಾಗುತ್ತದೆ. ಮಹತ್ವದ ಪತ್ರಿಕೆಗಳಲ್ಲಿ ಕನಿಷ್ಠ ಒಂದು ಪುಟವನ್ನಾದರೂ ಕ್ರಿಕೆಟ, ಶರ್ಯತ್ತು, ಸಿನೇಮಾ ಜೂಜಾಟ ಮೊದಲಾದವುಗಳಿಗಾಗಿ ಮೀಸಲಾಗಿಡಲಾಗುತ್ತದೆ. ಮನೋರಂಜನೆಗಳಲ್ಲಿಯೂ ನಮ್ಮ ಬೇಡಿಕೆಗಳನ್ನು ಹೊಸದಾಗಿ ಮಾರ್ಪಡಿಸಿಕೊಳ್ಳಬೇಕಾಗಿದೆ. — ಜೆ. ಸಿ. ಕುಮಾರಪ್ಪ

ಮಹತ್ವದ ಸಲಹೆ

ಹಿಂದುಸ್ತಾನ ಸರಕಾರದ ಎಣ್ಣೆ ಕಾಳುಗಳ ಸಮಿತಿಯ ಹಳ್ಳಿ ಎಣ್ಣೆ ಉದ್ಯೋಗದ ಮತ್ತು ಎಣ್ಣೆ ಕಾಳು ನಾರಿಸುವ ಉಪಸಮಿತಿಯ ಸಭೆ ನಾಗಪುರದಲ್ಲಿ ಇತ್ತೀಚೆ ಸರ್ ದಾತಾರಸಿಂಗರ ಅಧ್ಯಕ್ಷತೆಯಲ್ಲಿ ಸೇರಿದ್ದಿತು. ಆಹಾರ ಪದಾರ್ಥಗಳಿಗಾಗಿ ಭೂಮಿಯನ್ನು ಬಿಟ್ಟುಕೊಡುವದಕ್ಕಾಗಿ ಗಿರಣಿಗಳು ಸಾಬೂಣ ಮಾಡುವದಕ್ಕಾಗಿ ತಿನ್ನುವ ಎಣ್ಣೆಯ ಹೊರತು ಉಳಿದ ಎಣ್ಣೆಯನ್ನು ಪಯೋಗಿಸಬೇಕೆಂದು ಆ ಸಮಿತಿಯು ಸೂಚಿಸಿದೆ.

ವರ್‍ಹಾಡದಲ್ಲಿಯೇ ಸುಮಾರು ಐದು ಲಕ್ಷ ಬೇವಿನಗಿಡಗಳು ರಾಜಬೀದಿಯ ಎರಡೂ ಮಗ್ಗಲಿಗೂ ಇರುವವು. ಅದರ ಬೀಜಗಳನ್ನೆಲ್ಲ ಹಿಂಡಿ ಸುಮಾರು ೩ ಲಕ್ಷ ಟನ್ ಎಣ್ಣೆಯನ್ನು ಮತ್ತು ೩ ಲಕ್ಷ ಮಣ ಹಿಂಡಿಯನ್ನು ತೆಗೆಯಬಹುದೆಂತ್ತು ಈ ಸಂಬಂಧದಲ್ಲಿ ಉಲ್ಲೇಖಿಸಬಹುದಾಗಿದೆ. ಈ ಹಿಂಡಿಯನ್ನು ಗೊಬ್ಬರದಂತೆ ಉಪಯೋಗಿಸಬಹುದಾಗಿದೆ. ಇದರಲ್ಲಿ ಬೇಕಾದಷ್ಟು ಅನುಕೂಲತೆಗಳು ಉಂಟೆಂಬುದರ ದ್ಯೋತಕವಿದು.

ಸಾಬೂಣಗಳಿಗೆ ಈ ಎಣ್ಣೆಯನ್ನು ಉಪಯೋಗಿಸಲಾಗುವದಲ್ಲದೆ ಈ ಎಣ್ಣೆಯನ್ನು ವರ್ಣ ಮತ್ತು ವಾಸರಹಿತ ಮಾಡಿದಾದರೆ ತಲೆಗೆ ಹಚ್ಚಿಕೊಳ್ಳುವ ಮೊದಲಾದ ಎಣ್ಣೆಗಳನ್ನೂ ಮಾಡಿ ವ್ಯಾಪಾರೀ ದೃಷ್ಟಿಯಿಂದ ಅವುಗಳ ಉಪಯೋಗ ಮಾಡಿಕೊಳ್ಳಬಹುದಾಗಿದೆ. 'ನಕಲಿ ತುಪ್ಪ' ಇಲ್ಲವೆ ವನಸ್ಪತಿಯನ್ನು ಮಾಡುವಲ್ಲಿ ಇಂದು ನಿಂತವಾಗಿರುವ ಎಣ್ಣೆ ಗಿರಣಿಗಳಿಗೆ ಇದೊಂದು ಸ್ವೀಕಾರಾರ್ಹ ಉದ್ಯೋಗವನ್ನು ಕಲ್ಪಿಸಿಕೊಟ್ಟಂತೆಯೂ ಆಗುವದು. — ಜೆ. ಸಿ. ಕುಮಾರಪ್ಪ

ಒಂದು ಸೂಚನೆ

ಒಕ್ಕಲತನದಲ್ಲಿ ಪ್ರಯೋಗ ಮಾಡುತಿರುವ ಹಳ್ಳಿಯ ಕಾರ್ಯಕರ್ತನೊಬ್ಬನು ಗೊಬ್ಬರದ ಉಪಯೋಗವನ್ನು ಹೆಚ್ಚು ಚೆನ್ನಾಗಿ ಮಾಡಿಕೊಳ್ಳುವುದಕ್ಕೆ ಸೂಚನೆಯೊಂದನ್ನು ಮಾಡಿದ್ದಾನೆ. ಗೊಬ್ಬರವನ್ನು ಹೊಲದ ತುಂಬೆಲ್ಲ [illegible] ಎಳೆಯುವ ಬೀಜ ಬಿತ್ತುವ [illegible] ಗುಂಪಿನ ಅದನ್ನು ಸುರಿವಿದ್ದಾದರೆ ಅದರ ಉಪಯುಕ್ತತೆ ಹೆಚ್ಚುವದು. ಬೆಳೆಯ ಬೇರಿನ ಸಮೀಪದಲ್ಲಿಯೇ ಗೊಬ್ಬರ ಇರುವದರಿಂದ ಅದು ಹೆಚ್ಚು ಹುಲುಸಾಗಿ ಬೆಳೆಯುವದು ಎಂಬುದೆ ಅವನ ಆಶಯವೆ. ನಮ್ಮ ದೇಶದಲ್ಲಿ ಗೊಬ್ಬರದ ಸಮಸ್ಯೆ ಬಹಳ ಭೀಕರವಾಗಿದ್ದುದರಿಂದ ನಮ್ಮ ಸಾಧನ ಸಂಪತ್ತನ್ನೆಲ್ಲ ಜಾಣತನದಿಂದ ಉಪಯೋಗಿಸಿ ಒಕ್ಕಲಿದ್ದಷ್ಟು ಹೆಚ್ಚು ಉತ್ಪತ್ತಿಯನ್ನು ಸಾಧಿಸುವದು ಅವಶ್ಯವಾಗಿದೆ. ಅದರಿಂದ ಈ ಸೂಚನೆಯತ್ತ ಎಲ್ಲ ಒಕ್ಕಲಿಗರ ಲಕ್ಷ್ಯವನ್ನು ಸೆಳೆಯಬಯಸುತ್ತೇನೆ. — ಜೆ. ಸಿ. ಕುಮಾರಪ್ಪ

ಗಾಂಧೀಜಿಯ ಪ್ರಾರ್ಥನೋತ್ತರ ಭಾಷಣಗಳು

[illegible]

೨೩—೦—೪೭

ಮರಣವೆಂಬ [illegible]

[illegible] ಗಾಂಧೀಜಿಯವರ ಪ್ರಾರ್ಥನಾ [illegible] ... ಪ್ರಾರ್ಥನಾ ಸಭೆಗಳಿಗೆ ನನ್ನ ಸ್ವರ [illegible] ... ನನಗೆ [illegible] ಪ್ರಾರ್ಥನಾ ಸಭೆಗಾಗಿ ನನ್ನ ಸಂದೇಶವನ್ನು ಹೇಳಿ ಬರೆಯಿಸಿದ್ದೇನೆ. [illegible] ಹೇಳಲಾರೆ.

ಇನ್ನೊಬ್ಬರು ಏನು ಮಾಡುವರೆಂಬ ಬಗ್ಗೆ ವಿಚಾರಣೆ ತಲೆ ಕೆಡಿಸಿಕೊಳ್ಳುವದು ಬೇಡ. ಪ್ರತಿಯೊಬ್ಬರೂ ತಮ್ಮ ದೃಷ್ಟಿಯನ್ನು ಅಂತರಂಗಕ್ಕೆ [illegible] ತಮ್ಮ ತಮ್ಮ ಅಂತಃಕರಣವನ್ನು ಶುದ್ಧೀಕರಿಸಿಕೊಳ್ಳಬೇಕು. ಜನರು ತಮ್ಮ ಅಂತಃಕರಣ ಶುದ್ಧಿಯನ್ನು ಸಾಧಿಸಿ [illegible] ತಮ್ಮನ್ನು ತಾವು ಎತ್ತರಿಸಿಕೊಳ್ಳುವರಲ್ಲದೆ ಹಿಂದುಸ್ತಾನದ ಕಲ್ಯಾಣವನ್ನೂ ಸಾಧಿಸುವರು. ಮತ್ತು ಈ ಮೂಲಕ ನನ್ನ ಉಪವಾಸದ ಅವಧಿಯನ್ನೂ ತಗ್ಗಿಸುವರು. ನನಗಾಗಿ ಯಾರೂ ಕಾತರಗೊಳ್ಳಬಾರದು. ಎಲ್ಲರೂ ತಮ್ಮ [illegible] ತಾವು ಸಾಧಿಸಿಕೊಂಡು ದೇಶದ [illegible] ಹೇಗೆ [illegible] ಬಗ್ಗೆ [illegible] ಮಾಡಬೇಕು. ಎಲ್ಲರೂ ಒಂದು ದಿನ ಸಾಯಲೇಬೇಕು. ಮರಣವನ್ನು ಯಾರೂ ತಪ್ಪಿಸಿಕೊಳ್ಳಲಾರರು. ಎಂತ ಮೇಲೆ ಮರಣವೆಂದರೆ ಹೆದರುವದೇಕೆ? ಮರಣವು ಸುಖ [illegible] ನಿರ್ಮೋಚನಗೊಳಿಸುವ [illegible] ಮಿತ್ರನಾಗಿದೆ."

ಚುಚ್ಚಿ ಚುಚ್ಚಿ ಕೊಲ್ಲುವದು

ಹೇಳಿ ಬರೆಯಿಸಿದ ಸಂದೇಶದಲ್ಲಿ ಗಾಂಧೀಜಿ ಹೀಗೆ ಹೇಳಿದರು:

ನಿನ್ನಿನ ಪ್ರಾರ್ಥನಾ ಭಾಷಣವಾದ [illegible] ನಾನು [illegible] ಪತ್ರಕಾರರು ನನ್ನನ್ನು [illegible] ತಮ್ಮ ಕೆಲವು ಸಂದೇಹಗಳನ್ನು [illegible] ಕೊಳ್ಳಬೇಕಾಗಿದೆಯೆಂದು ತಿಳಿಸಿದ್ದರು. [illegible] ಅವರನ್ನು ಕಂಡು ವಿಚಾರವಿನಿಮಯ ಮಾಡಲು ನನ್ನ ವೈದ್ಯರು ಒಪ್ಪಲಿಲ್ಲ. ಆದುದರಿಂದ ನಾನು [illegible] ಬರೆದು ಅವರಿಗೆ [illegible] ಹಾಗೂ ಅವರು ತಾವು ಕೇಳಬೇಕೆಂದ ಪ್ರಶ್ನೆಗಳನ್ನೆಲ್ಲ ಬರೆದು [illegible] ಕಳಿಸಬೇಕೆಂದು ತಿಳಿಸಿದೆ. ಅವರು ಹಾಗೆ ಮಾಡಿದರು. ಇದು ಮೊದಲನೆಯ ಪ್ರಶ್ನೆ-

"ಹಿಂದೀ ಒಕ್ಕೂಟದ ಯಾವ ಭಾಗದಲ್ಲಿಯೂ [illegible] ನಡೆದಿಲ್ಲವಾದರೂ ನೀವೇಕೆ ಈ ಉಪವಾಸವನ್ನು ಕೈಕೊಂಡಿರಿ?"

"ಮುಸಲ್ಮಾನರ ಮನೆಗಳನ್ನು ಜನಜಂಗುಳಿಯು ಸಂಘಟಿತವಾಗಿ ಬಲಾತ್ಕಾರದಿಂದ ಆಕ್ರಮಿಸಿ [illegible] ಘಟನೆಯಲ್ಲವೋ? ಈ ಘಟನೆಯನ್ನು ಹತ್ತಿಕ್ಕಲು ಜನಗಳನ್ನು ಚದುರಿಸಲು ಪೋಲೀಸರು [illegible] ಉಪಯೋಗಿಸಬೇಕಾಯ್ತು [illegible] ತಲೆಬಿಟ್ಟು ಎತ್ತರದ ಮೇಲೆಯೇ [illegible] ಗುಂಡು ಹಾರಿಸಬೇಕಾಯ್ತು. ಕೊನೆಯ ಮುಸಲ್ಮಾನನು ದಿಲ್ಲಿಯಿಂದ ಹೊರಹೋಗಬೇಕಾಗುವವರೆಗೆ [illegible] ನಾನು [illegible] ಜನರು [illegible] ಹೊರಹೊರಗೆ [illegible] ಚುಚ್ಚಿ ಚುಚ್ಚಿ ಕೊಲ್ಲುವ [illegible] ನಾನು ಹೇಳಬಲ್ಲೆ.

ಸರದಾರರು

ಎರಡನೆಯ ಪ್ರಶ್ನೆ ಹೀಗಿದೆ: "ತಮ್ಮ [illegible] ಭಾಷಣದ [illegible] ಹೇಳಿದ [illegible] [illegible] ಯಾವ ಉತ್ತರವನ್ನು ಕೊಡಬೇಕೆಂದು ಹೇಳಿದಿರಿ. ಗೃಹಖಾತೆಯ ಅಧಿಕಾರಿಯಾದ ಸರದಾರರು ಮುಸಲ್ಮಾನ ಸ್ನೇಹಿಗಳೆಂದು ಅವರು ದೂರಿದ್ದರು. ಸರದಾರ ಪಟೇಲರು ಮೊದಲಿನ ಹಾಗೆ "ಭಾಷು ಮನುಷ್ಯ" ರಾಗಿಲ್ಲವೆಂದೂ ನೀವು ಹೇಳಿದ್ದಿರಿ. ಇವನ್ನೆಲ್ಲ ಗಮನಿಸಿದರೆ ನಿಮ್ಮ ಉಪವಾಸವು ಸರದಾರರ ಹೃದಯ ಪರಿವರ್ತನೆಗಾಗಿ ಎಂದೂ ಹಾಗೂ ಈ ಮೂಲಕ ನೀವು ಮಂತ್ರಿಮಂಡಲದ ಗೃಹವಿಭಾಗದ ಧೋರಣೆಯನ್ನು ನಿಷೇಧಿಸುವಿರಿ ಎಂದೂ ಕಂಡು ಬರುವಂತಿದೆ. ಈ ವಿಷಯವನ್ನು ನೀವು ತಿಳಿಸಿ ಹೇಳಿದರೆ ಚನ್ನಾಗಿರುವದು."

"ಈ ಬಗ್ಗೆ ಒಂದು ಅರ್ಥವನ್ನಿಲ್ಲದೆ ನಾನಾರ್ಥವನ್ನು ಒಪ್ಪದೆ ಕೊಟ್ಟ ನನ್ನ ಉತ್ತರ ಸಮರ್ಪಕವಾಗಿತ್ತು. ನೀವು ಸೂಚಿಸುವ ಅಥವಾ ಧ್ವನಿತಗೊಳಿಸುವ ಅರ್ಥ ನನ್ನ ಮಾನಸ್ಸಿಗೆಂದೂ ಹೊಳೆದಿಲ್ಲ. ನನ್ನ ಹೇಳಿಕೆಯಿಂದ ಈ ಬಗೆಯ ಧ್ವನಿತಾರ್ಥ ಹೊರಡುವದೆಂದು ನನಗೆ ತೋರಿದ್ದರೆ ಅದನ್ನು ಅಗಲೇ ಊಹಿಸಿ ಆ ಸಂದೇಹವನ್ನು ನಿವಾರಿಸಿ ಬಿಡುತ್ತಿದ್ದೆ. ಸರದಾರರು ಮುಸಲ್ಮಾನ ದ್ವೇಷಿಗಳೆಂದು ಅನೇಕ ಮುಸಲ್ಮಾನ ಮಿತ್ರರು ದೂರಿದ್ದುಂಟು. ನಾನಾವದೇ ಬಗೆಯ ಉತ್ತರ ಕೊಡದೆ ನುಂಗಿದ ನೋವಿನಿಂದಲೇ ಇದೆಲ್ಲವನ್ನೂ ನಾನು ಕೇಳಿಕೊಂಡಿದ್ದೇನೆ. ನನ್ನ ಉಪವಾಸವು ನಾನು ಹಾಕಿಕೊಂಡ ನಿರ್ಬಂಧದಿಂದ ನನ್ನನ್ನು ವಿಮೋಚನೆಗೊಳಿಸಿದೆ ಎಂದೇ ಆ ಟೀಕಾಕಾರರಿಗೆ, ನನ್ನನ್ನೂ ಪಂಡಿತ ಜವಾಹರಲಾಲರನ್ನೂ ಆಕಾಶಕ್ಕೆ ಎತ್ತಿ ಸರದಾರರನ್ನು ಹೀಗೆ ಪ್ರಖರ ನಿಂದೆಗೆ ಗುರಿ ಮಾಡುವದು ತಪ್ಪೆಂದು ನಾನು ಹೇಳಿದ್ದೇನೆ. ಈ ಬಗೆಯ ಉಗ್ರ ನಿಂದೆಯು ಅವರಿಗೆ ಒಳಿತು ಮಾಡಲಾರದು. ಸರದಾರರ ನುಡಿಯು ಒರಟಾಗಿದ್ದು ಎಷ್ಟೋ ಸಲ ವಿನಾಕಾರಣ ಇನ್ನೊಬ್ಬರಿಗೆ ನೋವು ಕೊಡುತ್ತದೆ. ಆದರೆ ಅವರ ಹೃದಯವು ಎಲ್ಲರನ್ನೂ ಎಲ್ಲವನ್ನೂ ಒಳಗೊಳ್ಳುವಷ್ಟು ವಿಶಾಲವಾಗಿದೆ. ಅದ್ದರಿಂದ ನನ್ನ ಜೀವನಾದ್ಯಂತ ಜೊತೆಗಿದ್ದ ನಂಬಿಗೆಯ ಸಂಗಾತಿಗೆ ಅಂಟಿದ ಕಲಂಕವನ್ನು ಅಳಿಸುವದೇ ನನ್ನ ಹೇಳಿಕೆಯ ಆಶಯವಾಗಿತ್ತು. ಸರದಾರರು ನನ್ನ "ಭಾಷು ಮನುಷ್ಯ"ರೆಂದು ನಾನು ಪ್ರೀತಿಯಿಂದ ಹೇಳುವದುಂಟು. ನನ್ನ ಹೇಳಿಕೆಯಿಂದ [illegible] ಸರದಾರರನ್ನು ಮೊದಲಿನಂತೆ ನಾನು 'ಭಾಷು ಮನುಷ್ಯ'ನಂತೆಯೇ ಕಾಣುವೆನೆಂದು ತಿಳಿದಾರೆಂದು ಬಗೆದು, ಅವರು ಯಾರೊಬ್ಬರ ಭಾಷು ಮನುಷ್ಯರಾಗದಷ್ಟು ಸ್ವಸಮರ್ಥರೆಂಬುದಾಗಿ ಹೇಳಿ ಆ ಸ್ತುತಿ ವಾಕ್ಯವನ್ನು ತುಸು ಹಿಡಿತಕ್ಕೆ ತಂದೆನಷ್ಟೇ. ಅವರು ನನ್ನ 'ಭಾಷು ಮನುಷ್ಯ'ರಾಗಿದ್ದಾಗ ಹಾಗೆಂದು ಕರೆದರೆ ಅವರು ಎಂದೂ ಆಕ್ಷೇಪಿಸುತ್ತಿದ್ದಿಲ್ಲ. ಯಾಕೆಂದರೆ ನಾನು ಹೇಳುವುದೆಲ್ಲ ಅಗ ಅವರಿಗೆ ಸ್ವಾಭಾವಿಕವಾಗಿಯೇ ಹೌದೆಂದು ತೋರುತ್ತಿತ್ತು. ಅವರು ಅತ್ಯಂತ ಸಮರ್ಥ ಆಡಳಿತಗಾರರು, ತಮ್ಮ ಕಾರ್ಯಕ್ಷೇತ್ರದಲ್ಲಿ ವಿಖ್ಯಾತರು. ಅದರೂ ನನ್ನ ನೇತೃತ್ವದಲ್ಲಿ ಅತಿ ನಮ್ರ ಭಾವದಿಂದ ರಾಜಕೀಯ ಶಿಕ್ಷಣವನ್ನು ಪ್ರಾರಂಭಿಸಿದರು. ಯಾಕೆಂದರೆ ನಾನು ಹಿಂದುಸ್ತಾನದಲ್ಲಿ ಬಂದು ನೆಲಸಿದಾಗ ಪ್ರಚಲಿತವಿದ್ದ ರಾಜಕಾರಣ ಅವರಿಗೆ ಒಪ್ಪಿಗೆಯಾಗಿರಲಿಲ್ಲವೆಂದು ನನಗೆ ತಿಳಿಸಿದರು. ಒಂದಾನೊಂದು ಕಾಲಕ್ಕೆ ನಾವು ಅತ್ಯಂತ ಯಶಸ್ವಿಯಾಗಿ ಪ್ರಯೋಗಿಸಿದ ಅಹಿಂಸಾಸ್ತ್ರವನ್ನು ಈಗ ತಮಗೆ ಅಧಿಕಾರಬಲ ಬಂದಾಗ ಪ್ರಯೋಗಿಸುವದು ಆಗುತ್ತಿಲ್ಲವೆಂದು ಅವರಿಗೆ ತೋರಿದೆ. ಅಹಿಂಸೆಯೆಂದು ನಾನೂ ನನ್ನ ಸಂಗಡಿಗರೂ ಸಾರುತ್ತ ಬಂದುದನ್ನು ಜನತೆಯು ನಿಷ್ಕ್ರಿಯ ಪ್ರತೀಕಾರವೆಂಬುದಾಗಿ ತಿಳಿದರೆಂಬುದನ್ನು ನಾನು ಕಂಡು ಹಿಡಿದಿದ್ದೇನೆ. ಸ್ವಾಭಾವಿಕವಾಗಿ ಈ ಬಗೆಯ ದುರ್ಬಲ ನಿಷ್ಕ್ರಿಯ ಪ್ರತೀಕಾರದಿಂದ ಅಡಳಿತಗಾರರಿಗೆ ಏನೂ ಪ್ರಯೋಜನವಾಗದು. ಒಂದು ಜನತೆಯನ್ನು ಪ್ರತಿನಿಧಿಸುವ ಒಬ್ಬ ದುರ್ಬಲ ರಾಜನನ್ನು ತೆಗೆದುಕೊಳ್ಳಿರಿ. ಅವನು ತಾತ್ಕಾಲಿಕವಾಗಿ ತನ್ನ ರಕ್ಷಣೆಗೊಳಗಾದ ಅವನ ಒಡೆಯರನ್ನು ಅದರಿಂದ ಅಧೋಗತಿಗಿಳಿಸುವನು. ಸರದಾರರು ಎಂದೂ ತನ್ನ ರಕ್ಷಣೆಗೊಳಗಾದವರನ್ನು ಬಿಟ್ಟು ಕೊಡಲಾರರೆಂದು ನನಗೆ ಗೊತ್ತಿದೆ.

ಉಪವಾಸದ ಉದ್ದೇಶ

"ನನ್ನ ಹೇಳಿಕೆಗೆ ಈ ಹಿನ್ನೆಲೆಯ ಜ್ಞಾನವಿರುವಾಗ ಯಾರಾದರೂ ನನ್ನ ಉಪವಾಸವನ್ನು ಗೃಹಮಂತ್ರಿಖಾತೆಯ ಧೋರಣೆಯನ್ನು ತಿರಸ್ಕರಿಸಲು ಹೂಡಿದ್ದೆಂದು ಹೇಳಲು ಧೈರ್ಯ ಮಾಡಬಹುದೆ? ಎಂದು ನಾನು ಅಚ್ಚರಿಪಡುತ್ತೇನೆ. ಎಲ್ಲಕ್ಕಿಂತ ಅಂತ ಮನುಷ್ಯನೊಬ್ಬನಿದ್ದರೆ ಅಂಥವನು ತನ್ನ ಸ್ನೇಹಿತರನ್ನಾಗಲಿ ಸಹಚಾರರನ್ನಾಗಲಿ ಅಲ್ಲ ತನ್ನನ್ನೇ ತಾನು [illegible] ಮಾಡಿಕೊಳ್ಳುವದಲ್ಲದೆ ಅಧೋಗತಿಗಿಳಿಸಿಕೊಳ್ಳುವನೆಂದು ಮಾತ್ರ ಅವನಿಗೆ ನಾನು ಹೇಳಬಲ್ಲೆ.

ಈ ಹಿಂದೆ ಖಂಡಿತೋಕ್ತಿಯಿಂದ ಹೊರಗಿನ ಯಾವ ಶಕ್ತಿಯೂ ಒಬ್ಬನನ್ನು ಅಧೋಗತಿಗಿಳಿಸಲಾರದೆಂದು ನಾನು ಹೇಳಿಲ್ಲವೆ? ಅವನು ಮಾತ್ರ ಅವನನ್ನು ಅಧೋಗತಿಗಿಳಿಸಿಕೊಳ್ಳಬಲ್ಲ. ಈ ವಾಕ್ಯವು ಇಲ್ಲಿ ಅನವಶ್ಯವೆಂಬುದು ನನಗೆ ಗೊತ್ತಿದ್ದರೂ ಅದು ಎಲ್ಲ ಸಂದರ್ಭಗಳಲ್ಲೂ ಪುನರುಚ್ಚರ ಮಾಡಬೇಕಾದಂಥ ಸತ್ಯವೆನಿಸಿದೆ. ನಾನು ಸರಳ ಭಾಷೆಯಲ್ಲಿ ಹೇಳಿದಂತೆ, ನನ್ನ ಉಪವಾಸವು ನಿಃಸಂದಿಗ್ಧವಾಗಿ ಒಕ್ಕೂಟದಲ್ಲಿಯ ಅಲ್ಪಸಂಖ್ಯಾಕ ಮುಸಲ್ಮಾನರಿಗಾಗಿಯೇ; ಅದುದರಿಂದಲೇ ಒಕ್ಕೂಟದ ಹಿಂದು-ಶೀಖರ ವಿರುದ್ಧವಾಗಿಯೂ ಪಾಕಿಸ್ತಾನದ ಮುಸಲ್ಮಾನರ ವಿರುದ್ಧವಾಗಿಯೂ ಅಗತ್ಯವಾದುದು. ಅದು ಒಕ್ಕೂಟದಲ್ಲಿರುವ ಅಲ್ಪಸಂಖ್ಯಾಕ ಮುಸಲ್ಮಾನರಿಗಾಗಿ ಹೇಗೋ ಹಾಗೇ ಪಾಕಿಸ್ತಾನದಲ್ಲಿಯ ಅಲ್ಪಸಂಖ್ಯಾಕರಿಗಾಗಿಯೂ ಇದೆ. ಇದು ನಾನು ಅಗಲೇ ಹೇಳಿದ ಭಾವದ ವಿರೂಪ ಸಾರಾಂಶ. ನನ್ನಂತಹ ಅತಿ ದುರ್ಬಲ ಮತ್ತು ಅಪೂರ್ಣ ಮನುಷ್ಯನು ಇಂತಹ ಉಪವಾಸವನ್ನು ಕೈಕೊಳ್ಳಲಾರನೆಂಬದನ್ನು ಒಪ್ಪಿಕೊಳ್ಳುತ್ತೇನೆ. ಏಕೆಂದರೆ, ಅಂತಹ ಉಪವಾಸಕ್ಕೆ ಅದರ ರಕ್ಷಣೆಗೊಳಗಾದವರು ಎಲ್ಲ ಭಯಗಳಿಂದಲೂ ಮುಕ್ತರಾಗುವಂತೆ ಮಾಡುವ ಸಾಮರ್ಥ್ಯವಿರಬೇಕು. ಉಪವಾಸವೆಂಬದು ಸರ್ವರಿಗೂ ಒಂದು ಆತ್ಮಶುದ್ಧಿಯ ಕ್ರಮವೆನಿಸಿದೆ. ಈ ಕ್ರಮದ ಪಾವಿತ್ರ್ಯದ ವಿರುದ್ಧ ಏನಾದರೂ ವಕ್ರೋಕ್ತಿಯನ್ನಾಡುವುದು ತಪ್ಪಾಗುತ್ತದೆ.

ವಿರೂಪಗೊಳಿಸಲವಕಾಶವಿಲ್ಲ

"ಮೂರನೆಯ ಪ್ರಶ್ನೆ: 'ಸಂ. ರಾ. ಸಂಘದ ಭದ್ರತಾ ಮಂಡಲದ ಸಭೆ ಸೇರುವ ದಿನ ನೀವು ಉಪವಾಸವನ್ನು ಕೈಕೊಂಡಿದ್ದೀರಿ; ಹಾಗೆಯೇ ಕರಾಚಿಯ ದಂಗೆಯಾದೊಡನೆಯೆ ಮತ್ತು ಗುಜರಾತಿನ ಕೊಲೆ ನಡೆದನಂತರವೆ ಅದು ಅರಂಭವಾದಂತಾಗಿದೆ. ಎರಡನೆಯ ಸಂಗತಿಗಳಿಗೆ ಹೊರನಾಡಿನ ಪತ್ರಿಕೆಗಳಲ್ಲಿ ಎಷ್ಟರ ಮಟ್ಟಿಗೆ ಮಹತ್ವ ಕೊಡಲಾಗಿದೆಯೆಂಬುದು ವಿದಿತವಾಗಿಲ್ಲ ಆದರೆ ನಿಃಸಂದಿಗ್ಧವಾಗಿಯೂ ನಿಮ್ಮ ಉಪವಾಸವು ಉಳಿದೆಲ್ಲ ಘಟನೆಗಳನ್ನೂ ಮೀರಿಬಿಟ್ಟಿದೆ. ಪಾಕಿಸ್ತಾನದ ಪ್ರತಿನಿಧಿಗಳು ಈ ಸಂದರ್ಭವನ್ನರಿತು ಮಹಾತ್ಮರು ಭಾರತದಲ್ಲಿ ಮುಸಲ್ಮಾನರು ಬದುಕಲಾರದಂತೆ ಮಾಡ್ಡಿದ ತಮ್ಮ ಹಿಂದು ಅನುಯಾಯಿಗಳಲ್ಲಿ ವಿವೇಕೋದಯವಾಗುವಂತೆ ಮಾಡಲೆಂದೇ ಉಪವಾಸವನ್ನು ಕೈಕೊಂಡರೆಂದು ಸಾರದಿದ್ದರೆ ಅವರ ಕೀರ್ತಿ ಕಳಂಕಿತವಾಗದಿರದು. ಜಗತ್ತಿನ ನಾಲ್ಕೂ ಮೂಲೆಗಳನ್ನು ಸೇರಲು ಸತ್ಯ ಬಹಳ ಕಾಲವನ್ನು ತೆಗೆದುಕೊಳ್ಳುವುದು ಆದರೆ ಈ ನಡುವೆ ಸಂಯುಕ್ತ ರಾಷ್ಟ್ರಸಂಘದ ದೃಷ್ಟಿಯಲ್ಲಿ ನಮ್ಮ ನಿಲುವು ಬಿದ್ದುಹೋಗುವಂಥ ದುರದೃಷ್ಟದ ಪರಿಣಾಮವನ್ನು ನಿಮ್ಮ ಉಪವಾಸವು ಉಂಟು ಮಾಡಬಹುದಾಗಿದೆ."

"ಈ ಪ್ರಶ್ನೆಗೆ ಉದ್ದವಾದ ಉತ್ತರ ಬೇಕಾಗಿಲ್ಲ. ನನಗೆ ತಿಳಿದ ಭಾರತದ ಹೊರಗಿನ ಪ್ರಭುತ್ವ ಮತ್ತು ಪ್ರಜೆಗಳ ಜ್ಞಾನದಿಂದ ನಾನು ಧೈರ್ಯವಾಗಿ ಇಷ್ಟನ್ನು ಹೇಳಬಲ್ಲೆ: ಉಪವಾಸವು ಕೇವಲ ಹಿತಕರವಾದ ಪರಿಣಾಮವನ್ನು ಉಂಟು ಮಾಡಿದೆ. ಭಾರತದಲ್ಲಿ ನಡೆಯುತ್ತಿರುವುದರ ಬಗ್ಗೆ ಪೂರ್ವಸಿದ್ಧ ಅಭಿಪ್ರಾಯಗಳಿಲ್ಲದೆ ನಿಷ್ಪಕ್ಷಪಾತ ಭಾವದಿಂದ ನೋಡಬಲ್ಲ ಹೊರನಾಡಿಗರು ಎಂದೂ ಒಕ್ಕೂಟ ಮತ್ತು ಪಾಕಿಸ್ತಾನ ವಾಸಿಗಳೆಲ್ಲರಿಗೆ ಸಮಬುದ್ಧಿಯುಂಟಾಗಲೆಂದು ಮಾಡಿದ ಉಪವಾಸದ ಉದ್ದೇಶವನ್ನು ವಿರೂಪಗೊಳಿಸಲಾರರು. ಪಾಕಿಸ್ತಾನದಲ್ಲಿರುವ ಬಹುಸಂಖ್ಯಾಕ ಮುಸಲ್ಮಾನ ಸ್ತ್ರೀ ಪುರುಷರು ಶೀಲವಂತ ಗಂಡಸರು ಹೆಂಗಸರಂತೆ ನಡೆದುಕೊಳ್ಳದಿದ್ದರೆ ಒಕ್ಕೂಟದಲ್ಲಿಯ ಮುಸಲ್ಮಾನರನ್ನು ಉಳಿಸುವುದು ಅಸಾಧ್ಯವೇ ಸರಿ. ಸುದೈವದಿಂದ, ನಿನ್ನಿನ ಮೃದುಲಾಬೆನ್ನರ ಟಿಪಣಿ ಸ್ಪಷ್ಟಪಡಿಸಿದಂತೆ ಪಾಕಿಸ್ತಾನದ ಮುಸಲ್ಮಾನರು ತಮ್ಮ ಕರ್ತವ್ಯಬುದ್ಧಿಯ ಬಗ್ಗೆ ಚೆನ್ನಾಗಿ ಎಚ್ಚತ್ತಿದ್ದಾರೆ. ನ್ಯಾಯವಾದ ನಿರ್ಣಯಕ್ಕೆ ಬರಲು ಮತ್ತು ಹೊಸದಾಗಿ ಸಿದ್ಧವಾದ ಎರಡು ಅಧಿರಾಜ್ಯಗಳಿಗೆ ಮಾರ್ಗದರ್ಶನ ಮಾಡಿಕೊಡಲು ನನ್ನ ಉಪವಾಸವು ಸಹಾಯ ಮಾಡುವುದೆಂದು ಸಂಯುಕ್ತ ರಾಷ್ಟ್ರ ಸಂಘಕ್ಕೆ ಗೊತ್ತಿದೆ.

—೧೧ನೇ ಪುಟಕೆ

ಸರಕಾರೀ ನೌಕರರ ಸಂಬಳ

ಮುಂಬಯಿ ಸರಕಾರವು ತಾ. ೨೦ ಕ್ಕೆ ಒಂದು ಆಜ್ಞೆ ಹೊರಡಿಸಿದ್ದು ಅದರಲ್ಲಿ ಸರಕಾರೀ ನೌಕರರ ಸಂಬಳ, ತುಟ್ಟಿಭತ್ತೆ, ಮನೆಯ ಬಾಡಿಗೆ, ಪರಿಹಾರ ಭತ್ತೆ ಮತ್ತು ಸ್ಥಾನಿಕ ಭತ್ತೆ ಮೊದಲಾದವುಗಳ ಬಗ್ಗೆ ತನ್ನ ಸರಕಾರದ ನಾನ್ ಗೆಝೆಟೆಡ್ ನೌಕರರ ಬಗ್ಗೆ ಹೊಸ ಪ್ರಮಾಣ ಹಾಕಿಕೊಟ್ಟಿದೆ. ಈ ಪ್ರಮಾಣವು ೧—೧—೧೯೪೭ ರಿಂದಲೇ ಅನ್ವಯಿಸುವದಾಗಿ ಸಾರಿದೆ. ಇನ್ನು ಗೆಝೆಟೆಡ್ ನೌಕರರ ಬಗ್ಗೆ ವಿಚಾರ ನಡೆದಿದ್ದು ಆ ಬಗ್ಗೆ ಬೇಗ ವಿವರಗಳನ್ನು ಪ್ರಕಟಿಸಬಹುದು.

ಹಿಂದುಸ್ತಾನ ಸರಕಾರದವರು ಸ್ವೀಕರಿಸಿದ ಪ್ರಮಾಣಗಳನ್ನೇ ಈ ಹೊಸ ಪ್ರಮಾಣಗಳು ಬಹುಮಟ್ಟಿಗೆ ಅನುಸರಿಸಿವೆ. ಇದರಿಂದ ೨೪೦ ಲಕ್ಷ ರೂ. ಗಳು ಸರಕಾರೀ ನೌಕರರ ಬಗ್ಗೆ ಹಾಗೂ ೧೧೦ ಲಕ್ಷ ರೂ. ಗಳು ಸರಕಾರಿ ಗ್ರ್ಯಾಂಟ ಇನ್ ಏಡ ಪಡೆವ ಸಂಸ್ಥೆಗಳ ಬಗ್ಗೆ ಸರಕಾರಕ್ಕೆ ಪ್ರತಿ ವರ್ಷ ವೆಚ್ಚ ತಗಲುವದು.

ಕನಿಷ್ಟ ವೇತನ

ಕೇಂದ್ರ ವೇತನ ಮಂಡಲದವರು ೧೯೪೬ ರ ಪ್ರಾರಂಭಕ್ಕಿದ್ದ ಧಾರಣೆಗಳಿಗೆ ಅನುಸರಿಸಿ ಕನಿಷ್ಟ ವೇತನವು ತುಟ್ಟಿಭತ್ತೆ ಸೇರಿ ೫೫ ರೂ. ಗಳಿರಬೇಕೆಂದೂ ಮಧ್ಯಮ ವೇತನವು ತುಟ್ಟಿಭತ್ತೆ ಸೇರಿ ೯೦ ರೂ. ಗಳಿರಬೇಕೆಂದೂ ನಿರ್ಧರಿಸಿದ್ದು ಮುಂಬಯಿ ಸರಕಾರವಾದರೂ ಅದನ್ನೇ ಒಪ್ಪಿದೆ.

ತುಟ್ಟಿಭತ್ತೆ

ಕೇಂದ್ರ ವೇತನ ಮಂಡಳದ ಸಲಹೆಯಂತಿದ್ದ ಹೊಸ ತುಟ್ಟಿಭತ್ತೆ ಪ್ರಮಾಣಗಳು ಈ ಪ್ರಾಂತದಲ್ಲಿ ೧೬—೮—೧೯೪೭ ರಿಂದ ಅಮಲಿನಲ್ಲಿ ಬಂದವು. ಹಿಂದಿನ ಪ್ರಮಾಣಗಳೆ ಲಾಭವೆನಿಸಿದರೆ ವೇತನದ ಹೊಸ ಪ್ರಮಾಣಗಳು ಬರುವವರೆಗೆ ನೌಕರರು ಹಳೆಯ ಪ್ರಮಾಣದ ಮೇರೆಗೆ ತುಟ್ಟಿಭತ್ತೆಯನ್ನು ಪಡೆಯಬಹುದೆಂದು ಸವಲತ್ತು ಕೊಡಲಾಗಿತ್ತು. ಆದರೆ ಇನ್ನು ಎಲ್ಲ ನಾನ್ ಗಾಝೆಟೆಡ್ ನೌಕರರಿಗೆ ಹೊಸ ಪ್ರಮಾಣಗಳು ಅನ್ವಯಿಸುವವು. ತುಟ್ಟಿಭತ್ತೆಯ ಹೊಸ ಪ್ರಮಾಣಗಳನ್ನು ಕೆಳಗೆ ಕೊಡಲಾಗಿದೆ. ಧಾರಣೆಗಳು ಬದಲಾದಂತೆ ಅವು ಬದಲಾಗುವವು.

ಮೂಲವೇತನ ರೂ.	ತುಟ್ಟಿಭತ್ತೆ ರೂ.
೫೦ ರೂ. ವರೆಗೆ	೩೫
೫೧—೧೦೦	೪೫
೧೦೧—೧೫೦	೪೦
೧೫೧...೨೦೦	೪೫
೨೦೧—೨೫೦	೫೦
೨೫೧—೪೦೦	೬೦
೪೦೧—೫೦೦	೭೦
೫೦೧—೭೫೦	೮೫
೭೫೧-೧೦೦೦	೧೦೦

ಜೀವನವೆಚ್ಚ ಏರಿದ ಬಗ್ಗೆ ನಾನ್ ಗ್ಯಾಝೆಟೆಡ್ ನೌಕರರಿಗೆ ಕೊಡಲಾಗುತ್ತಿದ್ದ ಇತರ ಸವಲತ್ತುಗಳನ್ನು (ತಾತ್ಪೂರ್ತಿಕ ಪರಿಹಾರ, ತಾತ್ಪೂರ್ತಿಕ ಹೆಚ್ಚಳ, ಕೆಲವೊಂದು ಸ್ಥಳದಲ್ಲಿ ಕಾರಕೂನರಿಗೆ ಕೊಡಲಾಗಿದ್ದ ಪರಿಹಾರ ವೇತನ) ಹೊಸ ಪ್ರಮಾಣಗಳು ಅಮಲಿನಲ್ಲಿ ಬಂದುದರಿಂದ ಬಂದು ಮಾಡಲಾಗಿದೆ ಅವರ ವೇತನದ ಹೊಸ ಪ್ರಮಾಣಗಳು ಬರುವವರೆಗೆ ಗ್ಯಾಝೆಟೆಡ್ ಅಫೀಸರರು ಹೊಸ ಇಲ್ಲವೆ ಹಳೆ ಇವುಗಳಲ್ಲಿ ತಮಗೆ ಯಾವ ಪ್ರಮಾಣವು ಲಾಭದಾಯಕವೆನಿಸುವದೊ ಅದರಂತೆ ತುಟ್ಟಿಭತ್ತೆಯನ್ನು ಪಡೆಯಬೇಕು.

ವೇತನ ಮತ್ತು ತುಟ್ಟಿಭತ್ತೆಯಲ್ಲದೆ ಮುಂಬೈಯೇತರ ಪಟ್ಟಣಗಳಲ್ಲಿ ನಾನ್ ಗ್ಯಾಝೆಟೆಡ್ ನೌಕರರಿಗೆ ಮನೆ ಬಾಡಿಗೆ ಮತ್ತು ಸ್ಥಾನಿಕ ಭತ್ತೆ ದೊರೆಯುವದು. ಆದರೆ ಇವುಗಳಿಗೆ ಕೆಲವೊಂದು ಕರಾರುಗಳಿವೆ.

ಪ್ರತಿ ವರ್ಷ ನೌಕರರಿಗೆ ಒಂದು ವೇತನ ಬಡತಿ (ಇನ್‌ಕ್ರಿಮೆಂಟ) ಸಿಗಬೇಕೆಂದು ಕೇಂದ್ರ ವೇತನ ಮಂಡಳದ ಸೂಚನೆಯಿದೆ. ಆದರೆ ಮುಂಬಯಿ ಸರಕಾರವು ಮೊದಲನೆಯ ಮೂರು ವರ್ಷ ನೌಕರಿಯ ಬಗ್ಗೆ ಪ್ರತಿಯೊಂದು ವರ್ಷಕ್ಕೆ ಬಡತಿ ದೊರೆತು ಮುಂದೆ ಮೂರು ವರ್ಷಕ್ಕೊಂದು ಬಡತಿ ದೊರೆಯಬೇಕೆಂದು ವಿಧಿಸಿದೆ.

ಹೊಸ ಪ್ರಮಾಣದಂತೆ ಅಗುವ ವೇತನವು ಸದ್ಯದ ವೇತನಕ್ಕಿಂತ ಕಡಿಮೆ ಅದ ಪಕ್ಷದಲ್ಲಿ ಆಯಾ ನೌಕರನಿಗೆ ಅಂತರವನ್ನು ಪರಿಹಾರ ವೇತನವೆಂದು ಕೊಟ್ಟು ಅದನ್ನು ಮುಂದಿನ ವೇತನ ಬಡತಿಗಳಲ್ಲಿ ಲೀನೀಕರಿಸಲಾಗುವದು.

ನಾನ್ ಗ್ಯಾಝೆಟೆಡ್ ನೌಕರಿಗೆ ೧-೧-೪೭ ರಿಂದ ಅಥವಾ ಅವರು ಆ ನಂತರ ನೌಕರಿಗೆ ಸೇರಿದ್ದರೆ ನೌಕರಿ ಸೇರಿದ ತಾರೀಖಿನಿಂದ ಹೊಸ ಪ್ರಮಾಣದಂತೆ ವೇತನ ಸಲ್ಲುವದು.

ವ್ಯಾಪಾರ ಪ್ರಪಂಚ

ಮುಂಬಯಿ ಪೇಟೆ ಧಾರಣೆ

ಮುಂಬಯಿ ತಾ. ೨೨

ಎಣ್ಣೆ ಕಾಳುಗಳು

ಶೇಂಗಾ	೧೬೧—೮—೦
ಶೇಂಗಾ ಹೊಸದು	೧೬೧—೦—೦
ಅಗಸೆ	೨೯—೧೦—೦
ಅಗಸೆ ಎಣ್ಣೆ	೧೮—೪—೦

ಬಂಗಾರ

ತಯಾರಿ	೧೦೫—೧೪—೦
ವಾಯದೆ	—
ಸಾವರಿನ	೬೮—೮—೦

ಬೆಳ್ಳಿ

ತಯಾರಿ	೧೬೯—೮—೦
ವಾಯದೆ	—
ತುಕಡಾ	೧೬೨—೫—೦
ಚೇಂಬರ	೧೬೩—೦—೦

ಅರಳೆ

ಜನೆವರಿ	೫೫೧—೦—೦
ಮಾರ್ಚ	೫೨೩—೦—೦
ಮೇ	೫೨೭—೦—೦
ಜುಲೈ	೫೩೫—೮—೦
ಸಪ್ಟಂಬರ	೫೪೦—೦—೦
ಹೆಚ್ಚು	೫೨೭-೦-೦ — ೫೨೮-೦-೦
ಕಡಿಮೆ	೫೨೦-೦-೦ — ೫೨೧-೦-೦

ಮುಂಬಯಿ ಸ್ಟಾಕ್ ಪೇಟೆ ಮುಚ್ಚಿದೆ.

ಕೊಲ್ಹಾಪುರ

೨೦—೧—೧೯೪೮ ನೇ ದಿನ ಕೊಲ್ಹಾಪುರ ಪೇಟೆಗೆ ೧೪೫೭೮ ಪೆಂಟ ಬೆಲ್ಲ ಬಂದು ೨೨೬೪೫ ಪೆಂಟ ಮಾರಾಟವಾದವು. ಬೆಲ್ಲದ ಧಾರಣೆ ೧೮ ರಿಂದ ೫೧—೬೦ ವರೆಗಿದ್ದಿತು. ಅಂದು ೬೦೮ ಚೀಲ ಶೇಂಗಾ ಬಂದಿದ್ದು ೬೦೮ ಚೀಲ ಮಾರಾಟವಾದವು. ಶೇಂಗಾದ ಧಾರಣೆ ರೂಪಾಯಿಗೆ ೨—೬—೯ ಯಿಂದ ೨—೭—೦ ಶೇರು ಇದ್ದಿತು ಎಂದು ಮಾರ್ಕೆಟ ಕಮೀಟಿಯವರು ತಿಳಿಸುತ್ತಾರೆ.


ಹುಬ್ಬಳ್ಳಿ

ಹೊಸ ಜಯವಂತ ಹತ್ತಿ ನಂ.	೧	೩೪೦-೩೫೦
,,	೨	೩೨೦-೩೩೦
,,	೩	೩೦೦-೩೧೦
ಹಳೇ ಜಯವಂತ ಹತ್ತಿ		೩೭೦-೩೭೫
ಜಿನ ಹಳೆದು		೨೪೦-೨೫೦
ಜಿನ ಹೊಸದು		೨೨೦-೨೩೫
ಢಬಲರೋಲ		೨೧೫-೨೨೫
ಕಾಟನ್		೨೦೫-೨೧೫
ಜಿ. ಹತ್ತಿಕಾಳು		೯ ಪೌಂಡು
ಡಬಲರೋಲ ಹತ್ತಿಕಾಳು		೯ ,,



ಬೆಂಗಳೂರಿನ ಶ್ರೀ. ಡಿ. ವಿ. ಗುಂಡಪ್ಪನವರು ಹುಬ್ಬಳ್ಳಿಗೆ ಬಂದಾಗ ತೆಗೆದ ಛಾಯಾಚಿತ್ರವಿದು. ನಿಂತವರು, ಶ್ರೀಗಳಾದ ರಾ. ವೆ. ಕರಗುದರಿ ಹ. ರಾ. ಪುರೋಹಿತ, ಚಂದ್ರಶೇಖರ, ಬಾಬೂ ದಿವಾಕರ, ಕೂತವರು— ಶ್ರೀಗಳಾದ ಕೆ. ವಿ. ರಾಘವಾಚಾರ್ಯ, ವಿನೀತ, ಕೆ. ಸಂಪದ್ಗಿರಿರಾವ, ಡಿ. ವಿ. ಗುಂಡಪ್ಪ, ಹ. ರಾ. ಮೊಹರೆ, ಕೆ. ಗುರುರಾವ ಮತ್ತು ನಿಟ್ಟೂರ ಶ್ರೀನಿವಾಸರಾವ.





ಹೈದ್ರಾಬಾದದಲ್ಲಿ ಏಜಂಟರಾಗಿರುವ ಶ್ರೀ ಕೆ. ಎಂ. ಮುನಶಿಯವರು ಹಕೀಮಪೇಟ ನಿಲ್ದಾಣದಲ್ಲಿ ಬಂದೊಡನೆ ಅಲ್ಲಿ ನೆರೆದಿದ್ದ ಜನರನ್ನುದ್ದೇಶಿಸಿ ಭಾಷಣ ಮಾಡುವಾಗ ತೆಗೆದ ಚಿತ್ರ

ಬಲಕ್ಕೆ— ಹೈದ್ರಾಬಾದದಲ್ಲಿ ಸೌ. ಲೀಲಾವತಿ ಮುನಶಿ ಶ್ರೀ ಸುಧೀರ ಘೋಷರೊಡನೆ ಮಾತನಾಡುತ್ತ ನಿಂತಿದ್ದಾಗ ತೆಗೆದ ಚಿತ್ರ

ಬಟ್ಟೆಯ ವಿನಿಯಂತ್ರಣ

(೬ ನೇ ಪುಟದಿಂದ)

ಅರಳೆಯ ಪೂರೈಕೆಯು ತುಸು ಕಠಿಣವಿದ್ದ ಕಾರಣ ಹಿಂದುಸ್ತಾನದ ಗಿರಣಿಗಳಿಗೆ ಉಪಯುಕ್ತವಿರುವ ಅರಳೆಯನ್ನು ಕಾದಿಡಲಾಗುವದು. ಆದುದರಿಂದ ೧೩/೧೬ ಅಂಗುಲ ಎಳೆಯ ಅರಳೆಯ ನಿರ್ಯಾತದ ಮೇಲಿದ್ದ ನಿರ್ಬಂಧ ಹಾಗೇ ಉಳಿಯುವದು. ಉಮರಾದೇಶಿ ಬಂಗಾಲ ದೇಶಿ, ಮಾಥಿಯ, ಅಸಾಮ ಹಾಗೂ ಕೋಮಿಲ್ಲಾ ಅರಳೆಗೆ ಮಾತ್ರ ನಿರ್ಯಾತವು ಪರಿಮಿತಗೊಳಿಸಲ್ಪಡುವದು.

ಅರಳೆಯ ಕನಿಷ್ಠ ಮತ್ತು ಪರಮಾವಧಿ ಬೆಲೆಯ ನಿರ್ಬಂಧವನ್ನು ಕೂಡಲೆ ರದ್ದುಗೊಳಿಸಲಾಗುವದು. ಅರಳೆಯ ಬೆಲೆಯನ್ನು ಸ್ಥಿರಗೊಳಿಸಲು ನಿರ್ಯಾತ ಕರವನ್ನು ಇಮ್ಮಡಿ ಮಾಡಲಾಗುವದು. ಜಗತ್ತಿನಲ್ಲಿ ಅರಳೆಯ ಕೊರತೆ ಇರುವದರಿಂದ ಬೆಲೆಯು ಈಗಿದ್ದ ಮಿತಿಗಿಂತ ಕೆಳಗಿಳಿಯಲಾರದೆಂದು ಆಶಿಸಲಾಗಿದೆ. ಇದಕ್ಕೂ ಮೀರಿ ಬೆಲೆ ಕೆಳಗಿಳಿದರೆ ರೈತರ ಹಿತರಕ್ಷಣೆಗೆ ತಕ್ಕ ಉಪಾಯ ಕೈಕೊಳ್ಳಲಾಗುವದು.

ಬಟ್ಟೆಯ ನಿರ್ಯಾತ, ಯಂತ್ರೋಪಕರಣಗಳ ಹಂಚುವಿಕೆ, ಬಣ್ಣ, ರಸಾಯನ ಮೊದಲಾದವುಗಳ ಮೇಲಿನ ನಿರ್ಬಂಧಗಳು ಉಳಿಯುವವು.

ಪರದೇಶದ ಬಟ್ಟೆಯ ಬೆಲೆ ಮತ್ತು ಹಂಚುವಿಕೆಯ ನಿಯಂತ್ರಣಗಳೆಲ್ಲ ದೂರಾಗುವವು.

ಒಂದು ವೇಳೆ ಪರಿಸ್ಥಿತಿಯು ಹದಗೆಟ್ಟರೆ ಮತ್ತೆ ನಿಯಂತ್ರಣವು ಅಮಲಿನಲ್ಲಿ ಬರುವದು. ಆದಕಾರಣ ನಿಯಂತ್ರಣದ ಸಿಬ್ಬಂದಿಯನ್ನು ಕೆಲಕಾಲ ಇಟ್ಟುಕೊಳ್ಳಲಾಗುವದು.

(೧೦ನೇ ಪುಟದಿಂದ)

ಬಿರ್ಲಾಭವನ ಹೊಸದಿಲ್ಲಿ
೧೬—೧—೪೮

ಪ್ರಾರ್ಥನಾ ಸಭೆಯಲ್ಲಿ ಸಮ್ಮಿಲಿತರಾದವರಿಗಾಗಿ ಗಾಂಧೀಜಿಯವರು ಬರೆದುಕೊಟ್ಟ ಸಂದೇಶವನ್ನು ಹೇಳುವ ಮೊದಲು ಅವರು ತಮ್ಮ ಹಾಸಿಗೆಯ ಮೇಲಿಂದ ಧ್ವನಿವಾಹಕ ಯಂತ್ರದ ಮೂಲಕ ಅವರನ್ನುದ್ದೇಶಿಸಿ ಮಾತಾಡಿದರು. ಇಂದು ನಿಮ್ಮನ್ನುದ್ದೇಶಿಸಿ ಮಾತಾಡಬಲ್ಲೆನೆಂದು ನಾನು ಎಣಿಸಿರಲಿಲ್ಲ ಆದರೆ ಇಂದು ನಿನ್ನೆಗಿಂತ ನನ್ನ ಧ್ವನಿ ಹೆಚ್ಚು ಬಂದಿದೆ. ಮತ್ತೇನೂ ಆಗಿಲ್ಲ ಎಂದು ತಿಳಿಯಲು ನೀವು ಸಂತೋಷಪಡಬಹುದು. ಪರಮಾತ್ಮನ ದಯೆಯ ಹೊರತು ನಾನು ಅದಕ್ಕೆ ಬೇರೆ ಯಾವ ಕಾರಣವನ್ನು ಕೊಡಲಾರೆ. ಹಿಂದೆ ಯಾವ ಉಪವಾಸದಲ್ಲಿಯೂ ನಾಲ್ಕನೆಯ ದಿನ ಇಷ್ಟು ಆರಾಮ ನನಗೆ ಎನಿಸಿರಲಿಲ್ಲ. ನೀವೆಲ್ಲರೂ ಆತ್ಮಶುದ್ಧಿಗಾಗಿ ಪ್ರಯತ್ನಿಸಿದ್ದಾದರೆ ಕೊನೆಯವರೆಗೂ ಮಾತಾಡಲು ನನ್ನಲ್ಲಿ ಶಕ್ತಿ ಉಳಿಯಬಹುದು. ಉಪವಾಸದ ಪಾರಣೆ ಮಾಡುವಲ್ಲಿ ನಾನೇನು ಅವಸರ ಮಾಡುವದಿಲ್ಲ. ಅವಸರದಿಂದ ಕೆಲಸ ಕೆಟ್ಟು ಹೋಗುವದು. ಕಾರ್ಯ ಇನ್ನೂ ಅಪೂರ್ಣವಾಗಿರುವಾಗ ಎಲ್ಲವೂ ಸರಿಪಡಿಸಲಾಗಿದೆ ಎಂದು ಯಾರೂ ಬಂದು ನನಗೆ ಹೇಳಬಾರದು. ದಿಲ್ಲಿಯಲ್ಲಿ ನಿಜವಾಗಿ ಶಾಂತತೆ ಪ್ರಸ್ಥಾಪಿತವಾದರೆ ಅದರ ಪರಿಣಾಮ ಹಿಂದುಸ್ತಾನದಲ್ಲೆಲ್ಲ ಆಗಬಲ್ಲುದು. ಎರಡೂ ಸಾಮಂತ ರಾಷ್ಟ್ರಗಳಲ್ಲಿ ಶಾಂತತೆ ಪ್ರಸ್ಥಾಪಿತವಾಗದಿದ್ದರೆ ನನಗೇನು ಬಾಳುವ ಇಚ್ಛೆ ಇಲ್ಲ.

ರಶಿಯಾದಿಂದ ಕಲಿಯತಕ್ಕ ಪಾಠ

(೯ ನೇ ಪುಟದಿಂದ ಮುಂದುವರಿದುದು)

'ಬೂಟು'ಗಳು ಇಲ್ಲ. ನಮಗೆ ಅತ್ಯವಶ್ಯಕವಾಗಿ ಬೇಕಾದ ಪದಾರ್ಥವೆಂದರೆ ಅನ್ನ ಆಹಾರ ಪದಾರ್ಥಗಳು. ಈ ಪರಿಸ್ಥಿತಿಯಲ್ಲಿ ಹಿಂದುಸ್ತಾನಕ್ಕೆ 'ಸ್ಟಾಕಹಾಮದಿಂದ ಖುರ್ಚಿ ಮತ್ತು ಮೇಜುಗಳು' ದೊರೆಯುವವೋ ಇಲ್ಲವೋ ಎಂಬುದು ಮಹತ್ವದ್ದಲ್ಲ. ಅದರಿಂದ ದೇಶದ ಜನತೆಯ ಮೇಲೆ ಯಾವ ಪರಿಣಾಮವೂ ಆಗದು. ಆಹಾರ ಪದಾರ್ಥವನ್ನು ಪೂರೈಸುವದು 'ಅತ್ಯವಶ್ಯ'ವಾಗಿದೆ ಎಂಬುದನ್ನು ಪ್ರತಿಯೊಬ್ಬನೂ ತಿಳಿಯುವನು. ಆದರೆ ಹಿಂದುಸ್ತಾನ ಸರಕಾರ ಸದ್ಯಕ್ಕೆ ನಡೆಸಿದ ಯೋಜನೆಯಲ್ಲಿ ಈ ಅವಶ್ಯಕತೆಯನ್ನೇ ಉಪೇಕ್ಷಿಸಲಾಗಿದೆ. ಮತ್ತು ವಿಲಾಸದ ಸಾಮಗ್ರಿಗಳಕಡೆಗೆ ಹೆಚ್ಚು ಲಕ್ಷ್ಯವನ್ನು ಕೊಡಲಾಗುತ್ತದೆ. ಸಾಮ್ರಾಜ್ಯವಾದಿ ರಾಷ್ಟ್ರಗಳಿಗೆ ರಾಯಭಾರಗಳು ವಿಲಾಸದ ಸಾಧನಗಳೇ. ನಮ್ಮಂಥ ಬಡ್ಡ ಲಕ್ಷ ನಾಡಿಗೆ ಅವು 'ಸತ್ತ ಉಪಕರಣ'ಗಳು ಕೂಡ ಆಗಿ [illegible]ಲ್ಲ.

ಜಿ. ಸಿ. ಚಿದಂಬರಪ್ಪಾ

ಜನವರಿಯ ಕೊನೆಯೊಳಗಾಗಿ ಬ್ರಹ್ಮದೇಶದಿಂದ ಬ್ರಿಟಿಶ ಸೈನ್ಯವನ್ನು ಸಂಪೂರ್ಣವಾಗಿ ಹಿಂತೆಗೆದುಕೊಳ್ಳಲಾಗುವದೆಂದು ಅಧಿಕೃತವಾಗಿ ತಿಳಿದು ಬಂದಿದೆ. ಈಗಾಗಲೆ ಒಂದು ಗೂರ್ಖಾ ದಲ ರಂಗೂನವನ್ನು ಬಿಟ್ಟು [illegible]

[illegible]

ಅಂತರ್ರಾಷ್ಟ್ರೀಯ

ಆರಬರ ವಿರುದ್ಧ ಯೆಹೂದಿಗಳ [illegible]

ಬ್ರಿಟಿಶರು ಪಾಲೆಸ್ತಾನವನ್ನು ಬಿಟ್ಟು ಹೋಗುವ ದಿನ— ಎಂದರೆ, [illegible] ಆರಬರ ವಿರುದ್ಧ ಪ್ರತಿದಾಳಿ [illegible] ಯೆಹೂದಿ ಕ್ರಾಂತಿಕಾರರ ಸಂಸ್ಥೆಯು ಯೆಹೂದಿ [illegible] ಗುಪ್ತ ಆಕಾಶವಾಣಿಯ [illegible]

ಜೆರೂಸಲೇಂ ಪಟ್ಟಣದಲ್ಲಿ [illegible] ಯೆಹೂದಿ ವಾಹನಗಳ ಮೇಲೆ [illegible] ಜನರಿಗೆ ಗಾಯಗಳಾದವು. [illegible] ಯೆಹೂದಿ ಕಾಣೆಯಾಗಿದ್ದಾನೆ.

ಜೆರೂಸಲೇಮಿನ ಹೊರಭಾಗದಲ್ಲಿ ಅರಬರು ಗುಡ್ಡಗಳಲ್ಲಿ ಅಡಗಿಕೊಂಡು ರಸ್ತೆಯಲ್ಲಿ ಹೋಗುತ್ತಿರುವ ಯೆಹೂದಿಗಳ ಮೇಲೆ ಸಿಡಿಮದ್ದನ್ನು ಗುಂಡನ್ನೂ ಹಾರಿಸುತ್ತಿದ್ದಾರೆ. ಹೆಬ್ರೋನ ಎಂಬಲ್ಲಿ ೮೭ ಯೆಹೂದಿಗಳು ಗಾಯಗೊಂಡು ಸತ್ತರೆಂದು ವರದಿಯಾಗಿದೆ.

ಅರಬ ಯೆಹೂದಿಗಳ ಕಲಹದಲ್ಲಿ ವಿಭಜನಾ ನಿರ್ಣಯವಾದ ಬಳಿಕ ಪ್ರತಿಘಟನೆಯಲ್ಲಿ ಮೊದಲು ಕೈಯೆತ್ತಿದವರು ಅರಬರು. ಸದ್ಯ: ಯೆಹೂದಿಗಳೇನು ಮಾಡಿದರೂ ಆತ್ಮರಕ್ಷಣೆಗಾಗಿಯೇ ಎಂದು ಗಣಿಸಬೇಕಾಗುತ್ತದೆ.

ಗ್ರೀಸಿನ ಪ್ರಕರಣ

ಗ್ರೀಕ ಸರಕಾರದ ವಿರುದ್ಧ ಕಮ್ಯುನಿಸ್ಟ ಕೂಟ ಯೋಧ ಮಂಡಲವು ಒಂದು ಪ್ರತಿ ಸರಕಾರವನ್ನು ಸ್ಥಾಪಿಸಿದೆ. ಅದಕ್ಕೆ ಯುಗೋಸ್ಲೇವಿಯ ಸರಕಾರವು ಮನ್ನಣೆಯಿತ್ತರೆ ಯಾವ ರೀತಿಯ ಪ್ರತಿಕ್ರಿಯೆಯುಂಟಾಗಬಹುದೆಂಬುದನ್ನು ಚರ್ಚಿಸಲು ಯುಗೊಸ್ಲೇವಿಯದ ಮುಖ್ಯ ಮಂತ್ರಿಯಾದ ಮಾರ್ಶಲ ಟಿಟೋರವರು [illegible] ರಾಷ್ಟ್ರಗಳಲ್ಲಿರುವ ತಮ್ಮ ರಾಯಭಾರಿಗಳ ಸಭೆಯನ್ನು ಕರೆದಿರುವರೆಂದೂ ಇದೇ ಸಭೆಗಾಗಿ ಟರ್ಕಿಯಲ್ಲಿರುವ ಯುಗೋಸ್ಲೇವಿಯದ ರಾಯಭಾರಿ ಜೋರ್ಜ ಸಿಮಿಕರು ಹೋಗಿರುವರೆಂದೂ ಹೇಳಲಾಗುತ್ತಿದೆ.

ಸಿಮಿಕರು ಬೆಲ್ಗ್ರೇಡಿಗೆ ತೆರಳುವ ಮುನ್ನ ಸುದ್ದಿಗಾರರಿಗಿತ್ತ ಸಂದರ್ಶನದಲ್ಲಿ ಅಮೇರಿಕವು ಗ್ರೀಸ ಸರಕಾರಕ್ಕೆ ಇನ್ನೂ ಸೈನ್ಯ ಸಹಾಯ ಮಾಡತೊಡಗಿದರೆ ಪರಿಸ್ಥಿತಿ ಹದಗೆಡುವದೆಂದೂ ಅದರ ಪರಿಣಾಮವಾಗಿ ಯುದ್ಧ ಸಂಭವಿಸಲೂ ಬಹುದೆಂದೂ ಹೇಳಿದರು.

'ತಿಳುಕಿದನು ಘನರಾಯ... ..' ಎಂಬಂತೆ ಕಮ್ಯುನಿಸ್ಟ ಪಕ್ಷೀಯರಿಂದ ಅಮೇರಿಕ ಅವರ ವಿರುದ್ಧ ಚಟುವಟಿಕೆಗಳಿಗೀಯುತ್ತಿರುವ ನೆರವಿನ ಭಾರದಿಂದ ತಿಣುಕಿ ಕಿಡಿಸಿನ ಕೆಂಗಿಡಿಗಳನ್ನು ಉದುರಿಸುತ್ತಿರುವದಕ್ಕೆ ಇದೊಂದು ಸಾಕ್ಷಿ.

ಲಂಡನ್ನಿನಲ್ಲಿ ಹರ್ಷೋದ್ಗಾರ!

ಮಹಾತ್ಮಾ ಗಾಂಧಿಯವರು ಲಂಡನ್ನಿಗೆ ತೆರಳಿದಾಗ ಅವರ ಸತ್ಕಾರ ಸಮಾರಂಭವನ್ನೇರ್ಪಡಿಸಿದ ಫ್ರೆಂಡ್ಸ ಹೌಸಿನಲ್ಲಿ ಮಹಾತ್ಮರು ಉಪವಾಸ ಮುಕ್ತಾಯಗೊಳಿಸಿದ ಬಗ್ಗೆ ಲಂಡನ್ನಿನ ಸ್ವರಾಜ್ಯ ಭವನದ ಪರವಾಗಿ ಸಂತೋಷ ಪ್ರದರ್ಶನದ ಸಭೆ ಕೂಡಿಸಲಾಯಿತು. ಈ ಮೊದಲು ಭಾರತ ಮಂತ್ರಿಗಳಾಗಿದ್ದ ಲಾರ್ಡ ಪೆಥಿಕ್ ಲಾರೆನ್ಸರು ಈ ಸಭೆಯಲ್ಲಿ ಭಾಷಣ ಮಾಡಿದರು.

ಗಾಂಧಿಯವರು ದುಷ್ಟ ಶಕ್ತಿಗಳ ವಿರುದ್ಧ ವಿಜಯ ಸಂಪಾದಿಸಿದ್ದು ಇತಿಹಾಸದಲ್ಲಿಯೇ ಅಪೂರ್ವದೊಡ್ಡ ಮಹತ್ವದ್ದು ಆಗಿದೆ. ಯುರೋಪಿನಲ್ಲಿ ಹಿಟ್ಲರನ ಮೇಲೆ ನಾವು ಹೆಚ್ಚಿನ ಪಾಶವೀ ಶಕ್ತಿಯನ್ನು ಬಳಸಿ ವಿಜಯ ಸಂಪಾದಿಸಿದ್ದು ಮಹಾತ್ಮರ ವಿಜಯದ ಮುಂದೆ ಏನೂ ಅಲ್ಲ [illegible] ಪ್ರಮುಖರು ಗಾಂಧಿಯವರ ತ್ಯಾಗ, ಧೈರ್ಯ [illegible] ಇವುಗಳನ್ನು ಕೊಂಡಾಡಿ ಅವರಿಗೆ ದೀರ್ಘಾಯುರಾರೋಗ್ಯವನ್ನು ದೇವರು ದಯಪಾಲಿಸಲೆಂದು ಕೋರಿದರು. ಸರ್ ಸ್ಟಾಫರ್ಡ ಕ್ರಿಪ್ಸ ಮತ್ತು [illegible] ಜನರಲ ಸ್ಮಟ್ಸ [illegible] ಮುಂತಾದವರು ತಮ್ಮ ವಿಶೇಷ ಸಂದೇಶಗಳನ್ನು ಕಳಿಸಿ ಮಹಾತ್ಮರ ಗುಣಗಾನ ಮಾಡಿದರು.

ಇಟಲಿಯ ಆರ್ಥಿಕ ದುಃಸ್ಥಿತಿ ಮತ್ತು ಅಶಾಂತಿ

ದಿನೇ ದಿನೇ ಇಟಲಿಯ ಆರ್ಥಿಕ ಪರಿಸ್ಥಿತಿ [illegible] ಸಹಾಯವ [illegible] ಪಟ್ಟಣಗಳಲ್ಲಿ ಆಹಾರದ ಕೊರತೆ ಅತಿಯಾಗಿ ಹದಗೆಡುತ ಹೋಗಿದೆ. ೧೫ ಲಕ್ಷ ನಿರುದ್ಯೋಗಿಗಳು ಅಲ್ಲಿ ತುಂಬಿಕೊಂಡಿದ್ದಾರೆ. ಉದ್ಯೋಗ ಬೇಕೆಂದು ಹೆಸರು ಕೊಟ್ಟಿದ್ದಾರೆ. ನಿರುದ್ಯೋಗಿಗಳ ಮತ್ತು ಆಹಾರ ಧಾನ್ಯದ ಪರಿಸ್ಥಿತಿ ಕೆಟ್ಟಿದೆ. [illegible] ವಾಗಿ ರಾಜಕೀಯ ಪರಿಸ್ಥಿತಿಯೂ ಕೆಡಬಹುದೆಂದು [illegible]

ಅಂಗಡಿಗಳಲ್ಲಿ ಸೋಪು ಸಾಮಾನುಗಳು ಬಹಳವಾಗಿವೆ. ಹೊಟ್ಟೆಗೆ ಹಿಟ್ಟಿಲ್ಲ, ಬಟ್ಟೆ [illegible] ಎಂಬಂತಾಗಿದೆ. ಕಮರ್ಶಿಯಲ್ ಬ್ಯಾಂಕುಗಳ ಆಡಳಿತ [illegible] ಇವೆಲ್ಲವನ್ನು ನಿಲ್ಲಿಸಲು ೩ ತಿಂಗಳ ಹಿಂದೆ ನಿರ್ದಯವಾಗಿ ಅತಿ ಪ್ರಸರಣದ ವಿರುದ್ಧ ಸರಕಾರವು ಕ್ರಮ ತೆಗೆದುಕೊಂಡಿದೆ. ಅವುಗಳಲ್ಲಿ ಮುಖ್ಯವಾದವೆಂದರೆ— ನೂರಕ್ಕೆ ೪ ರಿಂದ ೫ [illegible] ಗೆ ಡಿಸ್ಕೌಂಟ್ ದರವನ್ನು [illegible] ಬಾಂಡುಗಳನ್ನು ೪.೫ ರಿಂದ ನೂರಕ್ಕೆ ೫ ರ ವರೆಗೆ ಏರಿಸಲಾಯಿತು. ಕರೆಂಟ್ ಲೆಕ್ಕದ ಡಿಪಾಜಿಟ್ಟುಗಳಲ್ಲಿ ಹೆಚ್ಚಿನ ಅಂಶವನ್ನು ಸರಕಾರದ ವಶದಲ್ಲಿಡಬೇಕೆಂದು ಬ್ಯಾಂಕುಗಳಿಗೆ ಅಪ್ಪಣೆ ಕೊಡಲಾಗಿದೆ. ಇದರ ಪರಿಣಾಮವಾಗಿ ಬ್ಯಾಂಕುಗಳು [illegible] ನಿಯಂತ್ರಿಸಿದ್ದರಿಂದ ದೊಡ್ಡ ದೊಡ್ಡ ಔದ್ಯೋಗಿಕ ಕೇಂದ್ರಗಳನ್ನು ಮುಚ್ಚಬೇಕಾಯಿತು. [illegible] ಸ್ಟಾಕ್ ಎಕ್ಸ್‌ಚೇಂಜ್ ಕೂಡ ತಲೆ ಕೆಳಗಾಯಿತು.

ನಿರುದ್ಯೋಗವನ್ನು ತಡೆಗಟ್ಟಲು ಸರಕಾರವು ಧನ ಸಮಿತಿಯೊಂದನ್ನು ಏರ್ಪಡಿಸಿತು. ಇದರಿಂದ ಅತ್ಯಂತ ಮುಗ್ಗಟ್ಟಿಗೊಳಗಾದ ಎಂಜಿನಿಯರಿಂಗ್ ಉದ್ಯೋಗಕ್ಕೆ ಪ್ರೋತ್ಸಾಹ ದೊರಕಿತು. ಚಳಿಗಾಲದೊಳಗೆ ಸಾರ್ವಜನಿಕ ಕಾಮಗಾರಿ ಯೋಜನೆಯೊಂದರನ್ವಯ ೧೦ ಲಕ್ಷ ಜನರಿಗೆ ಕೆಲಸ ದೊರೆವಂತೆ ಏರ್ಪಡಿಸಲಾಯಿತು. ಹೀಗೆ ಅವಪ್ರಸರಣ ಮತ್ತು ಅದರ ನಿವಾರಣೌಷಧ ಎರಡನ್ನೂ ಏಕ ಕಾಲದಲ್ಲಿ ಬಳಸಲಾಗುತ್ತಿದೆ.

ಸಕ್ಕರೆ ತಯಾರಿಕೆಗೆ ಅಗತ್ಯವಾದ 'ಬೀಟ'ನ ಬೆಳೆ ಕೆಟ್ಟು ಹೋಗಿದೆ. ಇದರಿಂದ ೧ ಲಕ್ಷ ಟನ್ ಸಕ್ಕರೆಯ ಕೊರತೆಯುಂಟಾಗಿದೆ. ಇದರ ನಿವಾರಣೆಗಾಗಿ ಇಟಲಿಯ ಪ್ರಜೆಗಳು ಹೊರ ದೇಶದಲ್ಲಿ ಸಂಗ್ರಹಿಸಿದ ಧನವನ್ನು ೮ ಲಕ್ಷ ಪೌಂಡುಗಳ ವರೆಗೆ ಬಳಸಬಹುದೆಂದು ಸರಕಾರ ವಿಧಿಸಿದೆ.

ಲೆಕ್ಕ ನೋಡಿದರೆ ಆಯಾತವು ಯುದ್ಧಪೂರ್ವದ ಮಟ್ಟಕ್ಕೆ ಬಂದು ಮುಟ್ಟಿದ್ದರೂ ನಿರ್ಯಾತವು ಬಂದು ಮುಟ್ಟಿಲ್ಲ; ಅದು ಬಹಳ ಹಿಂದೆಯೇ ಉಳಿದಿದೆ. ಈ ಪರಿಸ್ಥಿತಿಯನ್ನು ಅಮೇರಿಕವು ತನ್ನ ಲಾಭಕ್ಕಾಗಿ ಉಪಯೋಗಿಸಿಕೊಳ್ಳುತ್ತಿದೆ; ಬೇಕಾದ ಹಾಗೆ ಸಾಲ ಕೊಟ್ಟು ತನ್ನ ನಿರ್ಯಾತ ಹೆಚ್ಚುವಂತೆ ಮಾಡಿಕೊಳ್ಳುತ್ತಿದೆ. ಪರಿಸ್ಥಿತಿ ಎಷ್ಟೇ ಕೆಟ್ಟಿದ್ದರೂ ನಿರಾಶೆಪಡುವ ಕಾರಣವಿಲ್ಲವೆಂದು ಹೇಳಬಹುದು

ಡಚ್ಚರ ಸಾರ್ವಭೌಮತ್ವಕ್ಕೆ ಮನ್ನಣೆ

ಭದ್ರತಾ ಮಂಡಲದ ಸಂಧಾನ ಸಮಿತಿಯವರು ತಯಾರಿಸಿದ ೬ ತತ್ವಗಳನ್ನು ತಮ್ಮ [illegible] ಕೆಗೆ ತಳಹದಿಯನ್ನಾಗಿಟ್ಟುಕೊಳ್ಳಲು ಡಚ್ ಮತ್ತು ಇಂಡೋನೇಶಿಯನ್ನರು ಒಪ್ಪಿದ್ದಾರೆ.

ಈ ಇಂಡೋನೇಶಿಯದ ಸಂಯುಕ್ತ ಸಂಸ್ಥಾನ ತಲೆಯೆತ್ತುವ ವರೆಗೆ ಡಚ್ಚರ ಸಾರ್ವಭೌಮತ್ವವನ್ನು ಮಾನ್ಯ ಮಾಡಬೇಕೆಂದೂ ಎಲ್ಲ ತಾತ್ಕಾಲಿಕ ಸರಕಾರದಲ್ಲೂ ಯೋಗ್ಯ ಪ್ರಾತಿನಿಧ್ಯವಿರಬೇಕೆಂದೂ ಪ್ರಜಾರಾಜ್ಯದಲ್ಲಿರಬಯಸುವವರೋ ಇಲ್ಲವೆ ದೇಶೊಂದು ಸರಕಾರ [illegible] ಮಧುರಾಗಳಲ್ಲಿ ಸಾರ್ವತ್ರಿಕ ಮತಗಣನೆ ಮಾಡಬೇಕೆಂದೂ ಸಂಯುಕ್ತ ಸಂಸ್ಥಾನದ ರಾಜ್ಯಘಟನೆಯನ್ನು ತಯಾರಿಸಲು ಒಂದು ಸಭೆಯನ್ನು ಕರೆಯಬೇಕೆಂದೂ ಈ ತತ್ವಗಳಲ್ಲಿ ಹೇಳಲಾಗಿದೆ. ಈ ತತ್ವಗಳ ಅಂಶವನ್ನು [illegible] ರಾಷ್ಟ್ರೀಯ ಪರಿಷತ್ತಿನವರು [illegible] ಇದರ ಪ್ರತಿನಿಧಿಗಳು ಸದ್ಯದ ಪ್ರಜಾರಾಜ್ಯದ ಸರಕಾರದಲ್ಲಿರುವರು.

ದ. ಆಫ್ರಿಕದಲ್ಲಿ ಸತ್ಯಾಗ್ರಹ

ದ. ಆಫ್ರಿಕದ ೧೯೪೬ರ ವಲಸೆ ಕಾಯಿದೆಯನ್ನುಲ್ಲಂಘಿಸಿ ಟ್ರಾನ್ಸ್‌ವಾಲಿನಲ್ಲಿ ನುಗ್ಗಲು ದ. ಆಫ್ರಿಕದ ಹಿಂದೀ ಸತ್ಯಾಗ್ರಹ ಸಮಿತಿಯವರು ನಿರ್ಧರಿಸಿ ಅದರಂತೆ ಮುಖ್ಯಮಂತ್ರಿಯಾದ ಸೇನಾಪತಿ ಸ್ಮಟ್ಸರಿಗೆ ತಿಳಿಸಿದ್ದಾರೆ.

೧೫ ಹಿಂದೀ ಸತ್ಯಾಗ್ರಹಿಗಳುಳ್ಳ ಮೊದಲ ತಂಡವು ಈಗ ಅಲ್ಲಿಗೆ ಹೊರಟಿದೆ. ಈಗ ಕೇಪ್ ಟೌನಿನಲ್ಲಿ ದಕ್ಷಿಣ ಆಫ್ರಿಕದ ಯೂನಿಯನ್ ಪಾರ್ಲಿಮೆಂಟು ಪ್ರಾರಂಭವಾದಾಗ ವಿರೋಧಿ ಪಕ್ಷದ ಡಾ. ಮಾಲನರು ಏಶಿಯನ್ನರ ಭೂದಾನ ಮತ್ತು ಹಿಂದೀ ಪ್ರಾತಿನಿಧ್ಯ ಕಾಯದೆಯ ೨ ನೆಯ ಅಧ್ಯಾಯವು ರದ್ದಾಗಬೇಕು [illegible] ಗೊತ್ತುವಳಿಯನ್ನು ಮಂಡಿಸುತ್ತ ಹಿಂದೀ ಪ್ರಶ್ನೆಯಂಥ ಮಹತ್ವದ ವಿಷಯದ ಬಗ್ಗೆ ಸೇನಾಪತಿ ಸ್ಮಟ್ಸರು ಜನಾಭಿಪ್ರಾಯವನ್ನು ಕೇಳದೆ ತಮ್ಮ ನಿರ್ಣಯವನ್ನೇ ತೆಗೆದು ಪಾರ್ಲಿಮೆಂಟಿನ ಮೇಲೆ ಹೇರಿದ್ದನ್ನು ಟೀಕಿಸಿದರು.

ಪ್ರಶ್ನೋತ್ತರ ಸಮಯದಲ್ಲಿ ಸೇನಾಪತಿ ಸ್ಮಟ್ಸರು ಮಾತನಾಡುತ್ತ ಭಾರತ ಸರಕಾರದವರು ಯೂನಿಯನ್ನಿನ ಪ್ರಜೆಗಳ ಮೇಲೆ ನಿರ್ಬಂಧ ಹೇರಿರುವುದು ತಮಗೆ ಗೊತ್ತಿದೆಯೆಂದೂ ಈ ನಿರ್ಬಂಧಗಳ ವಿವರಗಳು ತಮಗೆ ಗೊತ್ತಿಲ್ಲವೆಂದೂ ಹೇಳಿದರು.

ಉಭಯ ಸರಕಾರಗಳು ತಮ್ಮ ೧೯೪೭ ಮತ್ತು ೪೮ ರ ಧೋರಣೆಗಳನ್ನು ಪುನರ್ವಿಮರ್ಶಿಸಲೊಪ್ಪಿದರೆ ಸ್ನೇಹವನ್ನು ಪುನಃ ಘಟಿಸುವ ಸಾಧ್ಯಾಸಾಧ್ಯತೆಯನ್ನು ವಿಚಾರ ಮಾಡಬಹುದೆಂದು ಯೂನಿಯನ್ ಸರಕಾರದ ಅಪ್ಪಣೆಯ ಮೇರೆಗೆ ಅದರ ಪ್ರತಿನಿಧಿಯು ಸಂಯುಕ್ತ ರಾಷ್ಟ್ರ ಸಭೆಯಲ್ಲಿ ಸೂಚಿಸುವನೆಂದೂ ಹೇಳಿದರು.

'ವಿವೇಕ ಭ್ರಷ್ಟಾನಾಂ ಭವತಿ ವಿನಿಪಾತಃ ಶತಮುಖಃ' ಎಂಬುದನ್ನು ಅರಿತರೆ ಸದ್ಯದಲ್ಲಿ ವಿನ್ಯಾಸ ಮಾಡಬಹುದೆಂಬ ವಾಕ್ಯವನ್ನೆತ್ತಿದ ಯೂನಿಯನ್ ಸರಕಾರವು ನ್ಯಾಯವಾದ ಮಾರ್ಗದಿಂದ ಹಿಂದುಸ್ತಾನದ ಪ್ರೀತಿಯನ್ನು ಸಂಪಾದಿಸಬಹುದಲ್ಲದೆ ಪುನಃ ಶ್ವಾನಪುಚ್ಛದಂತೆ ವರ್ತಿಸಿದರೆ ಹಿಂದುಸ್ತಾನವೆಂದೂ ಸೊಪ್ಪುಹಾಕದು.

ಮಧ್ಯ ಪ್ರಾಚ್ಯದ ಎಣ್ಣೆ

ಟ್ರಾನ್ಸ್ ಅರೇಬಿಯನ್ ಪೈಪ್ ಲೈನ್ ಕಂಪನಿಯು ೧೦೪೦ ಮೈಲುದ್ದದ ಎಣ್ಣೆ ಸಾಲನ್ನು ಪರಿಶೀಲಿಸಲು ಮಧ್ಯಪ್ರಾಚ್ಯದ ಫಾರನ್ ಹೀಟ್ ೧೩೦ ಡಿಗ್ರಿಯ ಉಷ್ಣದಲ್ಲಿ ಅಮೇರಿಕದ ಎಂಜಿನಿಯರರು ಪ್ರಾರಂಭಿಸಿದ್ದಾರೆ.

ಜಗತ್ತಿಗಿಂದು ಪೆಟ್ರೋಲು ಹೆಚ್ಚಾಗಿ ಬೇಕಾಗಿದೆ. ಗ್ಯಾಸೋಲಿನ್, ಕೆರೋಸೀನ್ ಲ್ಯೂಬ್ರಿಕೆಂಟ್ಸ್, ಡೈಸೇಲ್, ಮುಂತಾದವುಗಳ ಅವಶ್ಯಕತೆ ಹೆಚ್ಚಿದೆ. ಉದಾಹರಣೆಗಾಗಿ ಅಮೇರಿಕದ ಸಂ. ಸಂಸ್ಥಾನವನ್ನೇ ತೆಗೆದುಕೊಳ್ಳಬಹುದು. ಅಲ್ಲಿ ೧೯೪೭ರಲ್ಲಿ ೨೦೦ ಕೋಟಿ ಬ್ಯಾರೆಲ್ಲಿನಷ್ಟು ಎಣ್ಣೆಯನ್ನು ತೆಗೆದು ಬಳಸಲಾಯಿತು; ಎಂದರೆ, ೧೯೪೬ಕ್ಕಿಂತ ೮೦ ಕೋಟಿ ಬ್ಯಾರೆಲ್ಲು ಹೆಚ್ಚು, ಜಗತ್ತಿನ ಒಟ್ಟು ಬಳಕೆಗಿಂತಲೂ ಹೆಚ್ಚು. ೧೯೫೧ರಷ್ಟರಲ್ಲಿ ೨೨೦ ಕೋಟಿ ಬ್ಯಾರೆಲ್ಲುಗಳಿಗೇರಬಹುದೆಂದು ತರ್ಕಿಸಲಾಗಿದೆ. ಇದೇ ಪ್ರಕಾರ ಐರೋಪ್ಯ ರಾಷ್ಟ್ರಗಳಾದರೂ ಯುದ್ಧಕಾಲಕ್ಕಿಂತ ಹೆಚ್ಚು ಹೆಚ್ಚಾಗಿ ಪೆಟ್ರೋಲನ್ನು ಬಳಸಲಿವೆ. ಅಮೇರಿಕದ ಸಂಯುಕ್ತ ಸಂಸ್ಥಾನದ ಹೆಚ್ಚಿನ ಎಣ್ಣೆ ನಿರ್ಯಾತವಾಗುತ್ತಿದ್ದುದು ಯುರೋಪಿಗೇ. ಯುರೋಪಿನ ಪುನರ್ರಚನೆಗೆ ಕಚ್ಚಾ ಎಣ್ಣೆ ಅತ್ಯವಶ್ಯವಿದೆ. ತೀರ ಪ್ರದೇಶಕ್ಕೊಯ್ಯಲು ವಾಹನ ಸೌಕರ್ಯ ಸರಿಯಾಗಿಲ್ಲದಿರುವದೇ ಇಂದು ಎದುರಿಸುತ್ತಿರುವ ತೊಂದರೆ. ಈಗ ಅದರ ನಿವಾರಣೆಗಾಗಿ ಸೌದಿ ಅರೇಬಿಯದ ಅಬಕೈಕಿನಿಂದ ಲೆಬನಾನಿನ ತೀರದ ವರೆಗೆ ೩೦ ಲಕ್ಷ ಬ್ಯಾರೆಲ್ ಎಣ್ಣೆ ಒಯ್ಯುವ ಪಂಪನ್ನು ಹಾಕಲಾಗುತ್ತಿದೆ. ಇದಕ್ಕೆ ಅ. ಸಂ. ಸಂಸ್ಥಾನ ಮತ್ತು ಐರೋಪ್ಯ ಪಂಪುಶಾಲೆಗಳನ್ನು ಜೋಡಿಸಲಾಗುತ್ತಿದೆ. ಅರೇಬಿಯನ್ ಪಂಪು ಸಾಲು ೧೯೫೦ರಲ್ಲಿ ತೆರೆಯಲಾದೀತೆಂದು ನಂಬಿಗೆ.

ತುಣುಕು ಸುದ್ದಿಗಳು

ಪರ್ಶಿಯದ ರಾಜಧಾನಿಯಾದ ತೆಹರಾನಿನಲ್ಲಿ ಮುಸಲ್ಮಾನರ ಮತಪ್ರದರ್ಶನ ಹೆಚ್ಚಾಗಿ ಪ್ರವಾದಿಯ ವಂಶೀಯನೆಂದು ಕರೆದುಕೊಂಡ ಗಾಸೇ ಮಕಶಾನಿ ಎಂಬಾತನು ಪವಿತ್ರ ಯುದ್ಧವನ್ನು ಯಹೂದಿಗಳ ಕ್ರೌರ್ಯವನ್ನು ಹತ್ತಿಕ್ಕಲು ಹೂಡಬೇಕೆಂದು ಸಾರಿದನು.

ಫೆಬ್ರುವರಿಯಲ್ಲಿ ಭಾರತಕ್ಕೆ ಕಳುಹಲೆಂದು ಅಮೇರಿಕ ನಿರ್ಧರಿಸಿದ್ದ ೧೨ ಸಾವಿರ ಟನ್ ಗೋಧಿಯನ್ನು ಭಾರತವಿಂದು ಬೇಡಿದುದಾಗಿ ತಿಳಿಯುತ್ತದೆ. ವಾರಾಂತ್ಯದೊಳಗೆ ವ್ಯಾಪಾರ ವ್ಯವಸ್ಥೆ ನಡೆಯಬಹುದಾಗಿ ಹೇಳಲಾಗುತ್ತಿದೆ.

\+ \+ \+ \+

ಈಶಾನ್ಯ ಏಶಿಯದ ತರುಣರ ಪರಿಷತ್ತು ಕಲಕತ್ತದಲ್ಲಿ ಫೆಬ್ರುವರಿ ೧೫ ರಿಂದ ೨೧ ರ ವರೆಗೆ ಸೇರಲಿದೆ. ಉದ್ಘಾಟನೆಗೆ ಪಂ. ಜವಾಹರರಿಗೆ ಆಮಂತ್ರಣ ಕೊಡಲಾಗಿದೆ. ಈ ಪರಿಷತ್ತನ್ನು ಪ್ರಜಾಪ್ರಭುತ್ವವಾದೀ ತರುಣರ ಜಾಗತಿಕ ಸಂಘ ಮತ್ತು ಅಂತರ್ರಾಷ್ಟ್ರೀಯ ವಿದ್ಯಾರ್ಥಿ ಸಂಘದವರು ಕೂಡಿ ಕರೆದಿದ್ದಾರೆ. ಪ್ರಪಂಚ ಜಾಗತಿಕ ಸಂಘದ ಅಧ್ಯಕ್ಷರಾದ ಎಂ. ಗ್ರೇಡಿ ಬಾಯಸನ್ನರು (ಫ್ರಾನ್ಸ್) ಪರಿಷತ್ತಿಗೆ ಬರುವರು.

\+ \+ \+ \+

"ರುಮೇನಿಯದಲ್ಲಿ ಇತ್ತೀಚೆಗೆ ಸಂಭವಿಸಿದ ಘಟನೆಗಳಿಂದ ನನ್ನ ದೇಶಕ್ಕೆ ಹಾಗೂ ಜಗತ್ತಿಗೆ ಗಂಡಾಂತರವಿದೆ" ಎಂದು ಅಲ್ಲಿಯ ಹಿಂದಿನ ಅರಸರು ಒಂದು ಪತ್ರಿಕೆಯಲ್ಲಿ ಹೇಳಿದ್ದಾರೆ.

\+ \+ \+ \+

ಪಶ್ಚಿಮ ಜರ್ಮನಿಯ ಆಡಳಿತವನ್ನು ಭದ್ರಪಡಿಸಬೇಕೆಂದು ಆಂಗ್ಲೋ ಅಮೇರಿಕನ್ನರು ಸಂಯುಕ್ತವಾಗಿ ಪ್ರಯತ್ನಿಸುತ್ತಿರುವುದರ ವಿರುದ್ಧವಾಗಿ ರಶಿಯವು ಬರ್ಲಿನ್ ಸಿಟಿ ಕೌನ್ಸಿಲ್ಲನ್ನು ಅಳಿಸಿ, ಚತುಷ್ಪ್ರಭುತ್ವ ಸಮಿತಿಯಿಂದ ತನ್ನ ಪ್ರತಿನಿಧಿಗಳನ್ನು ವಾಪಸು ಕರೆಸಿಕೊಳ್ಳಬಹುದೆಂದು ಸುದ್ದಿಯಿದೆ.

× × ×

ಬ್ರಿಟಿಶ ಉಪಪ್ರಧಾನರಾದ ಶ್ರೀ. ಹರ್ಬರ್ಟ ಮಾರಿಸನ್ನರು ಅಸತ್ಯವೂ ಆದ ಆರೋಪಗಳನ್ನು ರಶಿಯದ ಕಮ್ಯುನಿಸ್ಟರು ಮಾಡುವುದನ್ನು ಅಲ್ಲಗಳೆದರು.

× × ×

ಹಿಂದುಸ್ತಾನ ಪಾಕಿಸ್ತಾನಗಳಲ್ಲಿರುವ ಬ್ರಿಟಿಶ ಅಧಿಕಾರಿಗಳೇ ಕಾಶ್ಮೀರದಲ್ಲಿ ಇಂದು ಆಗುತ್ತಿರುವ ರಕ್ತಪಾತಕ್ಕೆ ಕಾರಣರೆಂದು ಮಾಸ್ಕೋದ "ಟ್ರೂಡ್" ಪತ್ರಿಕೆ ಸಾರಿದೆ.

× × ×

ಪಾಲಿಸ್ತಾನದ ಅರಬ ಕೂಟಯೋಧರು ವಿಶೇಷ ಶ್ರಮದಿಂದ ತಯಾರಾಗುತ್ತಿರುವರೆಂದು ರಾಯಟರ ಸುದ್ದಿಗಾರನು ಬರೆಯುತ್ತಾನೆ.

\+ × ×

ಬ್ರಿಟನ್ ಮತ್ತು ಇರಾಕುಗಳ ನಡುವೆ ಆದ ಹೊಸ ಕರಾರು ಇರಾಕಿನ ರಾಷ್ಟ್ರೀಯ ಬೇಡಿಕೆಗಳನ್ನು ಪೂರೈಸುವಂಥದಿದೆಯೆಂದು ಅಲ್ಲಿಯ ತಾತ್ಕಾಲಿಕ ಮುಖ್ಯ ಮಂತ್ರಿ ಒಂದು ಹೇಳಿಕೆ ಹೊರಡಿಸಿದ್ದಾನೆ.

ಕರ್ನಾಟಕ

ಧಾರವಾಡ

ಹೈದ್ರಾಬಾದ ಹೋರಾಟದ ಸಂಬಂಧದಲ್ಲಿ ೧೯ ನೇ ತಾರೀಕು ಗದುಗಿನ ಟೆಂಗಿನಕಾಯಿ ಪೇಟೆಯಲ್ಲಿ ಸಭೆ ಸೇರಿತ್ತು. ಮೊದಲು ಶ್ರೀ ಬರದ್ವಾಜರು ಮಹಾತ್ಮಾಜಿಯವರು ಶಾರಣ ಮಾಡಿ ಅಗ್ನಿದಿವ್ಯದಿಂದ ಪಾರಾದುದಕ್ಕೆ ಅಭಿನಂದಿಸಿದರು. ಅನಂತರ ಶ್ರೀ ಜೋಶಿ ಕೃಷ್ಣಾಚಾರ್ಯರು ಶ್ರೀ ಜಾಗಿರದಾರರು ಹೈದರಾಬಾದದ ಹೋರಾಟವನ್ನು ಜನ ಅನುಭವಿಸುತಿರುವ ಕಷ್ಟನಷ್ಟಗಳನ್ನು ತಿಳಿಸಿದರು. ೧೧೧ ರೂಪಾಯಿ ನಿಧಿ ಸಮರ್ಪಿಸಲಾಯಿತು.

ಅಬಕಾರಿ ಮಂತ್ರಿಗಳಾದ ಎಲ್ ಎಂ ಪಾಟೀಲರು ೧೮ನೇ ತಾ. ಬ್ಯಾಡಗಿಯಲ್ಲಿ ಡಾ. ಮೋದಿಯವರ ನೇತ್ರಚಿಕಿತ್ಸಾಲಯವನ್ನು ನೋಡಿ ಸಂತೋಷಪಟ್ಟು ಬಡವರ ಕಲ್ಯಾಣಕ್ಕಾಗಿ ಅವರು ಕೈಕೊಂಡ ಕೆಲಸಕ್ಕಾಗಿ ಅಭಿನಂದಿಸಿದರು.

ಧಾರವಾಡ ಕೆ ಈ ಬೋರ್ಡ ಕಾಲೇಜಿನ ಸ್ನೇಹ ಸಮ್ಮೇಲನವು ನ್ಯಾಯಮೂರ್ತಿ ಶ್ರೀ ಗಜೇಂದ್ರಗಡಕರ ಇವರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು. ಅವರು ವಿದ್ಯಾರ್ಥಿಗಳಿಗೆ ಸಮಯೋಚಿತ ಸದುಪದೇಶ ಮಾಡಿದರು. ವಿವಿಧ ವಿನೋದಾವಳಿಗಳು ಬಹಳ ಪ್ರೇಕ್ಷಣೀಯವಾಗಿದ್ದವು.

ಗದುಗಿನಲ್ಲಿ ವಿಠ್ಠಲರಾಯ ಕಲಾಲ ಎಂಬ ೮ ವರ್ಷದ ಚಿಕ್ಕ ಬಾಲಕನು ಎಸ್. ಸಿ. ಮಿಲ್ಲಿನ ಹತ್ತರ ರೇಲ್ವೆ ಹಳಿಯನ್ನು ದಾಟುತಿರುವಾಗ ಮೇಲಗಾಡಿ ಅವನ ಮೇಲೆ ಹಾಯ್ದು ಅಪಘಾತವಾಯಿತು. ಹಿಂದುಗಡೆ ಅಸ್ಪತ್ರೆಯಲ್ಲಿ ಮರಣ ಹೊಂದಿದನು.

ಧಾರವಾಡ ಜಿಲ್ಹಾ ಒಕ್ಕಲತನ ಪ್ರದರ್ಶನವು ಫೆಬ್ರುಅರಿ ೧ ನೇ ತಾರೀಕು ಶ್ರೀ ಎಂ ಪಿ ಪಾಟೀಲರ ಹಸ್ತದಿಂದ ತೆರೆಯಲ್ಪಡುವದು.

ಬೆಳಗಾವಿ

ಕೇಸರಿ ಮತ್ತು ಮರಾಠಾ ಪತ್ರಿಕೆಯ ಹಿಂದಿನ ಸಂಪಾದಕರಾದ ಶ್ರೀ ದಾ ವಿ ಗೋಖಲೆಯವರು ಸಂಯುಕ್ತ ಮಹಾರಾಷ್ಟ್ರ ಪರಿಷತ್ತಿನಲ್ಲಿ ಮಾತಾಡುತ್ತ ಬೆಳಗಾವಿಯು ಮಹಾರಾಷ್ಟ್ರದ್ದೇ ಭಾಗ ೧೦೦ ಕ್ಕೆ ೮೦ ರಷ್ಟು ಮರಾಠಿಗರಿದ್ದಾಗ ಬೇರೆಯವರದೆಂತು? ಕಾಂಗ್ರೆಸ್ಸು ಆಡಳಿತದ ಸೌಕರ್ಯಕ್ಕಾಗಿ ಅದನ್ನು ಕರ್ನಾಟಕದಲ್ಲಿ ಸೇರಿಸಿರಬಹುದು ಎಂದು ಮುಂತಾಗಿ ಹೇಳಿದರು.

ಬೆಳಗಾವಿ ಜಿಲ್ಹಾ ಬೋರ್ಡಿನ ಅಧ್ಯಕ್ಷ ಶ್ರೀ ಕೌಜಲಗಿಯವರ ಅಧ್ಯಕ್ಷ ಆಯ್ಕೆಯ ವಿರುದ್ಧ ಶ್ರೀ ಬಿಕ್ಕಣವರ ಇವರು ನಡೆಸಿದ ಖಟ್ಲೆ ೨॥ ವರುಷಗಳಿಂದ ನಡೆದು ಮುಂಬಯಿ ಹಾಯಕೋರ್ಟಿನವರು ಅಪೀಲನ್ನು ಕಿತ್ತೊಗೆದರು. ಶ್ರೀ ಕೌಜಲಗಿಯವರು ಅಧ್ಯಕ್ಷರಾಗಿ ಆರಿಸಿಬಂದುದು ಕ್ರಮಬದ್ಧವೆಂದು ತೀರ್ಮಾನಿಸಲಾಯಿತು.

ದಡ್ಡಿ ಯೋಜನೆಯಿಂದ ಕೊಲ್ಹಾಪುರದ ಕೆಲಭಾಗ ಮುಳುಗುವದು ಅದಕ್ಕಾಗಿ ಕೊಲ್ಹಾಪುರ ಸಂಸ್ಥಾನದ ವಿರೋಧವಿದೆ ಅದುದರಿಂದ ಈ ಯೋಜನೆ ಕಾರ್ಯಕ್ಕೆ ಇಳಿವುದು ಅಶಕ್ಯವಾಗಿದೆ ಎಂದು ಡಾ. ಗಿಲ್ಡರರು ಶ್ರೀ ಯಾಳಗಿಯವರು ಕೇಳಿದ್ದಕ್ಕೆ ಉತ್ತರ ಕೊಟ್ಟರು.

ಗೋವೆಯಲ್ಲಿ ಪೋರ್ತುಗೀಜ ಸರಕಾರದ ಬೊಕ್ಕಸ ಬರಿದಾಗಿದ್ದು ಬೇರೆ ಬೇರೆ ಹೊಸ ಮಾರ್ಗಗಳಿಂದ ರೊಕ್ಕವನ್ನು ಕೂಡಿಸಲಾಗುತ್ತಿದೆಯಂತೆ. ಹಿಂದೀ ವಿಶ್ವವಿದ್ಯಾಲಯಗಳಲ್ಲಿ ಓದುತಿರುವ ಗೋವಾಂತಕ ವಿದ್ಯಾರ್ಥಿಗಳಿಂದ ಮತ್ತು ಪಾದ್ರಿಗಳು ಮೊದಲಾದ ಹಳ್ಳಿಗರಿಂದ ಕರ ವಸೂಲ ಮಾಡಲು ಪ್ರಾರಂಭಿಸಿರುವರಂತೆ. ಹೊಸ ನಿಗ್ರೋ ಸೈನಿಕರನ್ನು ಕರೆಯಿಸಿಕೊಂಡದ್ದರಿಂದ ಅವರಿಗೆ ವೆಚ್ಚ ಹೆಚ್ಚಾಗಹತ್ತಿದೆಯಂತೆ.

ಇದೇ ಫೆಬ್ರುವರಿ ೨ ಕ್ಕೆ ಕಿತ್ತೂರ ಚನ್ನಮ್ಮಾ ರಾಣಿ ಸ್ಮಾರಕ ದಿನವಿದ್ದು ಅದನ್ನು ಒಳ್ಳೆ ವಿಜೃಂಭಣೆಯಿಂದ ಆಚರಿಸಬೇಕೆಂದು ಇತಿಹಾಸ ಮಂಡಲದವರು ಗೊತ್ತುಪಡಿಸಿದ್ದಾರೆ. ಹೊರಗಿನಿಂದ ಮುಂದಾಳುಗಳನ್ನು ಕರೆಯಿಸಬೇಕೆಂದು ಗೊತ್ತಾಗಿದ್ದು ಪಟ್ಟದಾನೆಯ ಮೆರವಣಿಗೆ ಮೊದಲಾದ ಕಾರ್ಯಕ್ರಮಗಳನ್ನು ಇಡುವವರಿದ್ದಾರೆ.

ಕರ್ನಾಟಕ ವಿಶ್ವವಿದ್ಯಾಲಯ ಸಮಿತಿಯ ಸಭೆ ನ್ಯಾ. ಲೋಕೂರರ ಅಧ್ಯಕ್ಷತೆಯಲ್ಲಿ ೧೮ ಕ್ಕೆ ಬೆಳಗಾವಿಯಲ್ಲಿ ಕೂಡಿ ಘಟನೆಯ ಸಂಬಂಧದಲ್ಲ ಕೊನೆಯ ಸೂಚನೆಗಳನ್ನು ಮಾಡಲಾಯಿತು ತಿಂಗಳ ವರದಿಯನ್ನು ಸಿದ್ಧಪಡಿಸಿ ಸದಸ್ಯರ ಕಡೆಗೆ ಕಳಿಸಬೇಕೆಂದು ಗೊತ್ತಾಯಿತು.

ದಕ್ಷಿಣ ಭಾಗದ ಸಂಯುಕ್ತ ಮಹಾರಾಷ್ಟ್ರ ಪರಿಷತ್ತಿನ ೩ ನೇ ಅಧಿವೇಶನ ಮಹಾರಾಷ್ಟ್ರ ಪ್ರಾಂತಿಕ ಕಾಂಗ್ರೆಸ ಸಮಿತಿಯ ಅಧ್ಯಕ್ಷ ಶ್ರೀ ಕೇಶವರಾವ ಜೇಧೆ ಇವರ ಅಧ್ಯಕ್ಷತೆಯಲ್ಲಿ ಬೆಳಗಾವಿಯಲ್ಲಿ ಇದೇ ೧೩ ನೇ ತಾರೀಕು ನಡೆಯಿತು. ಶ್ರೀ ಅಣ್ಣಾಸಾಹೇಬ ಲಠ್ಠೆಯವರು ಅದರ ಉದ್ಘಾಟನ ಮಾಡಿದರು. ಸದ್ಯದ ಪರಿಸ್ಥಿತಿಯಲ್ಲಿ ಭಾಷಾನುಗುಣ ಪ್ರಾಂತ ರಚನೆಯು ಸರಿಯಾಗಲಾರದೆಂದೂ ಸಹನೆಯಿಂದ ಈ ಪ್ರಶ್ನೆಯನ್ನು ಬಿಡಿಸತಕ್ಕದ್ದೆಂದೂ ಅವರು ಹೇಳಿದರು.

ಅಧ್ಯಕ್ಷರಾದ ಶ್ರೀ ಜೇಧೆಯವರು ಮಾತಾಡುತ್ತ ಕನ್ನಡಿಗರ ಮೇಲೆ ಹರಿಹಾಯ್ದರು. ಬೆಳಗಾವಿ ಕಾರವಾರಗಳ ಮೇಲೆ ಕನ್ನಡಿಗರು ಆಕ್ರಮಣ ಮಾಡಿದ್ದು ಮರಾಠಿಗರ ಮೇಲೆ ಬಲುಮೆ ಮಾಡುತಿರುವರೆಂದೂ ಇದನ್ನು ತಡೆಯಬೇಕೆಂದೂ ಹೇಳಿದರು. ಪ್ರಾಂತೀಕರಣಕ್ಕಾಗಿ ಕಾಂಗ್ರೆಸ್ಸಿನೊಡನೆ ಹೋರಾಡುವೆವೆಂದೂ ಹೇಳಿದರು.

ಆಂಧ್ರದೊಡನೆ ಕರ್ನಾಟಕ ಮಹಾರಾಷ್ಟ್ರ ಪ್ರಾಂತಗಳನ್ನು ರೂಪಿಸಲು ಕೇಳಿಕೊಳ್ಳಬೇಕು. ಈ ಬಗ್ಗೆ ಹಳ್ಳಿಗಳನ್ನು ಪರಿಮಾಣವಾಗಿ ಹಿಡಿಯಬೇಕು. ಅಲ್ಪಸಂಖ್ಯಾಕರಿಗೆ ಜಾತಿ ಭಾಷೆಗಳ ಆಶ್ವಾಸನ ಕೊಡಬೇಕು. ಗೋವೆಯನ್ನು ಮಹಾರಾಷ್ಟ್ರದಲ್ಲಿ ಸೇರಿಸಬೇಕು ಮೊದಲಾದ ಗೊತ್ತುವಳಿ ಪಾಸಾದವು. ಕಾರವಾರದ ಕನ್ನಡದ ಕೋಟೆಯನ್ನು ಒಡೆಯಬೇಕೆಂದು ಕೆಲವರೆಂದರು.

ವಿಜಾಪುರ

ಇದೇ ಜನೇವರಿ ೩ ನೇ ವಾರದಲ್ಲಿ ಕರೆಯಲಾಗಿದ್ದ ಅಖಿಲ ಕರ್ನಾಟಕ ಬಜಂತ್ರಿ ಸಮಾಜದ ದ್ವಿತೀಯ ಅಧಿವೇಶನ ಮೇ ಮೊದಲನೆ ವಾರಕ್ಕೆ ಮುಂದರಿಸಲಾಗಿದೆ.

ವಿಜಾಪುರ ಜಿಲ್ಹಾ ಸಹಕಾರ ಶಿಕ್ಷಣ ಸಮಿತಿಯ ಪರವಾಗಿ ನಡೆಯಲ್ಪಡುವ ಸಹಕಾರಿ ಸಂಘಗಳ ಕಾರ್ಯದರ್ಶಿಗಳ ಶಿಕ್ಷಣ ವರ್ಗ ಬಾಗಲಕೋಟೆಯಲ್ಲಿ ಪ್ರಾರಂಭವಾಗಿದ್ದು ೧೭ ನೇ ತಾರೀಕು ಬಾಗಲಕೋಟೆ ಬಸವೇಶ್ವರ ಕಾಲೇಜಿನಲ್ಲಿ ಶ್ರೀ ಎಂ. ಪಿ. ನಾಡಗೌಡ ಇವರಿಂದ ಆರಂಭೋತ್ಸವ ನೆರವೇರಿಸಲ್ಪಟ್ಟಿತು.

೧೯ ನೇ ತಾರೀಕು ಪ್ರಾಂತಾಧ್ಯಕ್ಷ ಶ್ರೀ ನಿಜಲಿಂಗಪ್ಪಾ ಇವರು ರಾತ್ರಿ ೧೦ ಗಂಟೆಗೆ ಕೂಡಿದ ಸಭೆಯಲ್ಲಿ ಕರ್ನಾಟಕ ಏಕೀಕರಣದ ತೊಡಕನ್ನು ಅವುಗಳ ನಿವಾರಣೋಪಾಯಗಳನ್ನು ತಿಳಿಸಿ ತ್ಯಾಗದಿಂದ ತಾಳ್ಮೆಯಿಂದ ಜಾಣತನದಿಂದ ಇದನ್ನು ಸಾಧಿಸಿಕೊಳ್ಳುವ ಜನರು ಬೇಕಾಗಿದ್ದಾರೆಂದು ಮುಂತಾಗಿ ಹೇಳಿದರು. ತಾಲೂಕ ಕಾಂಗ್ರೆಸ ಕಮಿಟಿ ಪರವಾಗಿ ಅಧ್ಯಕ್ಷ ಶ್ರೀ ಬಾಳಕೃಷ್ಣಪ್ಪಾ ಐಡ್ಡಿಕೆಯವರು ೫೫೦ ರೂಪಾಯಿ ಹಮ್ಮಿಣಿಯನ್ನ ರ್ಪಿಸಿದರು. ಇದರಂತೆ ಈ ತಾಲೂಕಿನ ಬೇವೂರ ಶಿರೂರ ಭಗವತಿ ಶಿರಗುಪ್ಪಿಗ್ರಾಮದವರು ನೂರು ನೂರು ರೂಪಾಯಿ ಕೊಟ್ಟರು.

ಉತ್ತರ ಕನ್ನಡ

ಗೋವೆಯಿಂದ ಹೈದರಾಬಾದಕ್ಕೆ ಪ್ರತಿನಿತ್ಯ ಮದ್ದು ಗುಂಡುಗಳು ಕಳ್ಳತನದಿಂದ ಸಾಗಿಸಲ್ಪಡುತಿವೆಯೆಂದು ಈಗ ತಮಗೆ ತಿಳಿದು ಬಂದಿದೆಯೆಂದೂ ಈ ಬಗ್ಗೆ ಸೂಕ್ಷ್ಮ ರೀತಿಯಿಂದ ತಪಾಸಣೆ ನಡೆದಿದೆಯೆಂದೂ ಕಾರವಾರದ ಪೋಲೀಸ ಅಧಿಕಾರಿಗಳು ತಿಳಿಸುತ್ತಾರೆ. ಹೈದರಾಬಾದ ನಿಜಾಮರ ಏಜಂಟ ಬೆಳಗಾವಿಯಲ್ಲಿದ್ದು ಅವನ ಮುಖಾಂತರ ಮರ್ಮಗೋವಾದಿಂದ ಈ ಶಸ್ತ್ರಾಸ್ತ್ರಗಳು ಹೋಗುತಿವೆಯೆಂತೆ.

ಸದಾಶಿವಗಡದಲ್ಲಿ ೧೭ ನೇ ತಾರೀಕು ಪುಂಡಲೀಕ ಶಂಕರ ಗಿರಿ ಇವರಲ್ಲಿ ಕಾಡತೂಸು ತುಂಬಿದ ಒಂದು ಪಿಸ್ತೂಲ ಎರಡು ಖಾಲಿ ಪಿಸ್ತೂಲು ಹಾಗು ಎರಡು ಕಾಡತೂಸು ಸಿಕ್ಕವು. ಆರೋಪಿಯನ್ನು ಈಗ ಪೋಲೀಸ ಸ್ಟೇಶನಿನಲ್ಲಿ ಇಟ್ಟು ಹೆಚ್ಚಿನ ತಪಾಸಣೆಯನ್ನು ನಡೆಸಿದ್ದಾರೆ.

ಬೆಳಂಬೂರ ಹಾಲಕ್ಕಿ ಒಕ್ಕಲ ಅನಾಥ ವಿದ್ಯಾರ್ಥಿ ಗೃಹದ ಅಡಿಗಲ್ಲನ್ನಿಡುವ ಸಮಾರಂಭ ಉಪಮಂತ್ರಿ ಮಾನ್ಯ ಗಾಂವಕಾರರಿಂದ ನೆರವೇರಿಸಲ್ಪಟ್ಟಿತು. ವೈದ್ಯ ಶಿವು ಬೊಮ್ಮಗೌಡರು ವಸತಿಗೃಹಕ್ಕೆ ಅನೇಕ ವಿಧದ ನೆರವು ಕೊಟ್ಟದ್ದರಿಂದ ಬೇಗ ಇದು ಸಾಧ್ಯವಾಯಿತು.

ಮಂಗಳೂರಿಗೆ ಬಂದಿದ್ದ ಲೋಕೋಪಯೋಗಿ ಮಂತ್ರಿಗಳಾದ ಶ್ರೀ ಎಂ. ಭಕ್ತವತ್ಸಲಂ ಅವರು ಅಧಿಕಾರಿಗಳೊಡನೆ ಜಿಲ್ಲೆಯ ರಸ್ತೆಗಳ ಕುರಿತಾಗಿ ವಿಚಾರವಿನಿಮಯ ಮಾಡಿದರು. ೫ ವರ್ಷಗಳ ಯೋಜನೆಯಲ್ಲಿ ಮಂಜೂರಾದ ಹಣ ೩೫ ಲಕ್ಷ ರೂ. ಅಂದಾಜು ವೆಚ್ಚ ೪೫ ಲಕ್ಷ ರೂಪಾಯಿಗಳ ಮಂಜೂರಾದವು. ೩೩ ನೀರಾವರಿ ಯೋಜನೆಗಳ ಬಗ್ಗೆಯೂ ವಿಚಾರವಾಯಿತು.

ಬಳ್ಳಾರಿ

ತುಂಗಭದ್ರಾ ನದಿಯ ದಂಡೆಯ ಮೇಲಿನ ಮಾಗಳ ಎಂಬ ಹಳ್ಳಿಯನ್ನು ಮೂರುದಿನಗಳ ಹಿಂದೆ ಸಾಯಂಕಾಲ ಸಮವಸ್ತ್ರ ಧರಿಸಿದ ೩೦—೪೦ ಪುಂಡರು ಮುತ್ತಿ ಸಾವುಕಾರ ಜೈನರ ಭೋಜಪ್ಪ ಅವರ ಮನೆಯನ್ನು ಲೂಟಿ ಮಾಡಿದ್ದಾರೆ. ಬಂಗಾರ ಬೆಳ್ಳಿ ಸೇರಲಾದ ೧ ಲಕ್ಷ ರೂಪಾಯಿಯಷ್ಟು ಸಾಮಾನುಗಳು ಹೋಗಿವೆ. ಸಾಂಗಲಿ ಸಂಸ್ಥಾನದ ಹಳ್ಳಿಯಿಂದ ಈ ಪುಂಡರು ಬಂದಿರಬೇಕೆಂದು ತಿಳಿಯುತ್ತದೆ.

ಜೋಳದರಾಶಿ ಜಿಲ್ಹಾ ಬೋರ್ಡ ಪ್ರಾಥಮಿಕ ಶಾಲೆಯ ಸಹಾಯಾರ್ಥ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜೋಳದರಾಶಿ ಗ್ರಾಮದ ನಾಟ್ಯಕಲೋಪಾಸಕ ಮಂಡಳಿಯವರು ೧೮ಕ್ಕೆ ಕ್ರಾಂತಿಪುರುಷ ಬಸವಣ್ಣ ಎಂಬ ನವೀನ ನಾಟಕವನ್ನು ಅಭಿನಯಿಸಿದರು. ಲೇಖಕರಾದ ಶ್ರೀ ದೊಡ್ಡನಗೌಡರು ಬಸವಣ್ಣನ ಪಾತ್ರವನ್ನು ಅತ್ಯದ್ಭುತವಾಗಿ ಅಭಿನಯಿಸಿದರು. ಶ್ರೀ ಬಸವನಾಳರು ಇದರ ಉದ್ಘಾಟನ ಮಾಡಿದರು.

ಬಳ್ಳಾರಿಯಲ್ಲಿ ಸದ್ಯಕ್ಕೆ ಪ್ರತಿದಿನ ೭ ಗ್ಯಾಲನ್ ದಷ್ಟು ನೀರು ಕೊಡುವದಿದ್ದು ಬಹಳ ಕಡಮೆಯಿರುವದರಿಂದ ಪ್ರಾಂತಿಕ ಯೋಜನೆಯಲ್ಲಿ ಬಳ್ಳಾರಿಗೆ ಪ್ರಥಮ ಸ್ಥಾನ ಕೊಡಬೇಕು. ತಲಾ ೧೫ ಗ್ಯಾಲನ್ನಿನಂತೆ ಕೊಡಬೇಕು ಎಂದು ಮುಂತಾಗಿ ಬಳ್ಳಾರಿ ನಗರ ಸಭಾಧ್ಯಕ್ಷರು ಬಿನ್ನವಿಸಿಕೊಂಡಿದ್ದಾರೆ.

ನಿಜಾಮರ ಗುಪ್ತಚಾರರೆಂಬ ಸಂಶಯದಿಂದ ಬಳ್ಳಾರಿಯ ಪೋಲೀಸ ಅಧಿಕಾರಿಗಳು ರಾಜುಲಬಂಡಾದಿಂದ ಬಂದ ೪೧ ವರ್ಷದ ಖಾನ ಖುದಾಬಾ ಖಾನ ಎಂಬವರನ್ನು ಕ್ರಿ. ಪ್ರೊ. ಕೋಡ ೫೫ ನೇ ಕಲಮಿನನ್ವಯ ಬಂಧಿಸಿ ರಿಮಾಂಡಿನಲ್ಲಿ ಇಟ್ಟಿದ್ದಾರೆ.

ಕೊಪ್ಪಳ ತಾಲೂಕಿನ ಕಾತರಕಿ ಹಳ್ಳಿಯಿಂದ ಮಿಲಿಟರಿಯವರ ಉಪಟಳಕ್ಕೆ ಭಯಭೀತರಾಗಿ ಕಳೆದ ಒಂದು ವಾರದಿಂದ ಜನರು ಕಾಂಟ್ರಹಳ್ಳಿ ಸಿಂಗನಹಳ್ಳಿ ರಾಮೇಶ್ವರಬಂಡಿ ಹಾಗು ಮಾತಕೂರಗಳಲ್ಲಿ ಬಂದು ನೆಲಸಹತ್ತಿದ್ದಾರೆ. ಮಿಲಟರಿಯವರ ಅತ್ಯಾಚಾರದ ಬಗ್ಗೆ ಅವರು ಬಹಳವಾಗಿ ಹೇಳಿದರು.

ಬೆಂಗಳೂರು—ಮೈಸೂರು

ಬೆಂಗಳೂರಿನಲ್ಲಿ ಬನ್ನಿ ಗಿರಣಿ ವಿಭಾಗದಲ್ಲಿ ೨೦ ನೇ ತಾರೀಕು ಜನರಲ್ಲಿ ತಿಕ್ಕಾಟ ಸಂಭವಿಸಿ ಒಬ್ಬನು ಸತ್ತನಲ್ಲದೆ ೧೦ ಜನರಿಗೆ ಗಾಯಗಳು ಸಂಭವಿಸಿದವು, ನಗರದಲ್ಲಿ ಮುಂಜಾನೆ ೧೧ ರಿಂದ ಮರುದಿನ ಮುಂಜಾನೆ ೭ ರ ವರೆಗೆ ಕರ್ಫ್ಯೂ ಆಜ್ಞೆಯನ್ನು ಜಾರಿ ಮಾಡಲಾಗಿದೆ.

ಅಖಿಲ ಕನ್ನಡ ನಾಡಿನ ಪ್ರಕಾಶಕರ ಸಮ್ಮೇಲನವನ್ನು ಎಪ್ರಿಲ ಮೇ ತಿಂಗಳಲ್ಲಿ ಕೂಡಿಸಿ ಪ್ರಕಾಶಕರ ಅಡೆತಡೆಗಳನ್ನು ವಿಚಾರಿಸುವದಕ್ಕೆ ೧೪ ಕ್ಕೆ ಮೈಸೂರಿನಲ್ಲಿ ಶ್ರೀ ಹಬ್ಬು ಅವರ ಉಷಾ ಪ್ರೆಸ್ಸಿನಲ್ಲಿ ಪ್ರಾಸ್ತಾವಿಕ ಸಭೆ ಸೇರಿತ್ತು ಪ್ರಕಾಶಕರ ತೊಂದರೆಗಳನ್ನು ನಿವಾರಿಸಿಕೊಳ್ಳಲು ಸಮ್ಮೇಲನವನ್ನು ಕರೆಯಬೇಕೆಂದು ಗೊತ್ತಾಯಿತು. ಆದುದರಿಂದ ಕನ್ನಡ ನಾಡಿನ ಪ್ರಕಾಶಕರು ತಮ್ಮ ಅಡಚಣಿ ಮುಂತಾದವುಗಳನ್ನು ಶ್ರೀ ಆರ್. ಎನ್. ಹಬ್ಬು, ಉಷಾ ಪ್ರೆಸ್ ಶೀಲಗಿರಿ ರೋಡ ಮೈಸೂರ ಈ ವಿಳಾಸಕ್ಕೆ ಕಳಿಸಬೇಕು.

ಜುಂಜನಕಟ್ಟೆಯಲ್ಲಿ ದನಗಳ ಜಾತ್ರೆಯಲ್ಲಿ ಮಾನ್ಯ ದಾಸಪ್ಪನವರು ಸುಮಾರು ೨೦ ಜೊತೆ ಹೋರಿಗಳಿಗೆ ಬೆಳ್ಳಿ ಬಟ್ಟಲಗಳನ್ನು ಬಹುಮಾನವಾಗಿ ಕೊಟ್ಟರು. ಅನಂತರ ಅವರು ಪರಿಜನರೊಂದಿಗೆ ರಾಮದೇವರ ದೇವಸ್ಥಾನಕ್ಕೆ ಹೋಗಿ ತೀರ್ಥ ಪ್ರಸಾದ ಸ್ವೀಕರಿಸಿದರು. ವಿರೋಧ ಮೊದಲು ಸ್ವಲ್ಪ ತೋರಿದರೂ ಪ್ರವೇಶಕೆ ತೊಂದರೆಯಾಗಲಿಲ್ಲ.

ಮೈಸೂರು ಸಂಸ್ಥಾನ ಆಯುರ್ವೇದ ಯುನಾನಿ ಪಂಡಿತರ ಸಮ್ಮೇಲನ ಡಾ. ಗುಂಡಪ್ಪನವರ ಅಧ್ಯಕ್ಷತೆಯಲ್ಲಿ ೧೮ಕ್ಕೆ ಮೈಸೂರಲ್ಲಿ ನಡೆಯಿತು. ಮಾನ್ಯ ಮಹಮ್ಮದ ಶರೀಫರು ಸಮ್ಮೇಲನದ ಉದ್ಘಾಟನೆಯನ್ನು ಮಾಡಿದರು. ಬೇಡಿಕೆಗಳನ್ನೆಲ್ಲ ಸಹಾನುಭೂತಿಯಿಂದ ಪರಿಶೀಲಿಸುವದಾಗಿ ಭರವಸೆಯಿತ್ತರು.

ದಕ್ಷಿಣ ಕನ್ನಡ

ದಕ್ಷಿಣ ಕನ್ನಡ ಜಿಲ್ಹೆಯಲ್ಲಿ ಕರ್ನಾಟಕ [illegible] ಪ್ರಚಾರ [illegible] ಶ್ರೀ [illegible] ತಿರುಗುತ್ತಿದ್ದಾರೆ. ಅವರು ಈ ತಿಂಗಳ ಕೊನೆಯವರೆಗೆ ಅಲ್ಲಿ [illegible].

ಕಿನ್ನಿಗೋಳಿ [illegible] ಯಲ್ಲಿ ನಾಲ್ಕು ಜನರುಳ್ಳ ಮುಸಲ್ಮಾನ ಕುಟುಂಬವೊಂದು ಇದೇ ತಾರೀಖು [illegible] ಹಿಂದೂ ಧರ್ಮದಲ್ಲಿ ಸೇರಿತು. ಐವತ್ತು ವರ್ಷಗಳ ಹಿಂದೆ [illegible] ಸಮಾಜದಿಂದ ಈ ಕುಟುಂಬ ಮುಸಲ್ಮಾನ ಧರ್ಮಕ್ಕೆ ಸೇರಿತ್ತು.

[illegible] ತಮ್ಮ ದೇವಸ್ಥಾನಗಳಿಗೆ [illegible] ನಡೆಸುವ ಬಗ್ಗೆ [illegible] ಕಮೀಶನರ ಶ್ರೀ. ಸುಬ್ಬಯ್ಯನವರನ್ನು [illegible] ನೇಮಿಸಿಕೊಂಡಿದ್ದಾರೆ. [illegible] ಸಂಬಂಧದ [illegible] ನಡೆಸಬೇಕೆಂದು [illegible] ತಿಳಿಸಿದ್ದಾರೆ.

ಉಡುಪಿಯಲ್ಲಿ ೧೪ ನೇ ತಾರೀಕು ಕಲಾಮಂದಿರದಲ್ಲಿ ತತ್ವೋಪನ್ಯಾಸ ಗೋಷ್ಠಿ ನಡೆಯಿತು. ಮೈಸೂರಿನಲ್ಲಿ ಶ್ರೀ ಎಚ್. ಸುಬ್ಬರಾಯರು ಅಧ್ಯಕ್ಷತೆ ವಹಿಸಿದ್ದರು. ಮೊದಲು ಶ್ರೀ ಪಿ. ವಾಸುದೇವ ಉಪಾಧ್ಯಾಯರು ನಮ್ಮ ತೊಡಕುಗಳು ಎಂಬ ವಿಷಯವಾಗಿ ಮಾತಾಡಿದರು. ದಾವಣಗೆರೆಯ ಶ್ರೀ ಭೀಮರಾಯರು ಜೀವನ ಕಲೆ ಸುಗಮವಾಗಿ ಶಾಂತಿಯುಕ್ತವಾಗಿ ಸಾಗಬೇಕಾದರೆ ತತ್ವಜ್ಞಾನದ ಅಧ್ಯಯನವೊಂದೇ ತಾರಕೋಪಾಯವೆಂದು ಹೇಳಿದರು. ಅಧ್ಯಕ್ಷರು ಸಮಯೋಚಿತ ಶಬ್ದಗಳಲ್ಲಿ ಉಪಸಂಹಾರ ಮಾಡಿದ ಬಳಿಕ ಸಭೆ ಕೊನೆಗಂಡಿತು.

ಕನ್ನಡ ಸಂಸ್ಥಾನ

ಜಮಖಂಡಿ ಸಂಸ್ಥಾನವು ಮುಂಬಯಿ ಪ್ರಾಂತದಲ್ಲಿ ಲೀನವಾದಲ್ಲಿ ಸಂಸ್ಥಾನ ನೌಕರರ ಹಿತಸಂಬಂಧ ಕಾಪಾಡಿಕೊಳ್ಳಲು ಎಲ್ಲ ನೌಕರರು ಕೂಡಿ ಒಂದು ಸಂಸ್ಥಾನ ಸಮಿತಿಯನ್ನು ರಚಿಸಿದ್ದಾರೆ. ಇವರು ರಾಜೇಸಾಹೇಬರನ್ನು ಕಂಡು ಸಂಸ್ಥಾನ ವಿಲೀನವಾದಲ್ಲಿ ತಮ್ಮ ಹಕ್ಕು ಬಾಧ್ಯತೆಗಳ ರಕ್ಷಣೆಯ ಆಶ್ವಾಸನ ಪಡೆಯಲಿರುವರು.

ಮುಧೋಳದ ಅಧಿಪತಿಗಳು ಮುಂಬಯಿಯಲ್ಲಿ ಸರದಾರ ಪಟೇಲರ ಭೆಟ್ಟಿ ತೆಗೆದುಕೊಂಡು ತಮ್ಮ ಸಂಸ್ಥಾನವನ್ನು ಮುಂಬಯಿ ಪ್ರಾಂತದಲ್ಲಿ ವಿಲೀನಗೊಳಿಸಲು ತಾವು ಸಿದ್ಧರಿರುವದಾಗಿ ತಿಳಿಸಿದರು.

ವಾಡಿ ಅಧಿಪತಿಗಳು ಘೋಷಣೆಯೊಂದನ್ನು ಹೊರಡಿಸಿ ಸಂಸ್ಥಾನದಲ್ಲಿ ಸಂಪೂರ್ಣ ಹೊಣೆಗಾರ ಸರಕಾರ ಸ್ಥಾಪಿಸಲು ತಾವು ನಿಶ್ಚಯಿಸಿರುವದಾಗಿಯೂ ಒಂದು ತಿಂಗಳಲ್ಲಿ ಪ್ರಜೆಗಳು ಘಟನೆಯನ್ನು ತಯಾರ ಮಾಡಿ ಕೊಡಬೇಕಾಗಿಯೂ ಅದು ತಮ್ಮಿಂದ ಮಾನ್ಯವಾದ ಕೂಡಲೆ ಪ್ರಜೆಗಳಿಗೆ ಅಧಿಕಾರ ವರ್ಗಾಯಿಸುವದಾಗಿಯೂ ಹೇಳಿದರು.

ಆನೇಗುಂದಿಯಲ್ಲಿ ಮಲೇರಿಯಾ ರೋಗದಿಂದ ಜನ ಬಹಳ ಕರಗಹತ್ತಿದೆ. ಅದರಲ್ಲಿಯೂ ೧೫ ನೇ ತಾರೀಕು ಮಧ್ಯಾಹ್ನ ೧೨ ಗಂಟೆಗೆ ಇತ್ತಿಹಾದುಲ್ ಮುಸ್ಲಿಂ ಲಾರಿಯ ಸಹಾಯ ದಳವೊಂದು ಬಂದು ಜನರನ್ನು ಭಯಭೀತರನ್ನಾಗಿ ಮಾಡಿತು. ಮೂರು ಗಂಟೆಗಳ ವರೆಗೆ ದಳವನ್ನು ನದಿಯ ದಂಡೆಯ ಮೇಲೆ ನಿಲ್ಲಿಸಿದ್ದರಿಂದ ಜನ ಮತ್ತಷ್ಟು ಭ್ರಾಂತಗೊಂಡರು.

ಬಾರ್ಶಿ ತಾಲೂಕಿನಲ್ಲಿ ನಿಜಾಮರ ಸೀಮೆಯ ಹತ್ತರ ತಡವಳಗೆ ಎಂಬಲ್ಲಿ ಶ್ರೀ [illegible] ಇವರ ಹೊಲವನ್ನು ಪುಂಡರು ಹೊಕ್ಕು ಸುಮಾರು ಸಾವಿರ ರೂಪಾಯಿಗಳ ಒಂದು ಜೋಡು ಎತ್ತನ್ನು ಒಯ್ದಿರುವರು.

ದಾವಣಗೇರಿಯಲ್ಲಿ ಆಹಾರ ಪರಿಸ್ಥಿತಿ ದಿನದಿನಕ್ಕೆ ಕಠಿನವಾಗುತ್ತ ನಡೆದಿದೆ. ಡಿಸೆಂಬರದಲ್ಲಿ ದಿನಕ್ಕೆ ೮ ಔಂಸ ಪ್ರಮಾಣದಂತೆ ಕಾಳು ಸಿಗದಿದ್ದರೂ ಈ ಎರಡು ತಿಂಗಳ [illegible] ದಿನಕ್ಕೆ ೮ ಔಂಸಿನಂತೆ ಬಿದ್ದಿದೆ. ಜನರು ಇದರಿಂದ ಗೋಳಾಡುತ್ತಿದ್ದಾರೆ. [illegible] ಪರಿಸ್ಥಿತಿ [illegible] ಜನರ ಅಭಿಪ್ರಾಯ.

ಕೊಲ್ಹಾಪುರ [illegible] ಶ್ರೀ [illegible] ಬಾಗಿಲ ಮತ್ತು [illegible] ಗಳೊಳಗಿನ [illegible] ಪ್ರೋತ್ಸಾಹ [illegible] ಮಹಾರಾಷ್ಟ್ರ [illegible] ಮೇಲೆ ಕೂಡ ಬಹಳ [illegible] ತಿದೆಯೆಂದು ಶ್ರೀ ಬಿ. ಬಿ. [illegible] ಹೇಳಿಕೆಯಲ್ಲಿ ಹೇಳಿದರು. [illegible] ಮತ್ತು [illegible] ಈ [illegible] ಮಂತಾಗಬೇಕೆಂದೂ [illegible] ಹೇಳಿದರು.

ಮುಂಬಯಿ

ಮುಂಬಯಿಯಲ್ಲಿಯ ಎಲ್ಲ ಜಾತಿಗಳ ಪ್ರತಿನಿಧಿಗಳು ಸೇರಿ ಜಾತೀಯ ಸೌಹಾರ್ದವನ್ನು ಕಾಯ್ದುಕೊಳ್ಳುವ ಪ್ರತಿಜ್ಞೆ ಮಾಡಿದರು. ಮುಂಬಯಿ ಮೇಯರರು ಈ ಸಭೆ ಕರೆದಿದ್ದರು. ಸರದಾರ ವಲ್ಲಭಭಾಯಿ ಪಟೇಲರು ಈ ಸಭೆಯ ಉದ್ಘಾಟನ ಮಾಡಿದರು. ಅವರು ಮಾತನಾಡುತ್ತ ನಗರದಲ್ಲಿ ತಾತ್ಪೂರ್ತಿಕ ಶಾಂತಿ ಕಂಡುಬಂದರೂ ಅದು ಎಂದು ಸ್ಫೋಟವಾಗುವದೋ ಹೇಳಬರುವಂತಿಲ್ಲ. ನಿಜವಾದ ಸೌಹಾರ್ದ ಭಾವ ನೆಲಸಬೇಕೆಂದು ನುಡಿದರು.

ಮುಂಬಯಿ ಪ್ರಾಂತದಲ್ಲಿ ಸಾರ್ವಜನಿಕ ಹಿತಕ್ಕಾಗಿ ಮತ್ತು ಧಾರ್ಮಿಕ ಉದ್ದೇಶದಿಂದ ಸ್ಥಾಪಿಸಲ್ಪಟ್ಟ ಟ್ರಸ್ಟ ಮತ್ತು ಎಂಡಾವಮೆಂಟುಗಳ ಆಡಳಿತ ವಿಚಾರುವದನ್ನು ಪರಿಶೀಲಿಸಲು ಮುಂಬಯಿ ಸರಕಾರದವರು ನ್ಯಾ. ಎಸ್. ಆರ್. ತೆಂಡೂಲಕರರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ನೇಮಿಸಿದ್ದಾರೆ.

ಮಹಾತ್ಮರು ಉಪವಾಸ ನಿಲ್ಲಿಸಿದ್ದು ಲೇಶ ಸಮಾಧಾನವಾಗಿದ್ದರೂ ಅವರ ಉಪವಾಸಕ್ಕೆ ಕಾರಣವಾಗಿದ್ದ ಸಮಸ್ಯೆಗಳೆಲ್ಲ ಪರಿಹಾರವಾಗಿಲ್ಲ, ಹಿಂದುಸ್ಥಾನದ ಜನರೇ ಅವನ್ನು ಸಮರ್ಪಕವಾಗಿ ಬಿಡಿಸಬೇಕಾಗಿದೆ. ಮಹಾತ್ಮರು ಇನ್ನೊಂದು ಉಪವಾಸ ಕೈಕೊಳ್ಳುವಂತೆ ಪರಿಸ್ಥಿತಿಯನ್ನು ಉಂಟುಮಾಡಬಾರದು ಬೇಡ ಎಂದು ಮೊದಲಾಗಿ ಸರದಾರ ವಲ್ಲಭಭಾಯಿ ಪಟೇಲರು ಶಿವಾಜಿ ಪಾರ್ಕದಲ್ಲಿ ನೆರೆದ ಪ್ರಚಂಡ ಸಾರ್ವಜನಿಕ ಸಭೆಯಲ್ಲಿ ಹೇಳಿದರು.

ಮುಂಬಯಿ ನಗರದ ಪ್ರೌಢಶಿಕ್ಷಣ ಸಮಿತಿಯ ಪರ ೭ನೆಯ ಸಾಕ್ಷರತಾ ಸಪ್ತಾಹದ ಪರಿಷತ್ತಿಗೆ ಮಾನ್ಯ ಮುರಾರಜಿ ದೇಸಾಯರು ಸಂದೇಶ ಕಳಿಸಿ, ರಾಷ್ಟ್ರ ನಿರ್ಮಾಣಕ್ಕೆ ಈ ಕಾರ್ಯ ಅತ್ಯಂತ ಅವಶ್ಯವಾಗಿದೆಯೆಂದೂ ಸ್ವತಂತ್ರ ಹಿಂದುಸ್ಥಾನದ ಕಳಸವಿದನ್ನು ಸಾರ್ವತ್ರಿಕ ಶಿಕ್ಷಣದ ಮೇಲೆ ನಿಲ್ಲಿಸಿದರೆ ಮಾತ್ರ ಅದು ಭದ್ರವಾಗಿರುವದೆಂದೂ ಅಂದಿದ್ದಾರೆ

ಅಹಮ್ಮದ ನಗರದ ಕಪ್ಪಡ ಬಜಾರದಲ್ಲಿ ಸುಟ್ಟ ೫ ಹರಿಜನ ಅಂಗಡಿಗಳಿಗೆ ಪರಿಹಾರ ಧನವೆಂದು ಮುಂಬಯಿ ಸರಕಾರವು ೪೦೭೦ ರೂಪಾಯಿ ಕೊಟ್ಟಿದೆ.

ಹಿಂದುಸ್ಥಾನ ಸರಕಾರದ ಉಪ ಮುಖ್ಯ ಮಂತ್ರಿಗಳಾದ ಸರದಾರ ವಲ್ಲಭಭಾಯಿ ಪಟೇಲರು ಪತ್ರಿಕಾ ಪರಿಷತ್ತಿನಲ್ಲಿ ಸಂಯುಕ್ತ-ಕರ್ನಾಟಕದ ಪ್ರತಿನಿಧಿಯು ಕೇಳಿದ ಪ್ರಶ್ನೆಗೆ ಉತ್ತರ ಕೊಡುತ್ತ, ಆಂಧ್ರ ಪ್ರಾಂತೀಕರಣದ ನಿರ್ಣಯವನ್ನು ಹಿಂದುಸ್ಥಾನ ಕೇಂದ್ರ ಸರಕಾರದವರು ಇತ್ತೀಚೆ ಮಾಡಿದ್ದಾರೆಂದೂ ತಾವು ಆ ಕಾಲಕ್ಕೆ ದಿಲ್ಲಿಯಲ್ಲಿರಲಿಲ್ಲವೆಂದೂ ಹೇಳಿದರು. ಅಲ್ಲದೆ, ಈಗಾಗಲೇ ಆಂಧ್ರ ಪ್ರಾಂತೀಕರಣದ ನಿರ್ಣಯವಾಗಿ ಹೋಗಿರುವದರಿಂದ ಆಂಧ್ರದೊಡನೆಯೇ ಕರ್ನಾಟಕ ಪ್ರಾಂತ ನಿರ್ಮಾಣದ ಪ್ರಶ್ನೆಯೇ ಉದ್ಭವವಾಗುವದಿಲ್ಲವೆಂದೂ ಅವರು ತಿಳಿಸಿದರು. ಕ. ಪ್ರಾಂ. ಕಾಂ. ಕಮೀಟಿಯ ಗೊತ್ತುವಳಿ ತಮಗೆ ಗೊತ್ತೆ ಎಂದು ಕೇಳಲು ಅವರು ಅದಕ್ಕೆ ಉತ್ತರವನ್ನೇ ಕೊಡಲಿಲ್ಲ.

ಮುಂಬಯಿ ಸಾಹುಕಾರಿಕೆ ಕಾನೂನು (೧೯೪೬) ಇದೀಗ ಮುಂಬಯಿ ಪ್ರಾಂತದಲ್ಲಿ ೧೯೪೭ ನವಂಬರ ೧೭ನೇ ತಾರೀಖಿನಿಂದ ಜಾರಿಯಲ್ಲಿ ಬಂದಿರುವದು. ಕಾರಣ ಸಾಹುಕಾರಿಕೆ ಮಾಡುವವರು ಈ ಕಾನೂನಿನ ಪ್ರಕಾರ ಲಾಯಸೆನ್ಸ ಪಡೆಯಲೇಬೇಕು. ಈ ವರೆಗೆ ಲಾಯಸೆನ್ಸ ಪಡೆದವರು ಕೂಡಲೇ ಅರ್ಜಿ ಮಾಡಬೇಕು. ಲಾಯಸೆನ್ಸ ಇಲ್ಲದೆ ಸಾಹುಕಾರಿಕೆ ಮಾಡಿದರೆ ದಂಡಕ್ಕೆ ಗುರಿಯಾಗುವರು ಎಂದು ಸರಕಾರೀ ಪ್ರಕಟನೆ ಹೊರಟಿದೆ.

ಮದ್ರಾಸ

ಸ್ಕೂಲಿನಿಂದ ಹೊರಹಾಕಿದ ನಾಮಪತ್ರ ತರಗತಿಗಿಂತ ಕಡಿಮೆಯವರೆಂದು ಕುಡಿ ಬಂದ ವಿದ್ಯಾರ್ಥಿಗಳಿಗೆ ಧಾರ್ಮಿಕ ಶೋಧ ದೇಣಿಗೆಯ ರೂಢಿಯನ್ನು ತೆಗೆದುಹಾಕಬೇಕೆಂದು ಇಲ್ಲಿ ೨೫ ವರ್ಷದ ಓರ್ವ ಅಂಧ ವಿದ್ಯಾರ್ಥಿಯು ೬ ದಿನಗಳಿಂದ ಉಪವಾಸ ಕೈಕೊಂಡಿದ್ದಾನೆ.

ಮದ್ರಾಸ ಪ್ರಾಂತದಲ್ಲಿ ಈಗ ಉಂಟಾದ ಆಹಾರದ ಪರಿಸ್ಥಿತಿ ಈ ತಿಂಗಳ ಕೊನೆಯ ವರೆಗೆ ಉಳಿಯ ಬಹುದು. ಅಷ್ಟರಲ್ಲಿ ಅದರೊಳಗಿಂದ ಪಾರಾಗುವ ವಿಶ್ವಾಸವಿದೆಂದು ಆಹಾರ ಮಂತ್ರಿಗಳಾದ ಡಾ. ರಾಜನ್ನರು ಆಕಾಶವಾಣಿಯ ಭಾಷಣದಲ್ಲಿ ಹೇಳಿದರು.

ಹೈದರಾಬಾದದಲ್ಲಿ ಹಿಂದುಸ್ಥಾನ ಸರಕಾರದ ಏಜೆಂಟ ಜನರಲ್ಲರಾದ ಶ್ರೀ. ಕೆ. ಎಂ. ಮುನಶಿಯವರು ಹೈದರಾಬಾದ ಮದ್ರಾಸ ಗಡಿಯಲ್ಲಿ ಆಗಮಿಸಿ ಪರಿಸ್ಥಿತಿಯನ್ನು ಪರಿಶೀಲಿಸಿದರು



ಯುಕ್ತಪ್ರಾಂತ

ಅಲಹಾಬಾದದಲ್ಲಿ ಗುರುಗೋವಿಂದ ಸಿಂಗರ ವರ್ಧಂತಿಯ ಮೆರವಣಿಗೆಯ ಕಾಲಕ್ಕೆ ಗಲಭೆ ಸಂಭವಿಸಿ ೪ ಜನರು ಸತ್ತಿದ್ದು ೮—೧೦ ಜನರಿಗೆ ಗಾಯಗಳಾಗಿವೆ. ಕೆಲವು ಅಂಗಡಿಗಳು ಸುಡಲ್ಪಟ್ಟಿವೆ.

ಅಲಹಾಬಾದದಲ್ಲಿಯ ಸೀಖರ ಮೇಲೆ ೩ ಲಕ್ಷ ೩೦ ಸಾವಿರ ಸಾಮೂಹಿಕ ದಂಡ ಹೇರಲಾಗಿದೆ. ಮೇಲ್ಕಾಣಿಸಿದ ಗಲಭೆಗೆ ಸೀಖರೇ ಕಾರಣರೆಂದ ಜಿಲ್ಲಾ ಮ್ಯಾಜಿಸ್ಟ್ರೇಟರು ಹೇಳಿದರು.

ಬಿಹಾರ

ಬಿಹಾರದ ಪುನರ್ವಸತಿ ಖಾತೆಯ ಮಂತ್ರಿಗಳಾದ ಡಾ. ಸಯ್ಯದ ಮಹಮ್ಮದರು ಲಿಯಾಖತ ಅಲಿಖಾನ ಮಮದೋತಖಾನ, ಗಜನಫರ ಅಲಿಖಾನ, ಫಿರೋಜಖಾನ ನೂನ ಮತ್ತು ಮಿಯಾ ಇಫ್ತಿಕಾರ ಉದ್ದೀನ ಮೊದಲಾದವರಿಗೆ ಈ ರೀತಿ ತಂತಿ ಕಳಿಸಿದ್ದಾರೆ.

“ಹಿಂದು ಮುಸಲ್ಮಾನರಲ್ಲಿದ್ದ ಅವಿಶ್ವಾಸ ಅಂಜಿಕೆಗಳಿಂದಾಗಿ ಉದ್ಭವಿಸಿದ ಕ್ರಿಯ ಪ್ರತಿಕ್ರಿಯೆಗಳ ದುಷ್ಪರಿಣಾಮವನ್ನು ತಡೆಯಲು ಮಹಾತ್ಮರ ಆಧ್ಯಾತ್ಮಿಕ ಪ್ರಯತ್ನವೇ ಅವರ ಉಪವಾಸವು. ಮುಸಲ್ಮಾನರು ತಮ್ಮ ಕಟ್ಟ ಮಸೋದೆಗಳನ್ನು ಕೋರಿದ ಸನ್ನಾಗರಿಕ್ಕೆ ಹತ್ತಿ ಈ ನಾಚಿಕೆಗೇಡು ಪರಿಸ್ಥಿತಿಯನ್ನು ಹೋಗಲಾಡಿಸಬೇಕೆಂದು ನಾನು ನನ್ನ ಜ್ಞಾತಿಬಾಂಧವರಿಗೆ ಬೇಡಿಕೊಳ್ಳುತ್ತೇನೆ.”

ಪೂರ್ವ ಪಂಜಾಬ

ಜಾತೀಯ ಗಲಭೆಗೆ ಗುರಿಯಾಗಿ ಹಾಳಾಗಿ ಹೋಗಿರುವ ಪೂರ್ವ ಪಂಜಾಬದ ಹಳ್ಳಿಗಳೊಳಗಿನ ಮನೆಗಳನ್ನು ಮತ್ತೆ ವಾಸಯೋಗ್ಯವಾಗಿ ಮಾಡಲೋಸುಗ ಪೂರ್ವ ಪಂಜಾಬ ಸರಕಾರವು ೧೪ ಲಕ್ಷ ೨೫ ಸಾವಿರ ರೂಪಾಯಿಗಳನ್ನು ಸಾಲ ರೂಪದಲ್ಲಿ ಹಂಚಬೇಕೆಂದು ನಿರ್ಧರಿಸಿದೆ. ಪ್ರತಿಯೊಂದು ಮನೆಗೆ ಒಂದು ಸಲಕ್ಕೆ ಒಂದು ನೂರು ರೂಪಾಯಿಗಿಂತ ಹೆಚ್ಚಿಗೆ ಕೊಡಲಾಗುವದಿಲ್ಲ.

ಹೈದರಾಬಾದ

ಹೈದರಾಬಾದ ಸಂಸ್ಥಾನದಲ್ಲಿ ಕರನಿರಾಕರಣೆಯ ಮತ್ತು ಲೇವಿ ನಿರಾಕರಣೆಯ ಚಳವಳಿಯು ದಿನದಿನಕ್ಕೆ ಹೆಚ್ಚುತ್ತ ನಡೆದಿದೆ. ನಿಜಾಂ ಸೈನಿಕರ ಅತ್ಯಾಚಾರಗಳನ್ನು ಎದುರಿಸಲು ರೈತರೂ ಹಳ್ಳಿಗರೂ ಸಂಘಟಿತರಾಗುತ್ತಿದ್ದಾರೆ.

ಜಾಜಪುರ ಮುಂತಾದ ಹಳ್ಳಿಗಳಲ್ಲಿ ಲೇವಿ ಸಂಬಂಧದಲ್ಲಿ ಅಧಿಕಾರಿಗಳು ಲೂಟಿ ನಡೆಸಲು ಪೋಲೀಸರಿಗೆ ಅಪ್ಪಣೆ ಕೊಟ್ಟರು. ಕೂಡಲೆ ರೈತರು ಕವಣೆಯಿಂದ ಕಲ್ಲಿನ ಮಳೆ ಸುರಿಸಲು ಪೋಲೀಸರು ದಿಕ್ಕಾಪಾಲಾಗಿ ಓಡಿಹೋದರು.

ಮುಶಗೇರಿ ನೀಲೋಗಲ್ಲಿಯಲ್ಲಿ ನಿಜಾಂ ಸೈನಿಕರು ಒಬ್ಬನನ್ನು ಹಿಡಿದು ಅವನ ಮೈ ಸುಟ್ಟಿರುವರು.

ಮೂಲಕಿಗಿ (ಕುಷ್ಟಗಿ)ಯಲ್ಲಿ ಸೈನಿಕರು ಶ್ರೀ ಸಿಂಗಪ್ಪ ಅಂಗಡಿಯವರ ಮನೆ ಲೂಟಿ ಮಾಡಿಕೊಂಡು ಹೋಗಿರುವರು ೫೦೦೦ ರೂ ಗಳ ಹಾನಿಯಾಗಿದೆ. ಸೈನಿಕರು ನೋಯುತ್ತಿರುವ ಆಕಳುಗಳನ್ನು ದಿನವೂ ಹೊಡೆದುಕೊಂಡುಹೋಗಿ ಅವುಗಳ ವಧೆಮಾಡುತ್ತಿದ್ದಾರೆ.

ರಾಚಲಬಂಡಿಯಲ್ಲಿ ಮುಸಲ್ಮಾನ ಗುಂಡರು ಓರ್ವ ಮುದುಕಿಗೆ ಗುಂಡುಹಾಕಿ ಅವಳ ಮೈ ಮೇಲಿದ್ದ ೧೬ ತೊಲಿ ಬಂಗಾರ ದೋಚಿಕೊಂಡರು.

ಒಕ್ಕೂಟದ ಜಾಗಿಎಂಬ ಊರಿನಿಂದ ಹೊಸೂರಿಗೆ (ಮದ್ರಾಸ) ಬರುತ್ತಿದ್ದ ನಾಗಯ್ಯನೆಂಬ ವರ್ತಕನ ಹೆಂಡತಿಯು ಬಳಿಗಿದ್ದ ೧೧ ಸೇರು ಬಂಗಾರದ ಸಾಮಾನುಗಳನ್ನು ಸಂಸ್ಥಾನದ ಹೊರಗೆ ಒಯ್ಯುವ ಆರೋಪದ ಮೇಲೆ ಕಸ್ಟಮ್ಸ್ ದಗರಿಯವರು ಕಸಿದುಕೊಂಡಿದ್ದಾರೆ.

ವಡು. ಶ್ರೀ. ಮುನಶಿಯವರ ಕಾರ್ಯದಲ್ಲಿ ಹೈದರಾಬಾದ ಸರಕಾರದವರು ಪೂರ್ಣಸಹಾಯ ನೀಡಲು ಒಪ್ಪಿದುದಕ್ಕಾಗಿ ಹಿಂದುಸ್ಥಾನ ಸರಕಾರದವರು ಶ್ರೇಯಸರಿಗೆ ತಿಳಿಸಿದ್ದಾರೆ.

ಹೊಸದಿಲ್ಲಿ

ಶಿಕ್ಷಕರ ಕೊರತೆಯನ್ನು ನಿವಾರಿಸಲು ಪ್ರಮಾಣಪತ್ರ ಪಡೆದ ಮೊದಲು ವಿದ್ಯಾರ್ಥಿಗಳು ಶಿಕ್ಷಣ ಕ್ಷೇತ್ರದಲ್ಲಿ ನಿರ್ದಿಷ್ಟ ಅವಧಿಯ ವರೆಗೆ ಕೆಲಸ ಮಾಡಬೇಕೆಂದು ನಿರ್ಬಂಧಗೊಳಿಸುವದಾಗಿ ದಿಲ್ಲಿಯಲ್ಲಿ ನೆರೆದ ಅಖಿಲ ಭಾರತ ಶಿಕ್ಷಣ ಪರಿಷತ್ತಿನ ಅಧ್ಯಕ್ಷಸ್ಥಾನದಿಂದ ಹಿಂದುಸ್ಥಾನ ಸರಕಾರದ ಶಿಕ್ಷಣ ಮಂತ್ರಿ ಮೌಲಾನಾ ಅಬುಲಕಲಂ ಅಝಾದರು ಸೂಚಿಸಿದರು.

ಭದ್ರತಾ ಮಂಡಲದ ಸಭೆಗೆ ಹೋದ ಹಿಂದುಸ್ಥಾನ ಪಾಕಿಸ್ತಾನಗಳ ಪ್ರಮುಖ ಪ್ರತಿನಿಧಿಗಳು ಖಾಸಗಿ ರೀತಿಯಿಂದ ಮಂಡುಮೋಜಿನ ಸಭೆಯಲ್ಲಿ ಸೇರಿದ್ದರು. ಕಾಶ್ಮೀರ ಸಮಸ್ಯೆಯ ಚರ್ಚೆ ಮಾಡಿದರು.

ಪಾಕಿಸ್ತಾನದ ವಿದೇಶ ಮಂತ್ರಿಗಳಾದ ಸರ ಜಫ್ರುಲ್ಲಾಖಾನರ ಸುದೀರ್ಘ ಭಾಷಣ ಕೇಳಿಕೊಂಡ ಬಳಿಕ ಭದ್ರತಾ ಮಂಡಳವು ಕಾಶ್ಮೀರದ ಬಗ್ಗೆ ಪರಿಸ್ಥಿತಿಯು ಹದಗೆಡದಂತೆ ವರ್ತಿಸಬೇಕೆಂದು ಹಿಂದುಸ್ಥಾನ ಪಾಕಿಸ್ತಾನಗಳಿಗೆ ಆದೇಶಿಸುವ ಗೊತ್ತುವಳಿ ಸ್ವೀಕರಿಸಿತು.

ಮಹಾತ್ಮರು ಉಪವಾಸವನ್ನು ನಿಲ್ಲಿಸುವಕಾಲಕ್ಕೆ ಮಾಡಿದ ಪ್ರತಿಜ್ಞೆಯನ್ನು ಕಾರ್ಯಕಾರಿಯಾಗಿ ಮಾಡಲೋಸುಗ ದಿಲ್ಲಿಯ ಕೇಂದ್ರ ಶಾಂತತಾ ಸಮಿತಿಯು ತಾ. ೧೯ ರಂದು ಸಂಜೆಗೆ ಡಾ. ರಾಜೇಂದ್ರಪ್ರಸಾದರ ಮನೆಯಲ್ಲಿ ಸಭೆಸೇರಿ ವಿವಿಧ ಕಾರ್ಯಗಳಿಗಾಗಿ ಉಪಸಮಿತಿಗಳನ್ನು ರಚಿಸಿತು.

ಹಿಂದುಸ್ಥಾನ ಸರಕಾರದವರು ಹಿಂದುಸ್ಥಾನದ ಹೊರಗೆ ಪಾಕಿಸ್ತಾನವನ್ನೊಳಗೊಂಡು ಯಾವದೇಶಕ್ಕೂ ಅರಳೆಯ ನಿರ್ಯಾತ ಮಾಡಕೂಡದೆಂದು ವಿಧಿಸಿದ್ದಾರೆ. ಆದರೆ ಈ ನಿರ್ಬಂಧಾಜ್ಞೆಯು ಬಂಗಾಲ, ದೇಶಿ, ಉಮರಾ, ಮಥಿಯಾ, ಅಸಾಮು, ಮತ್ತು ಕೋಮಿಲ್ಲಾ ಜಾತಿಯ ಅರಳೆಯ ನಿರ್ಯಾತಕ್ಕೆ ಅನ್ವಯಿಸುವದಿಲ್ಲವೆಂದು ಸರಕಾರೀ ಪ್ರಕಟನೆ ಸಾರುತ್ತದೆ.

ಹಿಂದುಸ್ಥಾನದ, ಶಿಕ್ಷಣ ಮಂತ್ರಿಗಳಾದ ಮೌಲಾನಾ ಅಬುಲಕಲಂ ಅಜಾದರ ಮೈಗೆ ನೆಮ್ಮದಿ ಇಲ್ಲದ್ದರಿಂದ ಡಾ. ಬಿಧಾನಚಂದ್ರ ರಾಯರು ಅವರ ಪ್ರಕೃತಿ ಪರೀಕ್ಷಿಸಿ ಸಂಪೂರ್ಣ ವಿರಾಮ ಅವಶ್ಯವೆಂದು ಸೂಚಿಸಿದ್ದಾರೆ. ಮಿತಿಮೀರಿ ಕೆಲಸ ಮಾಡಿದ್ದರಿಂದ ಮೌಲಾನಾರ ಪ್ರಕೃತಿ ಕೆಟ್ಟಿದೆಯೆಂದ ಡಾಕ್ಟರರ ಅಭಿಪ್ರಾಯ.

ಹಿಂದುಸ್ಥಾನವು ವಿಭಜನೆಯ ವಿರುದ್ಧ ಒಳಸಂಚು ನಡೆಸಿದೆ ಎಂದು ಪಾಕಿಸ್ತಾನವು ಭದ್ರತಾಮಂಡಲದೆದುರು ನಮ್ಮ ಮೇಲೆ ಹೊರಿಸಿದ ಆರೋಪವು ಸರ್ವಥಾ ಸುಳ್ಳಿದೆ. ವಿಭಜನೆಯನ್ನು ವಿರೋಧಿಸುವದಂತೂ ಒತ್ತಟ್ಟಿಗಿರಲಿ ಭಾರತವು ಪುನಃ ಅಖಂಡವಾಗಲಿಎಂದು ಪಾಕಿಸ್ತಾನವು ಕೇಳಿಕೊಂಡರೂ ನಾವದನ್ನು ಗಣಿಸುವದಿಲ್ಲ. ಇಂಥ ವಿಚಾರವನ್ನೇ ನಾವು ಸ್ವೈರವು ಎಂದು ಪಂ. ನೆಹರೂ ಅವರು ತಾ. ೧೯ ರಂದು ಮಹಾತ್ಮರ ಪಾರಣೆಯ ಬಗ್ಗೆ ಸಂತೋಷವ್ಯಕ್ತಪಡಿಸಲು ನೆರೆದಿದ್ದ ಪ್ರಚಂಡ ಸಾರ್ವಜನಿಕ ಸಭೆಯಲ್ಲಿ ಹೇಳಿದರು.

ಪಶ್ಚಿಮ ಪಾಕಿಸ್ತಾನದಿಂದ ಹಿಂದು ಶೀಖರನ್ನು ಸ್ಥಳಾಂತರಿಸುವ ಕೆಲಸವು ಮುಗಿದಂತಾಗಿದೆ. ಆದರೆ ಅಪಹೃತ ಸ್ತ್ರೀಯರ ಶೋಧವಿನ್ನೂ ಪೂರ್ಣವಾಗಿಲ್ಲ. ಅವರನ್ನು ಹುಡಿಕಿ ವಿನೋದಕನಿಗೊಳಿಸಿ ಮರಳಿ ಮನೆಗಳಲ್ಲಿ ಸೇರಿಸಿಕೊಳ್ಳುವದು ನಮ್ಮ ಧರ್ಮವಾಗಿದೆ. ಅವರ ಮೇಲೆ ಕಲಂಕಾರೋಪ ಹೊರಿಸಕೂಡದು. ಈ ಅಪಹೃತ ಸ್ತ್ರೀ ಶೋಧದಲ್ಲಿ ಸಾರ್ವಜನಿಕರು ಸರಕಾರದೊಡನೆ ಸಹಕರಿಸಬೇಕೆಂದು ಮೊದಲಾಗಿ ಭಾರತ ಸರಕಾರದ ಪುನರ್ವಸತಿ ಮಂತ್ರಿ ಡಾ. ಶ್ಯಾಮಪ್ರಸಾದರು ಬಿನ್ನಹ ಹೊರಡಿಸಿದ್ದಾರೆ.

ಹೈದರಾಬಾದವು ಪಾಕಿಸ್ತಾನಕ್ಕೆ ಈಗಾಗಲೇ ಕೊಟ್ಟ ೩೦ ಕೋಟಿ ರೂಪಾಯಿ ಸಾಲವಲ್ಲದೆ, ಇನ್ನೂ ೪೦ ಕೋಟಿ ರೂ ಸಾಲ ಕೊಡಲಿದೆಯೆಂದು ಲಾಹೋರದ ಸಿವಿಲ್ ಮತ್ತು ಮಿಲಿಟರಿ ಗೆಜೆಟ್ ಪತ್ರಿಕೆಯು ವರದಿಮಾಡುತ್ತದೆ. ಈ ೪೦ ಕೋಟಿ ರೂಪಾಯಿಗಳನ್ನು ಹಿಂದುಸ್ಥಾನ ಸರಕಾರದೊಡನೆ ವಿಚಾರ ವಿನಿಮಯಮಾಡಿ ನಂತರ ಕೊಡಲಿದೆಯೆಂದು ಆ ವರದಿಯಲ್ಲಿದೆ.

ಇಂದೂರಿನ ಮಹಾರಾಜರು ಮಧ್ಯ ಭಾರತ ಹಿಂದೀ ಸಾಹಿತ್ಯ ಸಮ್ಮೇಲನದ ೩೩ನೆಯ ಅಧಿವೇಶನವನ್ನು ಉದ್ಘಾಟಿಸುತ್ತ, ದೇವನಾಗರಿ ಲಿಪಿಯ ಹಿಂದೀ ಭಾಷೆಯು ಇನ್ನು ಮೇಲೆ ಇಂದೂರ ಸಂಸ್ಥಾನದ ಸರಕಾರಿ ಭಾಷೆಯಾಗುವದೆಂದು ಜಾಹೀರ ಮಾಡಿದರು.

ಏಳು ದಕ್ಷಿಣೀ ಸಂಸ್ಥಾನಗಳ ಅರಸರು ಮತ್ತು ಪ್ರತಿನಿಧಿಗಳು ಹಿಂದುಸ್ಥಾನ ಸರಕಾರದ ಸಂಸ್ಥಾನ ಖಾತೆಯ ಮಂತ್ರಿಗಳಾದ ಸರದಾರ ವಲ್ಲಭಭಾಯಿ ಪಟೇಲರನ್ನು ತಾ. ೧೯ರ ಮುಂಜಾನೆ ಕಂಡು ದಕ್ಷಿಣೀ ಸಂಸ್ಥಾನಗಳನ್ನು ಮುಂಬಯಿ ಪ್ರಾಂತದಲ್ಲಿ ಲೀನ ಗೊಳಿಸುವ ಬಗ್ಗೆ ವಿಚಾರ ವಿನಿಮಯ ಮಾಡಿದರು.

ಕಾಠೇವಾಡ ದೊಳಗಿನ ಸಣ್ಣ ಸಣ್ಣ ಸಂಸ್ಥಾನಗಳೆಲ್ಲ ಒಟ್ಟಗೂಡಿ ಸೌರಾಷ್ಟ್ರ ಸಂಸ್ಥಾನಗಳ ಒಕ್ಕೂಟವನ್ನು ಸ್ಥಾಪಿಸಿ ಕೊಳ್ಳಬೇಕೆಂದು ನಿರ್ಧರಿಸಿವೆ. ಈ ಬಗ್ಗೆ ಹೆಚ್ಚಿನ ವಿಚಾರ ವಿನಿಮಯಕ್ಕಾಗಿ ಈ ಸಂಸ್ಥಾನಗಳ ನರೇಂದ್ರರು ಸರದಾರ ವಲ್ಲಭಭಾಯಿಯವರನ್ನು ಕಾಣಲಿರುವರಾಗಿ ತಿಳಿಯುತ್ತದೆ.

ಬಡೋದಾ ಸಂಸ್ಥಾನವು ೧೬ ಕೋಟಿ ರೂಪಾಯಿ ವೆಚ್ಚದ ಯುದ್ಧೋತ್ತರ ಪುನರ್ನಿರ್ಮಾಣದ ಯೋಜನೆಯನ್ನು ಸಿದ್ಧಗೊಳಿಸಿದ್ದು ಇದನ್ನು ೧೧ ವರ್ಷಗಳಲ್ಲಿ ಮಾಡಿ ಮುಗಿಸುವ ನಿರ್ಧಾರ ಮಾಡಿರುವದಾಗಿ ತಿಳಿಯುತ್ತದೆ.

ದರಬಾರ ಗೋಪಾಲದಾಸ ದೇಸಾಯಿಯವರು ಬಡೋದಾ ಮಹಾರಾಜರಿಗೆ ಪತ್ರ ಬರೆದು ಹೊಣೆಗಾರ ಸರಕಾರವು ಜನತೆಯ ಹಕ್ಕು ಎಂದೂ ಅದನ್ನು ಪಡೆಯಲು ಜನರು ಸರ್ವವಿಧ ತ್ಯಾಗಕ್ಕೂ ಸಿದ್ಧರಿರುವರೆಂದೂ ಅರುಹಿದ್ದಾರೆ. ಬಡೋದಾ ಪ್ರಜಾಮಂಡಲದವರು ಶ್ರೀ ಗೋಪಾಲದಾಸರನ್ನು ಹೊಣೆಗಾರ ಸರಕಾರದ ಹೋರಾಟ ಸಾಗಿಸಿಕೊಂಡು ಹೋಗಲು ತಮ್ಮ ಧುರೀಣರನ್ನಾಗಿ ಆರಿಸಿಕೊಂಡಿದ್ದಾರೆ.

ಪಾಕಿಸ್ತಾನ

ಹಿಂದುಸ್ಥಾನದಿಂದ ಪಾಕಿಸ್ತಾನಕ್ಕೆ ಕಲ್ಲಿದ್ದಲಿ ಬರಲು ಪ್ರಾರಂಭಿಸಿದೆ. ಈ ತಿಂಗಳ ಪೂರ್ವಾರ್ಧದಲ್ಲಿ ಸ್ವಲ್ಪ ಸಹ ಕಲ್ಲಿದ್ದಲಿ ಬಂದಿರಲಿಲ್ಲ. ಈಗ ಪ್ರತಿದಿನ ೮೦ ವ್ಯಾಗೀನುಗಳಂತೆ ಬರಹತ್ತಿದೆ, ಇದರಂತೆ ಬಂದರೆ ಫೆಬ್ರುವರಿ ಕೊನೆಯೊಳಗಾಗಿ ಈಗ ಕಡಿಮೆಮಾಡಿದ ರೇಲ್ವೆ ಗಾಡಿಗಳ ಓಡಾಟವನ್ನು ಮತ್ತೆ ಪ್ರಾರಂಭಿಸಬಹುದು.

ಸಿಂಧದ ಮುಖ್ಯಮಂತ್ರಿಗಳಾದ ಎಂ. ಎ. ಖುರೋ ರವರು ಪತ್ರಿಕಾ ಪರಿಷತ್ತಿನಲ್ಲಿ, ಎರಡೂ ಜಾತಿಗಳಲ್ಲಿ ಸೌಹಾರ್ದವನ್ನುಂಟುಮಾಡಲೆಂದು ಮಹಾತ್ಮಾ ಗಾಂಧಿಯವರ ಘನವಾದ ಪ್ರಯತ್ನ ಸ್ತುತ್ಯವಾಗಿದೆಯೆಂದೂ ಅವರಿಗೆ ದೀರ್ಘಾಯುರಾರೋಗ್ಯಗಳು ಲಭಿಸಿ ಅವರ ಮಹಿಮೆಯಿಂದ ಹಿಂದುಸ್ಥಾನ ಪಾಕಿಸ್ತಾನಗಳಲ್ಲಿ ಜಾತೀಯ ಸೌಹಾರ್ದ ಬೆಳೆಯಲೆಂದೂ ಇದಕ್ಕಾಗಿ ನಾವೆಲ್ಲ ಪ್ರಾರ್ಥಿಸೋಣವೆಂದೂ ನುಡಿದರು.

ಪಾಕಿಸ್ತಾನದಲ್ಲಿ ಅರಿವೆಯ ಕೊರತೆಯು ಭೀಕರವಾಗಿದ್ದು ಕೂಬಾನದಿಂದ ಬಂದ ಸಕ್ಕರೆಯ ಬಟ್ಟೆಯ ಚೀಲಗಳನ್ನು ಅಂಗಿಗಳಿಗಾಗಿ ಕಾಯ್ದಿಡಬೇಕೆಂದು ಆಜ್ಞಾಪಿಸಲಾಗಿದೆ.

ಎಲ್ಲಪ್ರಾಂತಗಳ ಗವ್ಹರ್ನರರ ಸಭೆಯು ದಿಲ್ಲಿಯಲ್ಲಿ ಫೆಬ್ರುವರಿ ೨ ನೇ ೩ ನೇ ತಾ ಗೆ ಸೇರಲಿದೆ.

ಮಹಾತ್ಮರು ತಾ ೨೦ ರ ಸಾಯಂಪ್ರಾರ್ಥನಾ ಸಭೆಯಲ್ಲಿ ಭಾಷಣ ಮಾಡುತ್ತಿದ್ದಾಗ ಅವರಿಂದ, ೧೫ ಗಜದ ಅಂತರದಲ್ಲಿ ಕಚ್ಚಾಬಾಂಬೊಂದು ಸಿಡಿಯಿತು. ಯಾರಿಗೂ ಅಪಾಯವಾಗಿಲ್ಲ. ಮಹಾತ್ಮರು ಎಳ್ಳಷ್ಟೂ ವಿಚಲಿತರಾಗದೆ ತಮ್ಮ ಭಾಷಣ ಮುಂದರಿಸಿದರು.

ಹಿಂದುಸ್ಥಾನದಲ್ಲಾಗಲೀ ಪಾಕಿಸ್ತಾನದಲ್ಲಾಗಲೀ ಮುಸಲ್ಮಾನರಿಗೆ ಮಹಾತ್ಮಾ ಗಾಂಧಿಯವರಿಗಿಂತ ಹೆಚ್ಚಿನ ಸ್ನೇಹಿತರು ದೊರೆಯಲಾರರೆಂದು ಬರೇಲಿಯ ಮುಸಲ್ಮಾನ ಧರ್ಮಗುರು ಶಹಾಮಹಮ್ಮದ ಖಾಸಿಅಸ್ಸುಬುದಿಯಾ ಅವರು ಸಾರಿ ಇದೇ ಅರ್ಥದ ತಂತಿಯನ್ನು ಮಹಾತ್ಮರಿಗೆ ಕಳುಹಿದರು.

ಮುಖ್ಯ ಮಂತ್ರಿ ಪಂ. ಜವಾಹರಲಾಲರು ತಮ್ಮ ನಿವಾಸದಲ್ಲಿಯೇ ಒಂದು ನಿರಾಶ್ರಿತ ಕುಟುಂಬಕ್ಕೆ ಆಶ್ರಯ ಕೊಡುವ ನಿರ್ಧಾರಮಾಡಿದ್ದಾಗಿ ತಿಳಿಯುತ್ತದೆ. ಸರಕಾರದ ಉಳಿದ ಅಧಿಕಾರಿಗಳೂ ಇದರ ಅನುಕರಣ ಮಾಡಬಹುದೆಂದು ಅಪೇಕ್ಷಿಸಲಾಗಿದೆ.

ಈ ವಾರದ ಕತೆ

ನಾಮು-ನೀಮು

ಹೆಗಡೆಯವರ ಕರೆಯ ಪ್ರಕಾರ ಹೊನ್ನನು ಹೊತ್ತು ಮೂಡುವದರೊಳಗಾಗಿ ಅವರ ಮನೆಗೆ ಬಂದಿದ್ದ. ತುಳಸಿಕಟ್ಟೆಯ ಬಳಿಗೆ ಎಷ್ಟೋ ಹೊತ್ತು ಕವಳ ಜಗಿಯುತ್ತ ಕುಳಿತ ಮೇಲೆ ಹೆಗಡೆಯವರು ಬಾಗಿಲು ತೆರೆದು ಹೊರಗೆ ಬಂದರು. ಕೈಯಲ್ಲಿ ಕವಳದ ಚೊಬ್ಬೆಯಿತ್ತು. ದೊಡ್ಡದೊಂದು ಹೊಗೆ ಸೊಪ್ಪಿನ ಚೂರು, ಇಡೀ ಅಡಿಕೆ ಎರಡು ಎಲೆ ಕೊಟ್ಟು ಅಪೂರ್ವ ಸತ್ಕಾರ ಮಾಡಿದರು. ಹೊನ್ನನಿಗೆ ಆನಂದವಾಯಿತು. ಇದಲ್ಲದೆ "ಹೊನ್ನ ಬಂದಿದ್ದಾನೆ. ಅವನಿಗೂ ಇಷ್ಟು ಅವಲಕ್ಕಿ ಚಹ..." ಎಂದು ಒಳಗೆ ಅಪ್ಪಣೆ ಕಳುಹಿಸಿದರು. ಅಂಗಳದಿಂದ ಹೊಳ್ಳಿಗೆ ಬರುವಂತೆ ಹೊನ್ನನಿಗೆ ಹೇಳಿದರು. ಇದನ್ನೆಲ್ಲ ನೋಡಿ ಹೊನ್ನ ತಾನೂ ಒಬ್ಬ ಮನುಷ್ಯನಾದೆನೆಂದು ತಿಳಕೊಂಡ.

ಹೊನ್ನನು ಅವಲಕ್ಕಿ ಜಗಿಯುತ್ತಿರುವಾಗಲೇ ಹೆಗಡೆಯವರು ಮಾತೆತ್ತಿದರು. "ಹೊನ್ನ, ಅನಾದಿ ಕಾಲದಿಂದಲೂ ನಮ್ಮ ನಿಮ್ಮ ಮನೆಗಳು ಸಾಗುತ್ತ ಬಂದಿವೆ. ನಿಮ್ಮ ಮನೆಯವರು ನಮ್ಮ ಮನೆಯವರ ಒಕ್ಕಲಾಗಿ ಬಂದ ಲಾಗಾಯ್ತು ನಮಗೂ ನಿಮಗೂ ಎಷ್ಟು ಸುಖವಾಗಿದೆಯೆಂದು ಬೇರೆ ಹೇಳಬೇಕಾಗಿಲ್ಲ. ನಮ್ಮ ಮನೆದೇವತೆ, ತೋಟದ ಚೌಡಿ, ಮಾಸ್ತಿ ಇವರೆಲ್ಲರ ಕೃಪೆಯಿಂದ ನಾವು ಒಡೆಯ ಒಕ್ಕಲಾಗಿ ಹಿತದಿಂದ ಜೀವನ ಸಾಗಿಸುತ್ತ ಬಂದಿದ್ದೇವೆ. ಪರಸ್ಪರ ನಾವು ಹೇಗೆ ನಡೆದುಕೊಳ್ಳುತ್ತಿದ್ದೇವೆನ್ನುವದನ್ನು ನಾನು ಹೇಳಬಾರದು..."

ಹೊನ್ನನು ಬಾಯಿ ಚಪ್ಪರಿಸುತ್ತ ಚಹ ಕುಡಿದ. ಅಷ್ಟು ರುಚಿಯಾದ ಚಹ ಸೆಟ್ಟರ ಅಂಗಡಿಯಲ್ಲಿಯೂ ಅವನು ಕುಡಿದಿದ್ದಿಲ್ಲ. ಆಸ್ರಿ ಮುಗಿಸಿ ಹೊನ್ನ ಲಕ್ ಅದ. ಹೆಗಡೆಯವರು ಮಾತು ಮುಂದುವರಿಸಿದರು. "ಈಗೇನೋ ಟೆನನ್ಸಿ ಬಿಲ್ಲು ಬಂದಿದೆಯಂತೆ. ರೈತ ಸಂಘ ಅಂತ ಏನೇನೋ ಆಗುತ್ತಿದೆಯಂತೆ. ನೀನೂ ಅದಕ್ಕೆ ಸೇರಿದ್ದಿ ಅಥವಾ ಸೇರುವವನಿದ್ದಿ ಎನ್ನುವ ಸುದ್ದಿ ಕೇಳಿದೆ. ನಿಜವೋ ಹೇಗೆ..."

ಹೊನ್ನನಿಗೆ ಸತ್ಯವನ್ನು ಹೇಳಲು ಭಿಡೆ. "ಇಲ್ರ... ಏನೋ ಅವ್ರೆಲ್ಲಾ ಬಂದು ಸಂಘಕ್ಕೆ ಸೇರು ಅಂದ್ರು... ಜಾತಿಗೌಡ್ರು ಅಂತ... ಹ್ಞೂ ಅಂದೆ"..." ಹೆಗಡೆಯವರು ಬಾಯಿ ಹಾಕಿದರು. "ಹೌದು. ಜಾತಿಯಗೌಡರು ಎಲ್ಲಾ ಬರುತ್ತಾರೆ. ನಿಮ್ಮ ಹಿತವನ್ನೆಲ್ಲಾ ಮಾಡುವವರು ತಾವೇ ಎಂದು ಹೇಳುತ್ತಾರೆ. ಆದರೆ ನೋಡು ವಿಚಾರ ಮಾಡಿ ನೋಡು. ಇಷ್ಟು ವರ್ಷ ಹಿತದಿಂದ ಬಾಳಿ ಬಂದಿದ್ದೇವೆ. ಗ್ರಾಮದೇವತೆ ನಮಗೆಲ್ಲ ಅನುಗ್ರಹ ಮಾಡಿದ್ದಾಳೆ. ಏನೋ ಸರಕಾರದವರು ಕಾಯದೆ ಮಾಡುತ್ತಾರೆಂದು ನಾವು ನಮ್ಮ ಪದ್ಧತಿಯನ್ನೆಲ್ಲ ಬಿಟ್ಟುಬಿಟ್ಟರೆ... ದೈವ ಕೈಬಿಡಬಾರದು ನೋಡು."

"ಹೌದ್ರ. ನೀವನ್ನೂದು ಖರೆ. ಮುಖ್ಯ ನಮ್ಗೆ ದೇವ್ರ ಕಬ್ಲಾಬೇಕು."

"ನಾನು ಹೇಳುವದೂ ಅದೇ. ಈ ನೆಲ ಮಣ್ಣು, ಹೊಲ ಎಲ್ಲ ನಶ್ವರ. ಹರಿಶ್ಚಂದ್ರನಂಥ ರಾಜನೇ ಹಾಗಾದನಂತೆ... ಮುಖ್ಯವಾಗಿ ನಮ್ಮ ನಿಮ್ಮ ಸಂಬಂಧ ಸರಿಯಾಗಿ ನಡೆದುಕೊಂಡು ಹೋಗಬೇಕು. ನಿನ್ನ ಅಪ್ಪ ಅಜ್ಜ ನನ್ನ ಅಪ್ಪ ಅಜ್ಜ ಎಲ್ಲ ಸ್ವರ್ಗದಲ್ಲಿದ್ದರೂ ತಾವು ಮಾಡಿದ ಮನೆ, ಗದ್ದೆ, ತೋಟಗಳೆಲ್ಲಾ ಎಂದಿನಂತೆ ಸರಿಯಾಗಿ ಸಾಗದಿದ್ದರೆ ದುಃಖಪಡುವರು. ನೀನು ಇತರ ಒಕ್ಕಲಿಗರ ಹಾಗೆ ಆಗಲಿಕ್ಕಿಲ್ಲವೆಂದು ನನ್ನ ಭರವಸೆಯಿದೆ."

"ಏನ್ಮಾಡೂದ್ರಿ? ಸಂಘದವ್ರ ಕಾಟ..."

"ಅವರು ಹೇಳಿದಂತೆ ಹ್ಞೂ ಅಂದು ಬಿಡು. ನೀನು ಮಾತ್ರ ಮೊದಲಿನಂತೆ ನಡೆದುಕೊಂಡು ಬಂದರಾಯಿತು."

"ಕಾಯ್ದೆಯೇ ಹಾಗೆ ಬಂದೀದು ಅಂತಾರೆಲ್ಲ."

ಹೌದೊ ಕಾಯ್ದೆ ಬಂದದೆ. ಆದರೆ ಅದಕ್ಕೂ ಹ್ಞೂಗುಟ್ಟಿ ಮೊದಲಿನ ಹಾಗೆ ನಮ್ಮ ನಿಮ್ಮ ಪರಸ್ಪರ ಪ್ರೀತಿ ನಡಿಸಿಕೊಂಡು ಬಂದರೆ ಅವರು ಅಲ್ಲ ಅನ್ನುತ್ತಾರೆಯೇ? ಇತರರಂತೆ ೧/೩ ವನ್ನೇ ಒಡೆಯರಿಗೆ ಕೊಟ್ಟನೆಂದು ಹೇಳಿ; ಎಂದಿನಿಂದಲೂ ನಡೆದು ಬಂದಂತೆ ೫ ರಲ್ಲಿ ೩ ನಮಗೆ ಕೊಟ್ಟರೆ ನಿನಗೂ ತಪ್ಪಿಕೊಳ್ಳಲು ಬರುತ್ತದೆ. ಮತ್ತೆ ನೋಡು. ನಿನ್ನ ಗದ್ದೆಯ ಭತ್ತದ ಅಕ್ಕಿಯನ್ನೇ ನಾವು ಸ್ವಯಂಭೂ ದೇವರ ನೈವೇದ್ಯದ ಅನ್ನಕ್ಕಾಗಿ ಉಪಯೋಗಿಸುತ್ತೇವೆ. ಅದರಲ್ಲಿ ಹೆಚ್ಚು ಕಡಿಮೆಯಾದರೆ... ನಾನು ಯಾಕೆ ಹೇಳಲಿ...?

"ಸರಿ. ನೀವನ್ನೂದು ಸರಿ..." ಮನಸ್ಸಿನ ಹೊಯ್ದಾಟದಲ್ಲಿ ಹೊನ್ನ ಎದ್ದ. ಹೆಗಡೆಯವರು ಮತ್ತೊಂದು ಕವಳ ಕೊಟ್ಟರು. ಕಟ್ಟಿ ಚಂಬುಗಳನ್ನು ತೊಳೆದು ಕವುಚಿ ಹಾಕಿ, ಹೊನ್ನ ಹೊರಟ. ಅಂಗಳದ ದೊಣಸೆಯ ವರೆಗೂ ಹೆಗಡೆಯವರು ಅದೇ ಮಾತಾಡುತ್ತ ಬಂದರು "ಮುಖ್ಯ ದೇವರು ಕೈಬಿಡಬಾರದು. ನನ್ನ ನಿನ್ನ ಪೂರ್ವಜರು ಸ್ವರ್ಗದಲ್ಲಿ ಶಾಂತಿಯಿಂದ ಇರಬೇಕು. ನಮ್ಮ ಪತ್ತು ಮೊದಲಿನಂತೆ ಬೆಳೆಯಬೇಕು" ಎಂದು ಹೆಗಡೆಯವರು ತಮ್ಮ ಭರತ ವಾಕ್ಯವನ್ನು ಹೇಳಿ ಮರಳಿದರು. "ಛೆ. ನಾಮು ನೀಮು ಅಂದ್ರೆ... ಬೇಕಾಪ್ ಕಾಯಿದ್ ಬಂದ್ರೂ..." ಅನ್ನುತ್ತ ಹೊನ್ನ ಉಡದಾರಕ್ಕೆ ಕತ್ತಿ ಸಿಕ್ಕಿಸಿದ.

\+ \+ \+

ಅದನ್ನೆಲ್ಲ ಕೇಳಿ ರೈತ ಸಂಘದ ಸಕ್ರೆಟರಿ ನಕ್ಕು ಬಿಟ್ಟ. "ಜೋರು ಮಾಡಿದರೆ ಬೇಳೆ ಬೇಯುವದಿಲ್ಲ ಅನ್ನುವದು ನಿಮ್ಮ ಒಡೆಯರಿಗೆ ಗೊತ್ತಾಗಿದೆ. ಅದಕ್ಕೇ ದೇವರ ಭೀತಿ, ಅಜ್ಜಂದಿರ ಶಾಂತಿ— ಈ ಪುಂಗಿ ಊದಹತ್ತಿದ್ದಾರೆ. ಸರ್ವಥಾ ಅದರ ಬೆಲ್ಲದಂಥ ಮಾತಿಗೆ ಬಲಿ ಬೀಳಬೇಡಿ. [ಕಾಯಿದೆ ಬಂದಾಗಲೂ ನೀವು ಕಣ್ತೆರೆದು ನೋಡದೆ ಹುಂಬರಂತೆ ಭಿಡೆಗೆ ಬಿದ್ದು ಕುಳಿತರೆ ನಿಮ್ಮ ಗತಿ ಎಂದೂ ಸುಧಾರಿಸದು. ಮನೆ ದೇವರು, ಗ್ರಾಮದೇವರು ಚೌಡಿ, ಮಾಸ್ತಿ —ಯಾವದೂ ನೀವು ಹೊಟ್ಟೆ ತುಂಬ ಉಂಡು ಒಡೆಯರಂತೆ ಸುಖವಾಗಿ ಬಾಳಿದರೆ ನಿಮ್ಮನ್ನು ಪೀಡಿಸುವದಿಲ್ಲ..:" ಎಂದು ಮುಂತಾಗಿ ಒಂದು ಒಂದೂವರೆ ತಾಸು ರೈತರಿಗೆ ತಿಳಿ ಹೇಳಿ ಅವರ ಮನಸ್ಸನ್ನು ಧೃಢಪಡಿಸಿದ.

ಹೊನ್ನನು ಸಂಘಕ್ಕೆ ಸೇರಿ ಎಲ್ಲರಂತೆ ನಡೆಯಹತ್ತಿದರೂ ಅವನ ಮನಸ್ಸು ಮಾತ್ರ ಹೊಯ್ದಾಡಹತ್ತಿತು. ಮಲಗಿದಾಗೆಲ್ಲ ಅವನಿಗೆ ಚೌಡಿ, ಮಾಸ್ತಿಗಳೇ ಕಾಣಹತ್ತಿದವು. ಕನಸಿನಲ್ಲಿ ಅವನ ಅಜ್ಜ ಮುತ್ತಜ್ಜಂದಿರು ಬಂದು ಬೆದರಿಸಿದಂತೆ, ಹೆಗಡೆಯವರ ಪಿತೃಗಳು ಬಂದು ಬೈದಂತೆ ಕಂಡಿತು. ಇದರ ಪರಿಣಾಮವಾಗಿ ಕಾಲಿಗೆ ಒಂದು ಮುಳ್ಳು ನಟ್ಟರೂ ಅವನು ಚೌಡಿ ಮಾಸ್ತಿಗಳಿಗೆ ಹಣ್ಣುಕಾಯಿ ಹೇಳಿಕೊಳ್ಳಹತ್ತಿದ. ತಲೆನೋವು ಜ್ವರ ಬಂದರಂತೂ ಹೆಗಡೆಯವರ ಮನೆಗೆ ಹೋಗಿ ತಪ್ಪಾಯಿತೆಂದು ಕಾಲಿಗೆ ಬಿದ್ದು ಬರಲು ಹೊರಡುವೆನೆಂದು ಹೇಳಹತ್ತಿದ. ಅವನ ವಿಚಿತ್ರ ವರ್ತನೆಯನ್ನು ಕಂಡು ಅವನ ಹೆಂಡತಿ ಮಕ್ಕಳು ಹೆದರಹತ್ತಿದರು. ಅವನ ಮಗ ತಿಮ್ಮಪ್ಪ ಮಾತ್ರ "ಅಪ್ಪಾ ಈ ಸಲ ನಮ್ಗೆ ಹೋದ ವರ್ಷ ದುಪ್ಪಟ್ಟು ಭತ್ತ ಕಾಯಿ ಬರ್ತೀದು. ಚುಮ್ಗಿರು. ಮಾಸ್ತೀಗೆ ಒಂದ್ ದೊಡ್ ಪೂಜಿ ಕೊಡ್ಸಿ ಬಿಡ್ವ" ಅನ್ನುತ್ತಿದ್ದ.


ಏನೋ ದೊಡ್ಡ ಅಪರಾಧ ಮಾಡಿದವರಂತೆ ಹೊನ್ನ ಹೆಗಡೆಯವರ ದೃಷ್ಟಿಗೇ ಬೀಳದಂತೆ ಎಚ್ಚರಿಕೆ ತೆಗೆದುಕೊಳ್ಳುತ್ತಿದ್ದ. ಇಂಥ ಹೊಯ್ದಾಟದ ಮನಸ್ಥಿತಿಯಲ್ಲಿಯೂ ಅವನು ಒಂದು ಜಾಣತನದ ಕೆಲಸ ಮಾಡಿದ್ದ; ತನ್ನ ಮಗನಿಗೆ ಮನೆಯ ಯಜಮಾನಿಕೆ ಒಪ್ಪಿಸಿದ್ದ. ಅವನ ಕಾಲವೆಲ್ಲ ದೇವರು ದಿಂಡರಿಗೆ ಹರಿಕೆ ಹೇಳಿಕೊಳ್ಳುವದು, ಒಡೆಯರಿಗೆ ತಾನು ಮಾಡುವ 'ಅನ್ಯಾಯ'ಕ್ಕಾಗಿ ದೇವರಲ್ಲಿ ಕ್ಷಮೆ ಕೇಳುವದು ಇವುಗಳಲ್ಲಿಯೇ ಕಳೆಯಹತ್ತಿತು. ಪಾಪ ಮುದುಕ! ಏನೆಲ್ಲ ವಟಗುಡುತ್ತಿದ್ದ.

x x x

ಪೈರು ಬಂತು! ತಿಮ್ಮಪ್ಪ ಹೇಳಿದಂತೆ ಇಮ್ಮಡಿ ಭತ್ತದ ಪಾಲು ದೊರೆಯಿತು. ಕಾಯಿಯೂ ಹಾಗೇ ಮುದುಕ ತಂದೆಗೆ ತಿಮ್ಮಪ್ಪ "ಈಗ ಬೇಕಾದ್ರೆ ಚೌಡಿ, ಮಾಸ್ತೀಗೆಲ್ಲಾ ಪಾಯ್ಸ ದ್ಪೂಜಿ ಕೊಡು!" ಎಂದು ನೆನಪು ಮಾಡಿಕೊಟ್ಟ. ತನ್ನ ಮನಸ್ಸು ಶಾಂತವಾಗುವವರೆಗೂ ಹೊನ್ನ ಪೂಜೆ ಮಾಡಿಸಿದ. ಪಾಯಸ ಸುರಿಯುವವರು ತಾವೇ ಎಂದು ತಿಮ್ಮಪ್ಪನು ಮರೆತು ಹೋದ ಹರಕೆಗಳನ್ನೆಲ್ಲ ನೆನಪು ಮಾಡಿಕೊಟ್ಟ. ಪೂಜೆಗಳಿಗೆಲ್ಲ ಬೇಕಾಗುವಷ್ಟು ಭತ್ತ, ಕಾಯಿ ಕೊಡಿಸಿದ್ದಕ್ಕಾಗಿ ಹೊನ್ನ 'ಕಾಯ್ದೆ'ಗೆ ಕೈ ಮುಗಿದ.

ಒಂದು ದಿನ ಅವನಿಗೆ ಹೆಗಡೆಯವರ ಭೆಟ್ಟಿಯಾಯಿತು "ಏನ್ಮಾಡೂದು ಪಡ್ಯಾ? ಈ ಮಕ್ಳು ನನ್ಮಾತೇ ಕೇಳುದಿಲ್ಲ. ನನ್ಗಂತೂ ಈ ಹೊಸಾ ನಮೂನೆಯೆಲ್ಲಾ ಸೇರೂದಿಲ್ಲ. ಈ ಮನ್ಸೇ ಬೇಡ ನನ್ಗೆ ನಿಮ್ ಮನೆಲೇ ಬಂದು ಕೈಲಾಗೂ ಕೆಲ್ಸಾ ಮಾಡ್ತಾ ಇದ್ಬಿಡ್ತೆ" ಅಂದ ಹೊನ್ನ. ಮುದುಕನ ಬುದ್ಧಿವಂತಿಕೆಯ ಮಾತಿಗೆ ಹೆಗಡೆಯವರು ಅಬ್ಬ! ಅಂದುಕೊಂಡರು. ಅವನನ್ನು ಕೊಂದುಬಿಡುವಷ್ಟು ಸಿಟ್ಟು ಬಂದಿತ್ತು ಅವರಿಗೆ ಆದರೆ ಏನು ಮಾಡಲು ಬರುವಂತಿದ್ದಿಲ್ಲ. ತಮ್ಮ ಹಿಂದಿನ ಧಾಟಿಯಲ್ಲಿಯೇ "ನೀನೂ ಮುದುಕನಾದಿ ಹೊನ್ನ, ಮಕ್ಕಳು ನಿನ್ನ ಮಾತು ಕೇಳುವದಿಲ್ಲ. ಆಗಲಿ ಬಿಡು. ನೀನು ಎಂದಿನಂತೆ ಪ್ರೀತಿಯಿಂದ ನಡೆದುಕೊಳ್ಳುತ್ತಿದ್ದೀ ಇದೇ ಮುಖ್ಯ. ಯಾವುದು ಏನೇ ಆದರೂ ನಮ್ಮ ನಿಮ್ಮ ಮನಸ್ಸು ಕೆಡಬಾರದು. ಅಷ್ಟೆ" ಅಂದರು "ಛೆ. ಅದೆಲ್ಲಾ ಕೆಡೂಕೆ ಏನ್ರ ಅದು? ನಾಮು ನೀಮು ಇಟ್ಟ್ ವರ್ಷ ಬರ್ಲಿಲ್ರ? ಗದ್ದಿ, ತೋಟ—ಇದ್ಕೆ ನಂ ನಿಂ ಸಂಬಂಧ ಕೆಡೂದ್ ಹೇಗ್ರ? ನಾಮು ನೀಮು...?" ಮುದುಕನಿಗೆ ಒಳಗೊಳಗೇ ನಗೆ. ಅವನು ಬಾಯಿಯಲ್ಲಿ ತುಂಬಿಕೊಂಡ ಕವಳ ತೂಪ ಬೇಕಾಯಿತು.

—ನಿಜಯಾ



ಆರೋಗ್ಯ ಸಂಗ್ರಾಮ

ಲೇಖಕರು: ಸರ್. ಫೆಡರಿಕ್ ಇ. ಜೇಮ್ಸ

ಭಾರತ ಸರಕಾರವು ಸಾರ್ವಜನಿಕ ಆರೋಗ್ಯ ಸಮಿತಿಯೊಂದನ್ನು ನಿಯಮಿಸಿದ್ದು ಈ ಪುಸ್ತಕದ ಲೇಖಕರು ಆ ಸಮಿತಿಯ ಓರ್ವ ಸದಸ್ಯರಾಗಿದ್ದಾರೆ. ಇಂತಹ ಯೋಗ್ಯತಾ ಸಂಪನ್ನರು ಬರೆದ ಈ ಸಣ್ಣ ಪುಸ್ತಕದಲ್ಲಿ ಪ್ರತಿಪಾದಿತವಾದ ವಿಷಯಗಳು ಬಹಳ ತಿಳಿತಿಳಿಯಾಗಿವೆ. ಹೇಳಿದ ಮುಖ್ಯ ಮಾತುಗಳಿಗೆಲ್ಲ ಸ್ಫುಟವಾದ ಚಿತ್ರಗಳಿವೆ. ಈ ಚಿತ್ರಗಳನ್ನಷ್ಟೇ ನೋಡಿದರೂ ನಿರೂಪಿತ ವಿಷಯವೆಲ್ಲ ಓದುವ ಮೊದಲೇ ಗೊತ್ತಾಗುವಂತುಂಟು. ಅನ್ನ, ನೀರು, ಕಸ, ಕೊಳೆ, ರೋಗ ಜಂತುಗಳ ಉತ್ಪತ್ತಿ, ವಾಸಕ್ಕೆ ಯೋಗ್ಯವಾದ ಮನೆಗಳು ಮೊದಲಾದ ಅನೇಕ ಮಾತುಗಳ ಬಗ್ಗೆ ಬಹಳ ಕಲಿಯದ ಹಳ್ಳಿಗರಿಗೂ ತಿಳಿವಂತಹ ಸುಲಭ ಭಾಷೆಯಲ್ಲಿ ವಿವೇಚನೆಯುಂಟು. ಮಾಧ್ಯಮಿಕ ಶಾಲೆಯ ೩ನೆಯ ೪ನೆಯ ವರ್ಗದ ವಿದ್ಯಾರ್ಥಿಗಳಿಗೆ ಇದು ಒಳ್ಳೆಯ ಪಠ್ಯ ಪುಸ್ತಕವಾಗಬಹುದು. ಮುದ್ರಣ ಚಿತ್ರಣ ಪುಟ ಸಂಖ್ಯೆ ಇವುಗಳ ಮಾನದಿಂದ ಈ ಪುಸ್ತಕಕ್ಕಿಟ್ಟ ಒಂದು ರೂಪಾಯಿಯ ಬೆಲೆ ತೀರ ಅಲ್ಪವೇ. ಶಾಲೆಯ ಹುಡುಗರೂ ವಾಚನಾಲಯಗಳೂ ಅವಶ್ಯವಾಗಿ ಸಂಗ್ರಹಿಸತಕ್ಕ ಪುಸ್ತಕ. ಕೆಲ ಚಿತ್ರಗಳಲ್ಲಿ ವಿವರ ಇಂಗ್ಲೀಷಿನಲ್ಲಿರದೆ ಕನ್ನಡದಲ್ಲಿದ್ದರೆ ನೆಟ್ಟಗಿತ್ತು.

ಉತ್ತರ ರಾಮಾಯಣದ ಕಥಾಚಿತ್ರ

ಲೇಖಕರು: ಎನ್. ಎಸ್. ವೀರಪ್ಪ

ಈ ಕಥೆಯ ಬಿತ್ತರಣೆಯು ಪ್ರಾಮುಖ್ಯವಾಗಿ ಭವಭೂತಿಯ 'ಉತ್ತರ ರಾಮಚರಿತ' ಎಂಬ ಸಂಸ್ಕೃತ ನಾಟಕವನ್ನು ಆಧರಿಸಿದೆ. ಇದನ್ನು ಬರೆಯುವಾಗ ಉಚಿತವಾದ ಬದಲಾವಣೆ ಮಾಡಿಕೊಂಡಿರುವದಾಗಿ ಲೇಖಕರು ಮುನ್ನುಡಿಯಲ್ಲಿ ಹೇಳಿದ್ದಾರೆ; ಈ ಕೃತಿಯು ಉತ್ತರ ರಾಮಚರಿತದ ಕನ್ನಡದ ವಚನಾನುವಾದವಲ್ಲವೆಂದೂ ನುಡಿದಿದ್ದಾರೆ. ಆ ಮೂಲ ಗ್ರಂಥವನ್ನು ಇದ್ದಕ್ಕಿದ್ದಂತೆ ಕನ್ನಡದಲ್ಲಿ ಇಳಿಸಿದ್ದರೆ ಅದೊಂದು ಬಗೆಯೇ ಬೇರೆಯಾಗಿರುತ್ತಿತ್ತು. ಆದರೆ ಲೇಖಕರು ಇಲ್ಲಿ ಕಥಾಂಶವನ್ನಷ್ಟೇ ಹೀರಿ ಸ್ವಾರಸ್ಯವಾಗಿ ಕನ್ನಡಿಗರ ಮುಂದಿರಿಸಿದ್ದಾರೆ. ಸಂಸ್ಕೃತದ ಸಾಹಿತ್ಯ ಸಂಪತ್ತು ಕನ್ನಡಕ್ಕೆ ಸಾರರೂಪವಾಗಿ ದೊರೆತಷ್ಟು ಬೇಕು. ಲೇಖಕರು ಈ ಕೊರತೆಯನ್ನು ಅಣುವಾದರೂ ನೀಗಿಸಿದ್ದಾರೆ. ಕನ್ನಡದಲ್ಲಿ ಬಾಲ ಸಾಹಿತ್ಯವೇ ಇಲ್ಲ. ಇಂತಹ ಬರಹಗಳು ಸ್ತ್ರೀಯರಿಗೂ ಬಾಲಕರಿಗೂ ಉಪಯುಕ್ತವಾಗಲು ಅಡ್ಡಿಯಿಲ್ಲ. ಶೈಲಿ ಸಹಜವಾಗಿದೆ ಭಾಷೆ ಸುಲಭವಾಗಿದ. ಶ್ರೀ. ವೀರಪ್ಪನವರಿಂದ ಈ ಬಗೆಯ ಸಾಹಿತ್ಯ ಇನ್ನೂ ಹೆಚ್ಚಲಿ.

ಸಾಹಿತ್ಯ ಸಮಿತಿ ಪತ್ರಿಕೆ

(ಇಂಗ್ಲಿಷ ಕನ್ನಡ ತ್ರೈಮಾಸಿಕ)

ಧಾರವಾಡದ ಲಿಂಗಾಯತ ವಿದ್ಯಾಭಿವೃದ್ಧಿಯ ಸಂಸ್ಥೆಯ ಪರವಾಗಿ ಹೊರಟ ೭ನೆಯ ಸಂಪುಟದ ೧, ೨ ಸಂಯುಕ್ತ ಸಂಚಿಕೆಯಿದು. ಕನ್ನಡದಲ್ಲಿಯೂ ಇಂಗ್ಲೀಷಿನಲ್ಲಿಯೂ ಉಪಯುಕ್ತ ಲೇಖನಗಳಿವೆ. ಭಗವದ್ಗೀತೆಯು ಶೈವ ಸಂಪ್ರದಾಯದ ಗ್ರಂಥ, ಜನಸಾಮಾನ್ಯರಿಗಾಗಿ ಬಸವಣ್ಣನವರ ಚರಿತ್ರೆ, ಜೋತಿಷ್ಯ ಸಂಬಂಧ ವಚನಗಳು, ಚಂದ್ರಭೂಷಣ ಕ್ರಿಯಾಶಕ್ತಿ, ಶಿವಪ್ರಕಾಶ ಸ್ವಾಮಿಗಳು ಇವೇ ಮೊದಲಾದ ಲೇಖನಗಳು ತುಂಬ ಉದ್ಬೋಧಕವಾಗಿವೆ. ಭಾಷಕಕ್ಕೆ ಈಗ ಹೊಸ ಮನ್ವಂತರ ಬಂದಿದೆ. ಇನ್ನು ಮೇಲೆ ಇಂಗ್ಲೀಷಿನ ಪೋಷಣವೇಕೆ? ವಿದ್ಯಾ ಸಂಸ್ಥೆಯಿಂದ ಹೊರಡುವ ಪತ್ರಿಕೆಗಳು ಇಂಗ್ಲೀಷ ಲೇಖನಗಳಿಗೆ ಅಗ್ರಸ್ಥಾನ ಕೊಡುವದನ್ನು ನಿಲ್ಲಿಸುವವೆಂದು ಆಶಿಸುವಾ.

ಜೋಶಿ ಮಹಾರಾಜರ ಜೀವನ ಚರಿತ್ರೆ

ಲೇಖಕರು: ಶ್ರೀ. ಕುಲಕರ್ಣಿ ನಾರಾಯಣ ರಾಯರು, ಎಂ. ಎ. ಎಲ್‌ಎಲ್. ಬಿ.

ಪ್ರಿನ್ಸಿಪಾಲ ಕೆ. ಈ. ಬೋರ್ಡ್ಸ್ ಆರ್ಟ್ಸ್ ಕಾಲೇಜ ಧಾರವಾಡ.

ಪುಟಗಳು ೫೫೨+೧೬ ಬೆಲೆ ೪ ರೂಪಾಯಿ

ಶ್ರೀಮತ್ಪರಮಹಂಸ ಜಗದ್ಗುರು ಶ್ರೀ ಕೈವಲ್ಯಾಶ್ರಮ ಸ್ವಾಮಿಗಳವರ (ಜೋಶಿ ಮಹಾರಾಜ) ಸಚಿತ್ರ ಜೀವನ ಚರಿತ್ರವಿದು. ಮಹಾರಾಜರು ದೇಹವಿಟ್ಟು ೩೫ ವರ್ಷಗಳಾಗಬಂದವು. ಈ ಲೇಖಕರು ಆಗ ಆರೇಳು ವರ್ಷದ ಬಾಲಕರಾಗಿದ್ದರಂತೆ. 'ಜೀವನದಲ್ಲಿ ನಿರಾಶನಾಗಿ ಬೆಳಕನ್ನು ಕಾಣದೆ ಕೊರಗುತ್ತಿರುವಾಗ' ಶ್ರೀಗಳು ತಾವಾಗಿ ಕರುಣೆಯಿಂದ ದಾರಿ ತೋರಿದರಾಗಿಯೂ ಶ್ರೀಗುರು ಪ್ರೇರಣೆಯಿಂದ ಈ ಬೃಹತ್ಪುಸ್ತಕ ಬರೆದುದಾಗಿಯೂ ಲೇಖಕರು ಮುನ್ನುಡಿಯಲ್ಲಿ ಅರಿಕೆಮಾಡಿದ್ದಾರೆ. ಚರಿತ್ರೆ ತುಂಬ ಮನೋರಂಜಕವಾಗಿದೆ. ನಾಸ್ತಿಕರಾದವರನ್ನು ಈ ಬಗೆಯ ಜೀವನ ಚರಿತ್ರಗಳು ಖಂಡಿತ ಆಸ್ತಿಕರನ್ನಾಗಿ ಮಾಡುವವೆಂದು ಧಾರಾಳವಾಗಿ ಹೇಳಬಹುದು. ಶ್ರೀ ಚಿದಂಬರ ಮಹಾರಾಜರ ಪರಂಪರೆಗೆ ಸೇರಿದವರಾದ ಶ್ರೀ ಜೋಶಿ ಮಹಾರಾಜರು ಅನೇಕರ ಉದ್ಧಾರಕ್ಕಾಗಿ ಅವತರಿಸಿ ಬಂದವರೆಂಬುದು ನಿರ್ವಿವಾದವಾಗಿ ಪುಸ್ತಕದುದ್ದಕ್ಕೂ ಪ್ರತಿಪಾದಿಸಲ್ಪಟ್ಟಿದೆ. ಸಾಧಕ ಜೀವಿಗಳು ಇಂತಹ ಮಹಾಪುರುಷರ ಜೀವನದಿಂದ ದಾರಿಗಾಣಬಹುದು. ಭಾಷೆಯೂ ಶೈಲಿಯೂ ನಿರ್ದುಷ್ಟವಾಗಿದ್ದು ಓದಲು ಕುಳಿತರೆ ಮುಂದೇನು ಎಂಬ ಕುತೂಹಲವನ್ನಿರಿಸಿ ಪ್ರಕರಣಗಳು ಮುಗಿಯುತ್ತವೆ. ಗುರುಪ್ರೇರಣೆಯಿಂದ ಲಿಖಿತವಾದ ಈ ಪುಸ್ತಕದಲ್ಲಿ ವಾಕ್ಯವಾಕ್ಯಕ್ಕೂ ಚೈತನ್ಯ ಹರಿದಾಡಿದೆ.

ಶ್ರೀಗಳು ಪೂರ್ವಾಶ್ರಮದಲ್ಲಿ ಕನ್ನಡ ಶಾಲೆಯ ಪ್ರಧಾನಾಧ್ಯಾಪಕರು ಶಾಲೆಯ ಆಡಳಿತದಲ್ಲಿ ಹೆಸರಾಂತವರು. ಆಗಲೂ ಅವರು ಶಿಕ್ಷಣದಲ್ಲಿ ಅಧ್ಯಾತ್ಮವನ್ನು ಬೆರೆಯಿರಿ ಅನುಭವ ದೃಷ್ಟಾಂತಗಳ ಮೂಲಕ ಜನ ಮನವನ್ನು ಆಕರ್ಷಿಸಿದ ಬಗೆ, ಸನ್ಯಾಸಾನಂತರ ಶ್ರೀ ರಾಮದಾಸ ಸ್ವಾಮಿಗಳಂತೆ ವ್ಯವಹಾರ, ಅಧ್ಯಾತ್ಮ ಕೈಗೆ ಕೈ ಹಾಕಿ ಸಾಗುವದು ಹೇಗೆ ಅವಶ್ಯ ಎಂಬುದನ್ನು ತಾವೇ ಇದ್ದು ತೋರಿದ ವಿಧಾನ ಇವು ಎಲ್ಲರೂ ಒಪ್ಪಿ ಮೆಚ್ಚುವಂತಹವಾಗಿವೆ. ಇದರಂತೆ ಇವರ ಇರವಿನಲ್ಲಿ ಶ್ರೀ. ರಾಮಕೃಷ್ಣ ಪರಮಹಂಸರ ಉತ್ಕಟವಾದ ಭಾವಪ್ರವಣತೆಯೂ ತೋರಿಬರುವದು. ಎಲ್ಲರೂ ಪಠಿಸತಕ್ಕ ಪುಸ್ತಕ.

ಹಾಡುವ ಹುಡಿಗೆ

ಬರೆದವರು :- ಶ್ರೀ ಕುಲಕರ್ಣಿ ಬಿಂದುಮಾಧವ, ಪ್ರಕಾಶಕರು— ಶ್ರೀ ಎಸ್. ಬಿ. ಪಾವಟೆ, ಮುಗಳಿದ ಪೈಲು ಹುಬ್ಬಳ್ಳಿ, ಪುಟ ೧೧೪, ಬೆಲೆ ರೂ. ೧೪.

ಇದೊಂದು ಕಥಾ ಸಂಗ್ರಹ. ಇದರಲ್ಲಿ ಪರಿವರ್ತನೆ, ರಕ್ತ ಕಳಚಿತು, ಬೆಳಕು ಮೂಡಿತು, ಗೆಲವು ಹೊಂದು, ಹಾಲು ಪಾಕಿಸ್ತಾನ, ಕೆಟ್ಟ ದಿನ, ಸಾಲದ ಶೂಲ, ಸೋದರ ವಾತ್ಸಲ್ಯ, ಕಳೆಯ ರಾಣಿ, ಹಾಡುವ ಹುಡಿಗೆ; ಎಂಬ ಕಥೆಗಳಿವೆ. "ಹುಡಿಗೆ" ಶಬ್ದ ಗ್ರಾಮ್ಯ. ಇಂಥ ಬಿನ್ನ ಪದ್ಯೋಗಳ ಪ್ರಯೋಗಗಳಿಲ್ಲದಿದ್ದರೆ ಪುಸ್ತಕ ಇನ್ನೂ ಚನ್ನಾಗುತ್ತಿತ್ತು. ಕಥೆಗಳು ಸಾಧಾರಣ ಇವೆ. ಎಲ್ಲರೂ ಓದಬಹುದು.



ಜ್ಯೋತಿಷಿ— ಕೃಷ್ಣಶಾಸ್ತ್ರಿ ಭಡೆ ಭವಿಷ್ಯ ಕಥನ ಆಫೀಸ ಖಡೇಬಜಾರ ಬೆಳಗಾವಿ.

ಜನೇವಾರಿ ೨೫ ರಿಂದ ಫೆಬ್ರುಅರಿ ೧ ರ ವರೆಗೆ

ಮೇಷ

ತಾಯಿ ಮೊದಲಾದ ಹಿರಿಯರಿಗೆ ಬಹಳ ಕ್ಲೇಶ. ಅಲ್ಲದೆ ಅವರೂ ಮತ್ತು ನಿಮ್ಮದು ಪ್ರತಿಯೊಂದು ವಿಷಯದಲ್ಲಿ ಮತಭೇದ. ಹೆಂಡತಿ ಮತ್ತು ಉಳಿದ ಪ್ರಾಪಂಚಿಕ ಸುಖ ಬಹಳ ಉತ್ತಮ. ಮಕ್ಕಳು ದೊಡ್ಡ ಸಾಹಸದ ಕೆಲವು ಕೆಲಸ ಮಾಡುವದರಿಂದ ಜನರು ಅವರನ್ನು ಜಾಹೀರ ರೀತಿಯಿಂದ ಗೌರವಿಸುವರು. ಉದ್ಯೋಗದಲ್ಲಿ ಪ್ರತಿಷ್ಠೆ ಬಹಳ. ಅದರೆ ಪ್ರಗತಿ ಮತ್ತು ದ್ರವ್ಯಲಾಭ ಕಡಮೆಯೆ. ಮಿತ್ರರು ನಿಮ್ಮನ್ನು ನಿರಾಶಾಜನಕವಾಗಿ ತಿರಸ್ಕರಿಸುವರು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯತರಿಂದ ಮಾಡಲ್ಪಡುವ ಮೊಟ್ಟ ಹೇಳಿಕೆಯಿಂದ ಜನರಲ್ಲಿ ಬಹಳ ನಿಂದೆ. ಭೆಟ್ಟಿ ಅನುಕೂಲ. ಅದರೆ ಪ್ರವಾಸ ಮತ್ತು ಪತ್ರವ್ಯವಹಾರ ತೊಂದರೆಯದು. ಅಶ್ವಿನಿಯ ಕೊನೆಯ ೨ ಮತ್ತು ಭರಣಿಯ ಮೊದಲನೆ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೨೮, ೨೯, ೧ ಅನುಕೂಲ.

ವೃಷಭ

ಪ್ರಕೃತಿ ಮತ್ತು ಸ್ತ್ರೀ ಸುಖ ಉತ್ತಮ. ಅದರೆ ಎಲ್ಲರ ಸ್ವಭಾವದಲ್ಲಿ ಬಹಳ ವಿಚಿತ್ರ ಪ್ರೀತಿ ದ್ವೇಷ. ಎಲ್ಲರೂ ಎರಡನೆಯವರನ್ನು ಅಜ್ಞಾನ ಮತ್ತು ಹುಚ್ಚು ಮಾಡುವ ಪ್ರಯತ್ನ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ ಹಾಗು ಕೆಲವೊಂದು ಯಶಸ್ಸಿಗಾಗಿ ಅನಂದಕ್ಕಾಗಿ ಬಹಳ ವೆಚ್ಚ. ಮಿತ್ರರು ಬಂಧು ವರ್ಗದವರು ಮತ್ತು ಮಕ್ಕಳಿಂದ ಭಾವೀ ಹಿತಕ್ಕೆ ಪೋಷಕವಾಗುವಂಥ ಕೃತ್ಯಗಳು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ. ಸ್ಥಾವರದಲ್ಲಿ ಉತ್ಪನ್ನ ಹೆಚ್ಚಳದ ಯೋಜನೆ ಹಾಕುವದರಲ್ಲಿ ಮನಸ್ಸಿಗೆ ಹರ್ಷ ಕಾಣುವದು. ಪ್ರವಾಸಾದಿ ಕೆಲಸವಿಶೇಷ ಉತ್ತಮ. ಕೃತ್ತಿಕೆಯ ಕೊನೆಯ ೨ ಮತ್ತು ರೋಹಿಣಿಯ ಮೊದಲನೆ ೨ ಚರಣಗಳಿಗೆ ಹೆಚ್ಚು ಅನುಕೂಲ. ತಾ. ೨೬, ೨೭ ೩೦ ೩೧ ಅನುಕೂಲ.

ಮಿಥುನ

ಪ್ರಕೃತಿಗೆ ಬಹಳ ಕ್ಲೇಶ ಹೆಂಡತಿಯಿಂದಲೂ ಕೆಲವಿಷಯಗಳಲ್ಲಿ ತಲೆತಿರುಕತನದವರ್ತನೆ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಸಾಮಾನ್ಯ ಸುಮ್ಮ ನಿಂದು ತಿಳಿದುಕೊಂಡವರಲ್ಲಿ ಒಬ್ಬ ವ್ಯಕ್ತಿಯು ಚಿರವಿರಹ ಇಲ್ಲವೆ ವಿಯೋಗವಾಗುವ ಸಂಭವ. ಉದ್ಯೋಗದಲ್ಲಿ ಪ್ರಭುತ್ವ ಇಲ್ಲವೆ ಅಧಿಕಾರದಲ್ಲಿ ಹೆಚ್ಚಳ ಮತ್ತು ಲಾಭ ಕುಂಟ. ಅದರೆ ಪ್ರಕೃತಿದುರಾಗುವಾಗ ಅತಿಶಯ ಮಾನಸಿಕ ತೊಂದರೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ನಿಮ್ಮನೆ ದುಷ್ಟ ಮತ್ತು ವಿಪರೀತ ಬುದ್ಧಿಯಿಂದ ಬಹಳ ತೊಂದಲ. ಮಿತ್ರರಿಂದ ಕೆಲ ಹೆಚ್ಚಳ. ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿಯು ಅನುಕೂಲ. ಅರಿದ್ರೆಯ ಕೊನೆಯ ೨ ಮತ್ತು ಪುನರ್ವಸುವಿನ ಮೊದಲನೆ ೨ ಚರಣಗಳಿಗೆ ತೊಂದರೆ ಕಡಮೆ. ತಾ: ೨೬, ೨೮, ೨೯ ಅನುಕೂಲ.

ಕರ್ಕ

ನಿಮ್ಮ ಮತ್ತು ಹೆಂಡತಿಯ ಆರೋಗ್ಯ ಅನುಕೂಲ. ಆದರೆ ನಿಮ್ಮ ಹಿರಿಯರಿಗೆ ಮೇಲಿಂದ ಮೇಲೆ ಮತಭೇದ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಬಹಳ ಉತ್ತಮ ಮತ್ತು ಮಕ್ಕಳಲ್ಲಿ ಒಳ್ಳೆಯ ಉತ್ಸಾಹ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಉತ್ತಮ ಅದರೆ ಭೆಟ್ಟಿ ಮತ್ತು ಪತ್ರವ್ಯವಹಾರ ತೊಂದರೆಯದು. ಪುಷ್ಯದ ಕೊನೆಯ ೨ ಮತ್ತು ಅಶ್ಲೇಷಾದ ಮೊದಲನೆ ೨ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೨೮, ೨೯, ೩೦, ೧ ಅನುಕೂಲ.

ಸಿಂಹ

ನಿಮ್ಮ ಮತ್ತು ಹೆಂಡತಿಯ ಆರೋಗ್ಯದಲ್ಲಿ ಶಾರೀರಿಕ ಮತ್ತು ಮಾನಸಿಕ ಸ್ವಾಸ್ಥ್ಯ ಕಡಿಮೆ. ಉಳಿದ ಪ್ರಾಪಂಚಿಕ ಪ್ರತಿಯೊಂದು ಮಾತು ಮನಸ್ಸಿನ ವಿರುದ್ಧ. ಉದ್ಯೋಗದಲ್ಲಿ ಪ್ರಗತಿಮತ್ತು ಪ್ರತಿಷ್ಠೆ ಅನುಕೂಲ. ಅದರೆ ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಅನುಕೂಲ. ಅದರೆ ಉದ್ಯೋಗಸ್ಥರಿಗೆ ಮಾತ್ರ ಲಾಭದ ಹೆಸರನಲ್ಲಿ ಸೂಜಿ ಮಿತ್ರತ್ವದಲ್ಲಿ ದೊಡ್ಡ ವಿರೋಧ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಟ್ಟುವದು ಮತ್ತು ಶತ್ರುಗಳ ವಿಪರೀತ ತೊಂದರೆ ಪ್ರವಾಸ ಮತ್ತು ಭೆಟ್ಟಿ ಉತ್ತಮ ಅದರೆ ಪತ್ರವ್ಯವಹಾರ ಅತ್ಯಂತ ತೊಂದರೆ ಕೊಡು, ಮಘಾದ ಕೊನೆಯ ೨ ಮತ್ತು ಪೂರ್ವದ ಮೊದಲನೆ ೨ ಚರಣಗಳಿಗೆ ಹೆಚ್ಚು ತೊಂದರೆ ತಾ. ೨೮, ೨೯, ೨ ಅನುಕೂಲ.

ಕನ್ಯಾ

ಪ್ರಕೃತಿ ಮತ್ತು ಸ್ತ್ರೀಸುಖ ಉತ್ತಮ. ಆದರೆ ಪ್ರಾಪಂಚಿಕ ಎಲ್ಲ ವಿಷಯಗಳಲ್ಲಿ ಹೆಚ್ಚಿಚ್ಚು ಕಿಟಕಿಟ. ಕೆಲವೊಂದು ಅಮೂಲ್ಯ ವಸ್ತು ಕಳೆದುಹೋಗುವ ಇಲ್ಲವೆ ಕಳವಾಗಿ ಹೋಗುವ ಅಂಜಿಕೆ. ಹೆಂಡತಿಯ ಹೊರತು ಮನೆಯಲ್ಲಿಯ ಎಲ್ಲ ಹೆಂಗಸರಗೂಡ ಕಲಹ. ನಿಮ್ಮ ನಿಮ್ಮಲ್ಲಿ ಅಪಶಬ್ದಗಳ ಹೊಡೆತ. ಉದ್ಯೋಗದಲ್ಲಿ ಲಾಭ ಅನುಕೂಲ. ಪ್ರತಿಷ್ಠೆ ಮಧ್ಯಮ. ಅದರೆ ಪ್ರಗತಿ ಕಡಿಮೆ. ಧಂದೆಯವರಿಗಿಂತ ನೋಕರರಿಗೆ ಕೆಲಮಟ್ಟಿಗೆ ಅನುಕೂಲ. ಸ್ವಪ್ನ ಭಯಸೂಚಕ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಸಿಕ್ಕುವ ಅಲ್ಪ ಯಶಸ್ಸಿಗಾಗಿ ವಿಪರೀತ ವೆಚ್ಚ ಮತ್ತು ಶ್ರಮತೆಗೆದುಕೊಳ್ಳಬೇಕಾದತೊಂದರೆ. ಮಿತ್ರರು ಉಪದ್ವ್ಯಾಪ ನಡೆಸುವರು. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಸ್ವಲ್ಪ ಅನುಕೂಲ. ಉತ್ತರಾದ ಕೊನೆಯ ೨ ಮತ್ತು ಹಸ್ತಾದ ಮೊದಲನೆ ೨ ಚರಣಗಳಿಗೆ ಹೆಚ್ಚು ತೊಂದರೆ. ತಾ. ೨೬, ೨೭, ೩೦ ಅನುಕೂಲ.

ತುಲಾ

ಪ್ರಕೃತಿ ಮತ್ತು ಸ್ತ್ರೀಸುಖ ಉತ್ತಮ. ಪ್ರಾಪಂಚಿಕ ಎಲ್ಲ ಕೆಲಸಗಳು ಮನಸಿನಂತೆ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಕಷ್ಟಸಾಧ್ಯ ಮತ್ತು ಪ್ರತಿಷ್ಠೆ ಉತ್ತಮ. ಗುಪ್ತ ಶತ್ರುಗಳಿಂದಲೆ ಬಹಳ ತೊಂದರೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ ಮಿತ್ರರಿಂದ ಏನೇನೋ ಭುಲಥಾಪ ಹಾಕಿ ಮೈಮೇಲೆ ತಂದುಕೊಳ್ಳಬೇಕಾದ ಪ್ರಸಂಗ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರವೂ ಅನುಕೂಲ. ಸ್ವಾತಿಯ ಕೊನೆಯ ೨ ಮತ್ತು ವಿಶಾಖಾದ ಮೊದಲನೆ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೨೬, ೨೭, ೨೮, ೧ ಅನುಕೂಲ.

ವೃಶ್ಚಿಕ

ಪ್ರಕೃತಿ ಉತ್ತಮ. ಮಕ್ಕಳಲ್ಲಿ ಉತ್ಕರ್ಷ. ಹೆಂಡತಿ ಮತ್ತು ಪ್ರಾಪಂಚಿಕ ಸುಖ ಮನಸಿನಂತೆ. ಆದರೆ ಬಂಧುವರ್ಗದವರೊಡನೆ ಮತ್ತು ವರಿಷ್ಠರು ಇಲ್ಲವೆ ಆಶ್ರಯದಾತರೊಡನೆ ವಿರೋಧ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಅತಿ ಉತ್ತಮ. ಉದ್ದಿಮೆದಾರರ ಪ್ರತಿಷ್ಠೆ ಅನುಕೂಲ. ಅದರೆ ನೋಕರರಿಗೆ ಅಪ್ರತಿಷ್ಠೆಯ ಅಂಜಿಕೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅಪೇಕ್ಷೆಗಿಂತ ಹೆಚ್ಚು ಯಶಸ್ಸು. ಮಿತ್ರಸುಖ ಉತ್ತಮ. ಒಳ್ಳೆ ವಾಹನ ಯೋಗ. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ. ಅನುರಾಧೆಯ ಕೊನೆಯ ೨ ಮತ್ತು ಜ್ಯೇಷ್ಠಾದ ಮೊದಲನೆ ೨ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೨೬, ೨೭, ೨೮, ೩೦ ಅನುಕೂಲ.

ಧನು

ಪ್ರಕೃತಿ ಒಂದು ಕ್ಷಣ ಅನುಕೂಲವಿದ್ದರೆ ಮತ್ತೊಂದು ಕ್ಷಣಕ್ಕೆ ಕೆಟ್ಟಂತೆ ಎನಿಸುವದು. ಹೆಂಡತಿ ಮತ್ತು ಮಕ್ಕಳಿಂದ ಮೇಲಿಂದ ಮೇಲೆ ಅಪ್ರಿಯ ವರ್ತನ. ನೆರೆಯವರೊಡನೆ ಯಾವುದೋ ಕಾರಣದಿಂದ ಬಹಳ ವಿರೋಧ. ಉದ್ಯೋಗದಲ್ಲಿ ಪ್ರಗತಿಯಲ್ಲಿ ಅನಪೇಕ್ಷಿತ ಅಡಚಣೆಯಿಂದ ಬಹಳ ತೊಂದರೆ. ಅದರೆ ಪ್ರತಿಷ್ಠೆ ಮತ್ತು ಲಾಭವೂ ಮನಸಿನಂತೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಕಾಯದೆ ಇಲ್ಲವೆ ಸಂಪ್ರದಾಯದ ದೃಷ್ಟಿಯಿಂದ ಉಭಯ ಪಕ್ಷಗಳ ತೊಂದರೆ ಅಷ್ಟೇ. ಮಿತ್ರ ಸುಖ ಅನುಕೂಲ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಮೂಲಾದ ಕೊನೆಯ ೨ ಮತ್ತು ಪೂರ್ವಾಷಾಢಾದ ಮೊದಲನೆ ೨ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೩೦, ೩೧, ೧ ಅನುಕೂಲ.

ಮಕರ

ಪ್ರಕೃತಿಗೆ ಉಷ್ಣತೆಯಿಂದ ಪೀಡೆ. ಪತ್ನಿಯು ಯಾವಾಗಲೂ ವಕ್ರವಾಗಿಯೆ ವರ್ತಿಸುವಳು. ಅದರೆ ಮಕ್ಕಳೊಡನೆ ಛಾಜೀಲ ಪ್ರೇಮದಿಂದ ವರ್ತಿಸುವಳು. ಮನೆಯಲ್ಲಿಯ ವೃದ್ಧರ ಅಪಮಾನವಾಗುವಂತೆ ಕೆಲ ಮಾತು ಆಗ್ರಹದಿಂದ ಮಾಡಲ್ಪಡುವ ಸಂಭವ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಅಂದಾಜಿಗಿಂತಲೂ ಹೆಚ್ಚು. ಮಿತ್ರ ಸುಖ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯಪಕ್ಷಗಳಲ್ಲಿ ಸಮಾನ ಸ್ಥಿತಿ. ಪ್ರವಾಸಾದಿ ಕೆಲಸ ಸುಖಕರ. ಉತ್ತರಾಷಾಢಾದ ಕೊನೆಯ ೨ ಮತ್ತು ಶ್ರವಣಾದ ಮೊದಲನೆ ೨ ಚರಣಗಳಿಗೆ ಪ್ರಾಪಂಚಿಕ ತೊಂದರೆ ಹೆಚ್ಚು. ತಾ. ೩೦, ೩೧, ೧ ಅನುಕೂಲ.

ಕುಂಭ

ಪ್ರಕೃತಿಗೆ ಮಾನಸಿಕ ತೊಂದರೆ ಹೆಚ್ಚು. ಹೆಂಡತಿಯ ವರ್ತನೆಯು ಮನಸ್ಸಿಗೆ ಹತಾಶನ ನ್ನುಂಟುಮಾಡುವಂತಹದು. ಮನಸ್ಸಿಗೆ ಹುರುಹುರು ಎನಿಸುವಂಥ ಕೆಲ ಕೃತ್ಯಗಳನ್ನು ಮಕ್ಕಳು ಮಾಡುವ ಸಂಭವ. ಉಳಿದ ಅವಾಂತರ ಪ್ರಾಪಂಚಿಕ ಸುಖ ಅನುಕೂಲ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭವೂ ಆಶ್ಚರ್ಯವೆನಿಸುವಂತೆ ಉತ್ತಮ. ಅದರೆ ಕೆಲವೊಂದು ಸಹಜಸಾಧ್ಯವಾಗುವಂತೆ ನಿಮ್ಮ ಕೆಲಸದಲ್ಲಿ ಇನ್ನುಡಿ ಮುಮ್ಮುಡಿ ವೆಚ್ಚವಾಗುವದರಿಂದ ಮನಸ್ಸು ಖಿನ್ನ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳು ಸ್ವೇಚ್ಛಾ ವೃತ್ತಿಯಿಂದ ವರ್ತಿಸುವದು. ಪತ್ರ ವ್ಯವಹಾರ ಅತಿ ತೊಂದರೆಯದು. ಅದರೆ ಭೆಟ್ಟಿ ಮತ್ತು ಪ್ರವಾಸ ಅನುಕೂಲ, ಶತತಾರಿಕೆಯ ಕೊನೆಯ ಮತ್ತು ಪೂರ್ವಾಭಾದ್ರಪದದ ಮೊದಲನೆ ೨ ಚರಣಗಳಿಗೆ ತೊಂದರೆ ಕಡಿಮೆ. ತಾ ೨೮, ೨೯, ೧ ಅನುಕೂಲ.

ಮೀನ

ಪ್ರಕೃತಿ ಮತ್ತು ಸ್ತ್ರೀ ಸುಖ ಉತ್ತಮ. ಅದರೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಕಡಿಮೆ. ಪರ ಸ್ತ್ರೀಯಬಗ್ಗೆ ಅಸಕ್ತಿಯ ವರ್ತನೆ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭವೂ ಉತ್ತಮ. ಚೈನಿ ಮತ್ತು ಮನೋರಂಜನದ ಕೆಲಸದಲ್ಲಿ ನೀರಿನಂತೆ ಹಣ ವೆಚ್ಚ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು. ಮಿತ್ರತ್ವದಲ್ಲಿ ವಿರೋಧ. ಮಾತಾಡುವದರಲ್ಲಿ ಬೀಭತ್ಸತೆ ಹೆಚ್ಚು. ಪ್ರವಾಸಾದಿ ಕೆಲಸ ಅನುಕೂಲ. ಉತ್ತರಾಭಾದ್ರಪದದ ಮೊದಲನೆ ೨ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೨೬, ೨೭, ೩೦, ೩೧ ಅನುಕೂಲ.

ಈ ಪತ್ರಿಕೆಯು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ ಲೋಕಶಿಕ್ಷಣ ಟ್ರಸ್ಟದ ಪರವಾಗಿ ಹ. ರಾ. ಪುರೋಹಿತಯವರಿಂದ ಮುದ್ರಿತವಾಗಿ ಪ್ರಕಟವಾಯಿತು.

ಜೀವನ ಮತ್ತು ವಿಜ್ಞಾನ

ಕಾಜಿನ ಮೇಲೆ ಚಿತ್ರಗಳನ್ನು ತೆಗೆಯುವ ವಿಧಾನ

ಲೇ-ಶ್ರೀ ವೆಂಕೋಬಾಚಾರ್ಯ ಉಪಾಧ್ಯಾಯ ಎಂ. ಎಸ್. ಸಿ.

ಯಾವುದಾದರೊಂದು ಕಾಜಿನ ಮೇಲೆ ಚಿತ್ರ ತೆಗೆಯುವದಕ್ಕಿಂತ ಮೊದಲು, ಅದನ್ನು ಸ್ವಚ್ಛ ಮಾಡುವದು ಅತ್ಯಗತ್ಯ. ಇಲ್ಲದಿದ್ದರೆ ಅಕ್ಷರಗಳು ಅಥವಾ ಚಿತ್ರಗಳು ಮಬ್ಬಾಗಿ ಕಾಣುತ್ತವೆ. ಸ್ವಚ್ಛ ಮಾಡುವದರ ಸಲುವಾಗಿ ಸುಣ್ಣದ ಹರಳನ್ನು ನೀರಿನಲ್ಲಿ ಕುದಿಸಿ, ಕಾಜಿನ ಮೇಲೆ ಹಚ್ಚಿ ಎರಡು ಮೂರು ಗಂಟೆಗಳ ವರೆಗೆ ಇಡಬೇಕು. ನಂತರ ಅದನ್ನು ಒಣಗಿದ ಮೆತ್ತನ್ನ ಬಟ್ಟೆಯಿಂದ ಸ್ವಚ್ಛ ಮಾಡಿದರೆ ಅದು ಚಿತ್ರಗಳನ್ನು ತೆಗೆಯುವದಕ್ಕೆ ಯೋಗ್ಯವಾಗುತ್ತದೆ.

ಸ್ವಚ್ಛ ಮಾಡಿದ ಕಾಜನ್ನು ಉರಿಯುವ ಕಲ್ಲಿದ್ದಲಿಯ ಎದುರಿನಲ್ಲಿ ಎಚ್ಚರಿಕೆಯಿಂದ ಸ್ವಲ್ಪ ಕಾಯಿಸಿ ಅದರ ಸುತ್ತಲೂ ಮೇಣವನ್ನು ಒಂದೇ ರೀತಿಯಾಗಿ ಹಚ್ಚಬೇಕು. ಹಚ್ಚುವುದು ಮುಗಿದ ಮೇಲೆ ಕಾಜನ್ನು ಉರಿಯಿಂದ ದೂರ ಮಾಡಿದರೆ ಮೇಣವು ಕಾಜಿನ ಮೇಲೆ ಅತಿಬೇಗನೆ ಅಂಟಿಕೊಂಡುಬಿಡುತ್ತದೆ.

ಹೀಗೆ ಅಂಟಿಕೊಂಡ ಮೇಣದಲ್ಲಿ ಬೇರೆ ಬೇರೆ ಅಳತೆಯ ಚೂಪಾದ ಪತ್ರಿಗಳಿಂದ ಅಕ್ಷರಗಳನ್ನಾಗಲಿ ಅಥವಾ ಚಿತ್ರಗಳನ್ನಾಗಲಿ ತೆಗೆಯಬೇಕು. ಚಿತ್ರಗಳನ್ನು ತೆಗೆಯುವಾಗ ಕೈ ಮೇಣಕ್ಕೆ ತಗಲದಂತೆ ನೋಡಿಕೊಳ್ಳುವುದು ಅವಶ್ಯಕ. ಏಕೆಂದರೆ ಕೈಯಲ್ಲಿದ್ದ ಸೆಕೆಯಿಂದ ಮೇಣವು ಕರಗಿ ಚಿತ್ರಗಳು ಕೆಟ್ಟುಹೋಗುವ ಸಂಭವ ಉಂಟು. ಚಿತ್ರಗಳನ್ನು ತೆಗೆದ ಮೇಲೆ ಅದೇ ಭಾಗದ ತೆಳ್ಳನ್ನ ಕುಂಚಿನ ಸಹಾಯದಿಂದ ಹೈಡ್ರೋ ಫ್ಲೋರಿಕ್ ಅಮ್ಲ (Hydro fluoric Acid) ವನ್ನು ತುಂಬಬೇಕು. ಕೆಲವೇ ನಿಮಿಷಗಳಲ್ಲಿ ಈ ಅಮ್ಲವು ಕಾಜನ್ನು ತಿನ್ನುವುದಕ್ಕೆ ಪ್ರಾರಂಭ ಮಾಡುತ್ತದೆ. ಚಿತ್ರಗಳು ನಮಗೆ ಬೇಕಾದ ಹಾಗೆ ಸಾಕಷ್ಟು ಅಗಲವಾದಕೂಡಲೆ, ಕಾಜನ್ನು ನೀರಿನಿಂದ ತೊಳೆದು ಪುನಃ ಬೆಚ್ಚಗೆ ಮಾಡಬೇಕು. ಇದರಿಂದ ಉಳಿದ ಮೇಣವು ಕೂಡ ಕರಗಿ ಅಕ್ಷರಗಳು ಅಥವಾ ಚಿತ್ರಗಳು ಸ್ಪಷ್ಟವಾಗಿ ಕಾಣಿಸಿಕೊಳ್ಳುತ್ತವೆ. ಹೈಡ್ರೋ ಫ್ಲೋರಿಕ್ ಅಮ್ಲವು ಒಂದು ವಿಷವುಳ್ಳ ಅಮ್ಲವಿದ್ದ ಕಾರಣ ಅದನ್ನು ಉಪಯೋಗಿಸುವಾಗ ಬಹಳ ಜಾಗರೂಕರಾಗಿರಬೇಕು.

ಕಾಜಿನ ಮೇಲೆ ಚಿತ್ರಗಳನ್ನು ಕೆತ್ತುವಾಗ ಹೈಡ್ರೋ ಫ್ಲೋರಿಕ್ ಅಮ್ಲದ ಬದಲಾಗಿ ಫ್ಲೋರಾ ಸ್ಪಾರ್ (Flour spar) ಕೂಡ ಉಪಯೋಗವಾಗುತ್ತದೆ. ಇದರ ಸಲುವಾಗಿ ಸೀಸ (Lead) ದ ಬಟ್ಟಲದಲ್ಲಿ ಫ್ಲೋರ ಸ್ಪಾರ್‌ದ ಪುಡಿಯ ಮೇಲೆ ನಿರ್ಜಲ ಗಂಧಕಾಮ್ಲ (Strong sulphuric Acid) ವನ್ನು ಹಾಕಿ ಬೆಚ್ಚಗೆ ಮಾಡಬೇಕು. ಇದರಿಂದ ಒತ್ತರದ ಹೊಗೆ ಹೊರಟು ಮೇಣದ ಮೇಲೆ ಯಾವದೂ ಪರಿಣಾಮ ಮಾಡದೆ ಕಾಜನ್ನಷ್ಟೆ ತಿಂದು ಬಿಡುತ್ತದೆ. ಈ ಹೊಗೆಯಲ್ಲಿ ವಿಷದ ಪ್ರಮಾಣ ಹೆಚ್ಚಿದ್ದ ಕಾರಣ, ಬಹಳ ಜಾಗರೂಕರಾಗಿರಬೇಕು. ಒಂದು ವೇಳೆ ಕಣ್ಣಿಗೆ ತಗಲಿದರೆ ಕಣ್ಣುಗಳು ಹೋಗುವುದೂ ಉಂಟು.